

# ಗತಕಾಲದಿಂದ ವಿಮೋಚನೆ

ಅಖಿಲ ಭಾರತ ಪತ್ರಿಕೆ
ಡಿಸೆಂಬರ್ 2014

ಬೆಲೆ : 15/–



*"Do not give way, hold tight.*
*It is when everything seems lost*
*that all is saved."*

\- The Mother

# ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org

## ಪರಿವಿಡಿ

### "ಗತಕಾಲದಿಂದ ವಿಮೋಚನೆ"

**(ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ಬರಹಗಳಿಂದ ಆಯ್ದ ಭಾಗಗಳು)**

**ಅನು : ಡಾ. ಕೆ.ಎಸ್. ಆಮೂರ**

ಶ್ರೀ ಅರವಿಂದರ ಪ್ರವಾದಿಯಂತಹ ಕವಿತೆ 3

ಗತಕಾಲದ ಅರುಣೋದಯಗಳು ಹಾಗೂ ಭವಿಷ್ಯದ ಮಧ್ಯಾಹ್ನಗಳು 4

ಗತಕಾಲದ ರೂಪಗಳನ್ನು ಕಾಲಗತಿಯ ಪ್ರವೃತ್ತಿ ಹಾಳುಮಾಡುತ್ತದೆ 6

ಗತಕಾಲದ ಉಪಯುಕ್ತತೆ 14

ಗತಕಾಲದ ಚಾರಿತ್ರ್ಯದ ರೂಪತಾಳುವಿಕೆಗಳನ್ನು ಬದಲು ಮಾಡುವುದು 19

**ಅನು : ಶ್ರೀ ವೀರೇಂದ್ರ ಸಿಂಪಿ**

ಗತಕಾಲಕ್ಕೆ ಅಂಟಿಕೊಳ್ಳುವುದು ಬೇಡ 32

ಭವಿಷ್ಯದತ್ತ ಮಾರ್ಗ 38

**ಅನು : ಶ್ರೀ ಪುರುಷೋತ್ತಮ ಗಲಗಲಿ ಮತ್ತು ಶ್ರೀ ಆರ್.ಕೆ. ಕುಲಕರ್ಣಿ**

ಗತಕಾಲದ ದೋಷಗಳು ಹಾಗೂ ತಪ್ಪುಗಳೊಡನೆ ವ್ಯವಹರಿಸುವುದಕ್ಕಾಗಿ ಸೂತ್ರಗಳು 45

**ವಾರ್ತಾಪತ್ರ** 50

... ರೂಪಗಳಲ್ಲಿ ಅಭಿವೃದ್ಧಿ ಹೊಂದುವುದು ಪರಿಣಾಮಕಾರಿ ಪ್ರಕಟಣೆಯ ಆಜ್ಞಾರ್ಥಕ ನಿಯಮ, ಆದಾಗ್ಯೂ ಎಲ್ಲ ಸತ್ಯ ಮತ್ತು ಆಚರಣೆ ಇವುಗಳನ್ನು ಅತಿಕಟ್ಟುನಿಟ್ಟಾಗಿ ಸೂತ್ರರೂಪದಲ್ಲಿರಿಸಿದರೆ ಅವು ಹಳೆಯವಾಗುವವು, ಎಲ್ಲವನ್ನೂ ಅಲ್ಲದಿದ್ದರೂ, ಅವುಗಳ ಒಳ್ಳೆಯತನದ ಬಹಳಷ್ಟನ್ನು ಕಳೆದುಕೊಳ್ಳುವವು; ಆ ಅಭಿವೃದ್ಧಿ ಹೊಸ ಜೀವನ ದೊರಕಿಸಬೇಕಾದರೆ, ಅದನ್ನು ಆತ್ಮದ ತಾಜಾ ಪ್ರವಾಹಗಳಿಂದ ನವೀಕರಿಸಬೇಕು, ಅದರಿಂದಾಗಿ ಮೃತವಾದ ಇಲ್ಲವೆ ಮೃತವಾಗುತ್ತಿರುವ ವಾಹನವು ಪುನಶ್ಚೇತನಗೊಳ್ಳು–ವಂತಾಗುವುದು, ಬದಲಾಗುವುದು. ನಿರಂತರ ಪುನರ್ಜನ್ಮ ಪಡೆಯುತ್ತಿರುವುದು ಭೌತಿಕ ಅಮರತ್ವಕ್ಕಾಗಿ ಒಂದು ನಿಬಂಧನೆಯಾಗಿದೆ.

**CWSA 23/5, (SABCL, 20/1) – ಶ್ರೀ ಅರವಿಂದರು**



## ಶ್ರೀ ಅರವಿಂದರ ಪ್ರವಾದಿಯಂತಹ ಕವಿತೆ

ಹಳೆಯದು ನಾಶವಾಗುವುದು, ಅದು ಸಾಗಿ ಹೋಗುವುದು
ನಿಶ್ಶೇಷವಾಗುವುದು, ಅದರ ಹುಟ್ಟಡಗುವುದು, ಅದನ್ನು ತೊಡೆದು
ಹಾಕಲಾಗುವುದು,
ಮಾನವನ ವಿಶಾಲ ಹರವನ್ನು ಸುತ್ತುವರಿದ ಎಲ್ಲ ಕಬ್ಬಿಣದ ಬೇಡಿಗಳು
ಕೊನೆಗೆ ಕಳಚಿ ಹೋಗುವವು.

ಕಬ್ಬಿಣದ ಯುಗ ಕೊನೆಗೊಂಡಿಹುದು ಈಗ ಕೇವಲ
ಮೃತವಾಗುತ್ತಿರುವ ಗತಕಾಲದ ಕೊನೆಯ ಭೀಕರ ಉದ್ರೇಕ
ರಾಷ್ಟ್ರಗಳನು ಅಲುಗಾಡಿಸುತಿಹುದು, ಮತ್ತು ಅದು ಸಾಗಿ ಹೋದಾಗ
ಅನಿಷ್ಟಗಳಿಂದ ಮುಕ್ತವಾದ ಪೃಥ್ವಿ ಅಂದವಾದ ಹುಬ್ಬನ್ನೇರಿಸುವುದು.

ಇದು ಮಾನವನ ಪ್ರಗತಿ ಇದಕೆ ಕಾರಣ ಕಬ್ಬಿಣದ ಯುಗ
ಚಿನ್ನದ ಯುಗವನು ತಯಾರಿಸುತಿಹುದು. ನಾವು ಪಾಪ ಎಂದು
ಕರೆಯುವುದು
ಮಾನವ ತನ್ನ ಆಂತರಿಕ ಆಳಾತಿಆಳದಿಂದ ಬಿಟ್ಟುಕೊಡುವುದು
ಮಾತ್ರವಾಗಿಹುದು,
ದೈವೀ ಕಪ್ತಾನ ಅವನ ಯಾತ್ರೆಯಲಿ ಮಾರ್ಗದರ್ಶನ ಮಾಡುವನು.

ಹೋರಾಟ ಹಾಗೂ ನೋವುಗಳೊಂದಿಗೆ ಅನಿಷ್ಟವನವನು ಹಿಂದೆ
ಬಿಟ್ಟುಕೊಡುತಿಹನು,



ಕಾರಣ ಅದು ಅಂಟಿಕೊಳ್ಳುತಿಹುದು ಮತ್ತೆ ಮರಳಿ ಬರುತಿಹುದು
ಮತ್ತು ವೇದನೆಯ ಅಗ್ನಿಯಲಿ ಭೀಕರವಾಗಿ ಉರಿಯುವುದು
ಅದು ಹೆಚ್ಚಿನ ಮಾಧುರ್ಯ ಹಾಗೂ ಬಲಗಳನು
ದೊರಕಿಸುವುದಾಗಿಹುದು.

**CWSA 2/243-44 (SABCL, 20/1)** – ಶ್ರೀ ಅರವಿಂದರು

*

## ಗತಕಾಲದ ಅರುಣೋದಯಗಳು ಹಾಗೂ ಭವಿಷ್ಯದ ಮಧ್ಯಾಹ್ನಗಳು

ಗತಕಾಲ ಒಂದು ಹಿಂದೆಳೆತ ಹಾಗೆಯೇ ಪ್ರಗತಿಗಾಗಿ ಒಂದು ಶಕ್ತಿಯಾಗಿರುತ್ತದೆ. ವರ್ತಮಾನವನ್ನು ಸೃಷ್ಟಿಸಿರುವುದೆಲ್ಲವೂ ಇದೇ ಆಗಿರುತ್ತದೆ ಮತ್ತು ಭವಿಷ್ಯವನ್ನು ಸೃಷ್ಟಿಸುವ ಶಕ್ತಿಯ ಒಂದು ಶ್ರೇಷ್ಠ ಭಾಗವಾಗಿರುತ್ತದೆ ಏಕೆಂದರೆ ಗತಕಾಲ ಮೃತವಾಗಿರುವುದಿಲ್ಲ; ಅದರ ರೂಪಗಳು ಸಾಗಿ ಹೋಗಿರುತ್ತವೆ ಮತ್ತು ಹೋಗಲೇಬೇಕಾಗಿರುತ್ತದೆ. ಹಾಗಿಲ್ಲದಿದ್ದರೆ ವರ್ತಮಾನ ಅಸ್ತಿತ್ವದಲ್ಲಿ ಬರುತ್ತಿರಲಿಲ್ಲ; ಆದರೆ ಅದರ ಆತ್ಮ, ಅದರ ಸಾಮರ್ಥ್ಯ, ಅದರ ಸಾರ ಇವೆಲ್ಲ ವರ್ತಮಾನದಲ್ಲಿ ಜೀವಿಸುತ್ತವೆ, ಮತ್ತು ಎಂದೆಂದಿಗೂ ಸಂಗ್ರಹಿಸುತ್ತ, ಬೆಳೆಯುತ್ತ, ಆಳವಾಗುತ್ತ ಭವಿಷ್ಯತ್ತಿನಲ್ಲಿ ಜೀವಿಸುತ್ತ ಹೋಗುತ್ತವೆ. ಪ್ರತಿಯೊಬ್ಬ ಮಾನವ ತನ್ನ ಹಿಂದೆ ತನ್ನದೇ ಕುಲದ, ಮನುಕುಲದ ಹಾಗೂ ಸ್ವತಃ ತನ್ನದೇ ಗತಕಾಲವನ್ನು ಹಿಡಿದುಕೊಂಡಿರುತ್ತಾನೆ. ಈ ಮೂರು ವಿಷಯಗಳು ಅವನ ಪ್ರಾರಂಭ ಬಿಂದುವನ್ನು ನಿರ್ಧರಿಸುತ್ತವೆ ಮತ್ತು ಅವನ ಜೀವನದ ಪ್ರಗತಿಯುದ್ದಕ್ಕೂ ಅವನನ್ನೇ ಬೆಂಬತ್ತುತ್ತವೆ. ಈ ಗತಕಾಲದ ಶಕ್ತಿಯಲ್ಲಿ, ಅದರ ಭವ್ಯ ಸಂರಕ್ಷಣೆ ಅವನಿಗೆ ಕೊಡುವ ಬಲದಲ್ಲಿ, ಅವನು ಭವಿಷ್ಯತ್ತಿನ ಪ್ರಕಾಶರಹಿತ ಕೂಪಗಳನ್ನು ಎದುರಿಸುತ್ತಾನೆ ಮತ್ತು ಸಿದ್ಧಿಸಿಕೊಳ್ಳಲಾಗಿರದ ಅನಂತತೆಗಳ ಆಳಗಳಲ್ಲಿ ಮುಳುಗಿ ಮುಂದೆ ಸಾಗುತ್ತಾನೆ. ಆದರೆ ಅದು ಹಿಂದೆಳೆತ ಕೂಡ ಆಗಿರುತ್ತದೆ, ಭಾಗಶಃ ಏಕೆಂದರೆ ಅಜ್ಞಾತದಿಂದ ಭಯಕ್ಕೊಳಗಾದ ಮನುಷ್ಯ ತನಗೆ ನಿಶ್ಚಿತವಾದವುಗಳು ಎನಿಸುವ ಹಳೆಯ ರೂಪಗಳಿಗೆ, ತನ್ನ ಕಾಲ್ಕೆಳಗೆ ಸುರಕ್ಷಿತವೆನಿಸುವ ತಳಹದಿಗಳಿಗೆ, ಅವನ ಎಷ್ಟೊಂದು ಆಸಕ್ತಿಗಳು ಹಾಗೂ ಸಹಯೋಗಗಳು ಹಿಡಿದ ಪಟ್ಟುಬಿಡದೆ ಎಸೆಯುವ ಲತಾತಂತುಗಳಿಂದ ಸುತ್ತುವರಿಯುವ ಆಸರೆಗಳಿಗೆ ಅಂಟಿಕೊಳ್ಳುತ್ತಾನೆ. ಆದರೆ ಹಾಗೆಯೇ ಭಾಗಶಃ ಏಕೆಂದರೆ ಗತಕಾಲದ ಶಕ್ತಿಗಳು ತಮ್ಮ

ಕಾಳಜಿಪೂರ್ವಕ ಹಿಡಿತವನ್ನು ಅವನ ಮೇಲಿರಿಸುತ್ತವೆ, ಅದರಿಂದಾಗಿ ಅವನು ಅನುಸರಿಸುತ್ತಿರುವ ಅನಿಶ್ಚಿತ ಮಾರ್ಗದಿಂದ ಅವನನ್ನು ನಿಯಂತ್ರಿಸುವಂತಾಗುತ್ತದೆ ಮತ್ತು ಪ್ರಗತಿ ದುಡುಕಿನ ವಿಷಯವಾಗದಂತೆ ತಡೆಯಲಾಗುತ್ತದೆ.

ಭವಿಷ್ಯತ್ತು ನಮ್ಮನ್ನು ಹಿಮ್ಮೆಟ್ಟಿಸುತ್ತದೆ, ಅದೇ ವೇಳೆಗೆ ನಾವು ತಡೆದುಕೊಳ್ಳಲಾಗದ ರೀತಿಯಲ್ಲಿ ಆಕರ್ಷಿಸುತ್ತದೆ. ಹಿಮ್ಮೆಟ್ಟುವಿಕೆಯು ಅಜ್ಞಾತವಾದದ್ದರಿಂದ ಭಾಗಶಃ ನಮ್ಮದೇ ಸ್ವಾಭಾವಿಕ ಹಿಂಜರಿಕೆಯಲ್ಲಿರುತ್ತದೆ, ಏಕೆಂದರೆ ಅಜ್ಞಾತವಾದುದರಲ್ಲಿ ನಾವಿರಿಸುವ ಪ್ರತಿಯೊಂದು ಹೆಜ್ಜೆ ಜೀವನ ಹಾಗೂ ಮೃತ್ಯು ಇವುಗಳ ನಡುವೆ ಬಾಜಿ (wager) ಇದ್ದ ಹಾಗಿರುತ್ತದೆ; ನಾವು ಕೈಕೊಳ್ಳುವ ಪ್ರತಿಯೊಂದು ನಿರ್ಧಾರ ನಾವು ಈಗಿರುವುದರ, ನಾವು ಅಂಟಿಕೊಂಡಿರುವ ಹೆಸರು ಹಾಗೂ ರೂಪಗಳ ನಾಶದತ್ತ ಇಲ್ಲವೆ ಶ್ರೇಷ್ಠತರ ನೆರವೇರಿಕೆಯತ್ತ ಕೊಂಡೊಯ್ಯು–ವಂತಾಗಬಹುದು. ಆದರೆ ಅದು ಸ್ವತಃ ಭವಿಷ್ಯತ್ತಿನಲ್ಲಿಯೇ ಇದ್ದುಕೊಂಡಿದೆ, ಏಕೆಂದರೆ ಅಲ್ಲಿ ಆ ಭವಿಷ್ಯತ್ತನ್ನು ಆಳುವ ಸಾಮರ್ಥ್ಯಗಳಿದ್ದು ಅವು ತಮ್ಮ ನೆರವೇರಿಕೆಯತ್ತ ಕೊಂಡೊಯ್ಯುವಂತಾಗಬಹುದು. ಆದರೆ ಅದು ಸ್ವತಃ ಭವಿಷ್ಯತ್ತಿನಲ್ಲಿಯೇ ಇದ್ದುಕೊಂಡಿದೆ, ಏಕೆಂದರೆ ಅಲ್ಲಿ ಆ ಭವಿಷ್ಯತ್ತನ್ನು ಆಳುವ ಸಾಮರ್ಥ್ಯಗಳಿದ್ದು ಅವು ತಮ್ಮ ನೆರವೇರಿಕೆಗಾಗಿ ಕರೆ ಕೊಡುತ್ತವೆ ಮತ್ತು ತಡೆದುಕೊಳ್ಳಲಾಗದ ಶಕ್ತಿಯೊಂದಿಗೆ ನಮ್ಮನ್ನು ಆಕರ್ಷಿಸುತ್ತವೆಯಷ್ಟೇ ಅಲ್ಲ, ಆದರೆ ಅಲ್ಲಿ ತಮ್ಮನ್ನು ಬಿಟ್ಟುಕೊಡಲು ಬಯಸದ ಸಾಮರ್ಥ್ಯಗಳೂ ಇವೆ, ಅವುಗಳ ಮೇಲೆ ಜಯ ಸಾಧಿಸಬೇಕಾಗುತ್ತದೆ. ಭವಿಷ್ಯತ್ತು ಎರಡು ಮನಸ್ಸಿರುವ ಸಮಸ್ಯಾತ್ಮಕ ವ್ಯಕ್ತಿ (sphinx-ಸಿಂಹನಾರಿ)ಯಿದ್ದ ಹಾಗಿರುತ್ತದೆ, ತನ್ನನ್ನು ಅರ್ಪಿಸುವ ಹಾಗೆಯೇ ನಿರಾಕರಿಸುವ, ತನ್ನನ್ನು ಕೊಟ್ಟುಕೊಳ್ಳುವ ಹಾಗೂ ಕೊಟ್ಟುಕೊಳ್ಳಲು ವಿರೋಧಿಸುವ, ನಮ್ಮನ್ನು ಸಿಂಹಾಸನದ ಮೇಲೆ ಕುಳ್ಳಿರಿಸುವುದನ್ನು ಅರಸುವ ಮತ್ತು ನಮ್ಮನ್ನು ಕೊಂದು ಹಾಕುವ ಮನಸ್ಸುಳ್ಳದ್ದಾಗಿರುತ್ತದೆ. ಆದರೆ ನಾವು ಜಯ ದೊರಕಿಸಲು ಪ್ರಯತ್ನಿಸಬೇಕು, ಅದು ಒಡ್ಡಿದ ಪಣವನ್ನು ಸ್ವೀಕರಿಸಬೇಕು. ಭವಿಷ್ಯತ್ತು ಕೊಡಲಿರುವ ಮೃತ್ಯುವಿನ ಹಾಗೂ ಜೀವನದ ಕೊಡುಗೆಯನ್ನು ಎದುರಿಸಬೇಕು, ಅದು ನಮ್ಮನ್ನು ಗಾಬರಿಗೊಳಿಸಬಾರದು, ಏಕೆಂದರೆ ನಮ್ಮ ಹಳೆಯ ಹೆಸರುಗಳು ಹಾಗೂ ರೂಪಗಳು ಸಾವನ್ನಪ್ಪಲು ಬಿಟ್ಟುಕೊಡುವುದರ ಮೂಲಕ ನಾವು ಹೆಚ್ಚು ಅತ್ಯಗತ್ಯದ್ದಾದ ಶ್ರೇಷ್ಠತರ ಹೊಸ ರೂಪಗಳಲ್ಲಿ ಹಾಗೂ ಹೆಸರುಗಳಲ್ಲಿ ಜೀವಿಸುವೆವು. ನಾವು ಸಾಗಿ ಹೋಗಲೇಬೇಕಾಗಿರುತ್ತದೆ, ನಾವು ಹೋಗದೆ ಇದ್ದ ಪಕ್ಷದಲ್ಲಿ, ಚಲಿಸಲು ನಮಗೆ ಇಷ್ಟವಿಲ್ಲದೆ ಇದ್ದರೂ ಕಾಲಗತಿಯೇ



ಸ್ವತಃ ಮುಂದೆ ಸಾಗುವಂತೆ ಒತ್ತಾಯ ತರುತ್ತದೆ, ಇದು ಎಲ್ಲ ಚಲನೆಗಳಲ್ಲಿ ಅತ್ಯಂತ ಕರುಣಾಜನಕ ಹಾಗೂ ಅಪಾಯಕಾರಕವಾದದ್ದು. ನಮ್ಮ ಪ್ರಯತ್ನಗಳಿದ್ದಾಗ್ಯೂ ವಿಘಟನೆಗೊಳಗಾಗುವ ಹಳೆಯದಕ್ಕೆ ಅಂಟಿಕೊಂಡು, ಅಸಹಾಯಕರಾಗಿ ಮುಂದೆ ಸಾಗುವುದಕ್ಕಿಂತ ಅತ್ಯಂತ ಕರುಣಾಜನಕವಾದದ್ದು ಬೇರೆ ಯಾವುದಿರಲು ಸಾಧ್ಯ? ನಮ್ಮನ್ನು ಜೀವದಿಂದುಳಿಸಲು ಗತಕಾಲದ ಭೂತಗಳನ್ನು ಕುರಿತು ಹಾಗೂ ಕರಗಿ ಹೋದ ತುಂಡುಗಳನ್ನು ಕುರಿತು ಕಿರಿಚಿಕೊಳ್ಳುವುದರಿಂದ ಏನು ಪ್ರಯೋಜನ? ತನ್ನ ಸ್ವರೂಪದಲ್ಲಿಯೇ ಚಲನೆಯ ಸ್ವರೂಪದ್ದಾದುದರ ಮೇಲೆ ಅಚಂಚಲತೆಯನ್ನು ಹೇರುವುದಕ್ಕಿಂತ ಹೆಚ್ಚು ಅಪಾಯಕಾರಿಯಾಗಿರುವಂತಹದು ಬೇರೆ ಯಾವುದಿರಲು ಸಾಧ್ಯ? ಇದರರ್ಥ ಹೆಚ್ಚುತ್ತಿರುವ ಹಾಗೂ ಭಯಾನಕ ಕೊಳೆತುಹೋಗುವಿಕೆ, ಅದರರ್ಥ ಜೀವಂತವಿರುವ, ಸ್ವಯಂ ಪ್ರೇರಣೆಯಿಂದ ನಾವೀನ್ಯತೆ ಕಂಡುಕೊಳ್ಳುವ ಚೈತನ್ಯಪೂರ್ಣ ಜೀವಿಯನ್ನು ಕುರಿತು ಪಟ್ಟು ಹಿಡಿಯುವುದರ ಬದಲಾಗಿ ಕೀಳುಮಟ್ಟದ, ಕೊಳೆತು ನಾರುತ್ತಿರುವ ಶವದ ಮೇಲೆ ಲಕ್ಷ್ಯವಿರಿಸಿದಂತೆ. ಭವಿಷ್ಯತ್ತಿನ ಬಗ್ಗೆ ಭಯವಿಲ್ಲದ ಜನರು ಅತ್ಯಂತ ಶ್ರೇಷ್ಠ ಆತ್ಮದವರಾಗಿರುತ್ತಾರೆ, ಅವರು ಭವಿಷ್ಯತ್ತಿನ ಸವಾಲನ್ನು ಹಾಗೂ ಪಣವನ್ನು ಸ್ವೀಕರಿಸುತ್ತಾರೆ, ಜಗತ್ತಿಗೆ ಮಾರ್ಗದರ್ಶನ ಮಾಡುವ ದೇವನಲ್ಲಿ ಇಲ್ಲವೆ ದೈವೀ ಸಾಮರ್ಥ್ಯದಲ್ಲಿ ಅವರಿಗೆ ಘನತೆವೆತ್ತ ವಿಶ್ವಾಸವಿರುತ್ತದೆ, ಅನಂತನೊಡನೆ ಸೆಣಸುವ ಹಾಗೂ ಅಸಾಧ್ಯ–ವಾದುದನ್ನು ಸಿದ್ಧಿಸಿಕೊಳ್ಳುವ ಕೆಚ್ಚೆದೆಯನ್ನು ಅವರು ಹೊಂದಿರುತ್ತಾರೆ, ಜಗತ್ತಿನ ಕಟ್ಟಕಡೆಯ ಅದೃಷ್ಟದಲ್ಲಿ ವಿವೇಕದಿಂದ ಕೂಡಿದ ಯೋಧನ ಗಾಢನಂಬಿಕೆಯನ್ನು ಅವರು ಹೊಂದಿರುತ್ತಾರೆ, ಅದು ಅವರನ್ನು ಅವತಾರ ಪುರುಷರು, ಪ್ರವಾದಿಗಳು, ಶ್ರೇಷ್ಠ ಅನ್ವೇಷಕರು ಹಾಗೂ ಜೀರ್ಣೋದ್ಧಾರಕರು ಎಂದು ಗುರುತಿಸುವಂತೆ ಮಾಡುತ್ತದೆ.

**CWSA, 13/129–30** – ಶ್ರೀ ಅರವಿಂದರು

*

## ಗತಕಾಲದ ರೂಪಗಳನ್ನು ಕಾಲಗತಿಯ ಪ್ರವೃತ್ತಿ ಹಾಳುಮಾಡುತ್ತದೆ

ಕಾಲಗತಿಯ ಮೇಲೆ, ಸದ್ಯ ಇರುವ ದೇವನ ಉದ್ದೇಶದ ಮೇಲೆ ಬಹಳಷ್ಟು ಅವಲಂಬಿಸಿರುತ್ತದೆ, ನಮ್ಮದೇ ಅಚ್ಚುಮೆಚ್ಚಿನ ಯೋಜನೆಗಳಿಗೆ ನಮ್ಮನ್ನು ಅಂಟಿಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ಅವನ ಉದ್ದೇಶವನ್ನು ಅರಸುವುದು ಹೆಚ್ಚು

ಮಹತ್ವದ್ದು, ಕಾಲಪುರುಷನಾದ ಮೃತ್ಯುದೇವತೆ ತನ್ನ ಭಯಾನಕ ಕಾರ್ಯಕ್ಕೆ ಮೇಲೆದ್ದು ಬಂದಿದ್ದಾನೆ–ಲೋಕಕ್ಷಯ ಕೃತ್ ಪ್ರವೃದ್ಧಃ – ಲೋಕವೊಂದನ್ನು ನಾಶ ಮಾಡಲು ಹೆಚ್ಚಿಕೊಳ್ಳುತ್ತಿದ್ದಾನೆ, ಅವನಿಂದಾಗುವ ಭಯವನ್ನು, ಎದುರಿಸಲಾಗದ ಅವನ ಮಹತ್ತರ ಬಲವನ್ನು ಯಾರು ತಡೆದು ನಿಲ್ಲಿಸಬಲ್ಲರು? ಅವನು ಹಿಂದಿದ್ದ ಜಗತ್ತನ್ನು ನಾಶಮಾಡುತ್ತಾನಷ್ಟೇ ಅಲ್ಲ, ಮುಂದೆ ಬರಲಿರುವ ಜಗತ್ತನ್ನು ಸೃಷ್ಟಿ ಮಾಡುವವನಿದ್ದಾನೆ, ಆದುದರಿಂದ ಅವನು ನಾಶಮಾಡುತ್ತಿರುವುದನ್ನು ನಮ್ಮ ತೋಳುಗಳಲ್ಲಿ ಅಪ್ಪಿಹಿಡಿದುಕೊಳ್ಳುವುದಕ್ಕಿಂತ ಹಾಗೂ ಅದನ್ನು ಕುರಿತು ಗೋಳಿಡುವುದಕ್ಕಿಂತ ಅವನು ನಿರ್ಮಿಸಲಿರುವುದನ್ನು ಶೋಧಿಸುವುದು ಮತ್ತು ಅದಕ್ಕೆ ಸಹಾಯ ಮಾಡುವುದು ಹೆಚ್ಚು ಲಾಭದಾಯಕವಾದದ್ದು. ಆದರೆ ಅವನ ಸಹಜ ಪ್ರವೃತ್ತಿಯನ್ನು ಶೋಧಿಸುವುದು ಸುಲಭವಲ್ಲ, ಮತ್ತು ನಾವು ಬಹಳಷ್ಟು ಸಲ ತಾತ್ಕಾಲಿಕ ರಚನೆಗಳನ್ನು ಅತಿಯಾಗಿ ಪ್ರಶಂಸಿಸುತ್ತೇವೆ, ಅವು ಕೇವಲ ಈ ಕುರುಕ್ಷೇತ್ರದ ಯೋಧರಿಗಾಗಿ ನಿರ್ಮಿಸಿದ ತಾತ್ಕಾಲಿಕ ಡೇರೆಗಳಂತಿರುತ್ತವೆ, ಅವುಗಳನ್ನು ನಾವು ಭವಿಷ್ಯತ್ತಿನಲ್ಲಿಯ ಶಾಶ್ವತ ಕಟ್ಟಡಗಳೆಂದು ಭಾವಿಸುತ್ತೇವೆ.

ಸತ್ಯಯುಗದ ಆಚರಣೆ ಹಾಗೂ ಕಲಿಯುಗದ ಆಚರಣೆ ಇವುಗಳ ನಡುವೆ ಭಿನ್ನತೆಯನ್ನು ಗುರುತಿಸಿದ ಪಂಡಿತರು ಸರಿಯಾಗಿಯೇ ಹೇಳಿದ್ದಾರೆ, ಆದರೆ ಈ ಜ್ಞಾನದ ಅನ್ವಯದಲ್ಲಿ ಅವರು ಯಾವಾಗಲೂ ಜಾಣರಾಗಿದ್ದರು ಹಾಗೂ ಸುಶಿಕ್ಷಿತರಾಗಿದ್ದರು ಎಂದು ನನಗೆ ತೋರಿಬರುವುದಿಲ್ಲ. ಕಲಿಯುಗ ನಾಶಕ್ಕಾಗಿ, ಪುನರ್ಜನ್ಮಕ್ಕಾಗಿ ಇರುವ ಯುಗ ಎಂಬುದನ್ನು ಅವರು ಮರೆತಿದ್ದಾರೆ ಇಲ್ಲವೆ ಅದು ಅವರಿಗೆ ತಿಳಿದಿಲ್ಲ, ಇನ್ನು ರಕ್ಷಿಸಲು ಸಾಧ್ಯವಿಲ್ಲವೆಂಬುದಕ್ಕೆ ಹುಚ್ಚು ಧೈರ್ಯದಿಂದ ಅಂಟಿಕೊಂಡಿರಬೇಕಾಗಿರುವುದಿಲ್ಲ. ಅವರು ಕಲಿವರ್ಜ್ಯದ ಪದ್ಧತಿಯಲ್ಲಿ ತಮ್ಮನ್ನು ಭದ್ರವಾಗಿ ನೆಲೆಯೂರಿಸಿಕೊಳ್ಳುತ್ತಾರೆ, ವರ್ಜನ ಕ್ರಿಯೆಗೆ ಒಳಪಡುವ ವಿಷಯಗಳು ಹಳೆಯ ಸಾಮರಸ್ಯದ ಬಲಗಳು, ದೌರ್ಬಲ್ಯಗಳಲ್ಲ ಎಂಬುದನ್ನು ಅವರು ಮರೆತಿರುತ್ತಾರೆ. ರಕ್ಷಿಸಿಕೊಂಡು ಬಂದದ್ದು ಕೇವಲ ಒಂದು ತಾತ್ಕಾಲಿಕ ವೇದಿಕೆ, ಅದನ್ನು ನಾವು ಬದಲಾವಣೆಯ ಸಾಗರದ ದಂಡೆಯ ಮೇಲೆ ರಚಿಸಿದ್ದೇವೆ, ಹೆಚ್ಚು ಸ್ಥಿರವಾದ ನಿವಾಸಕ್ಕಾಗಿ ಕಾದುಕೊಂಡಿದ್ದೇವೆ ಮತ್ತು ಅದು ಕೂಡ ಒಂದು ದಿನ ಆ ಸಾಗರದ ತರಂಗಗಳ ಡಿಕ್ಕಿಯಡಿಯಲ್ಲಿ ಮುರಿದು ಬೀಳಬೇಕು ಮತ್ತು ಮುಳುಗಿ ಹೋಗುವ ನೀರುಗಳಲ್ಲಿ ಮಾಯವಾಗಬೇಕು. ಆ ವಿನಾಶಕ್ಕೆ ಕಾಲ ಸನ್ನಿಹಿತವಾಗಿದೆಯೆ? ಅದು ಬಂದಿದೆ ಎಂದು ನಮಗನಿಸುತ್ತದೆ. ಆ ನೀರುಗಳು



ಡಿಕ್ಕಿ ಹೊಡೆಯುವ ಸಪ್ಪಳವನ್ನು ಕೇಳಿರಿ–ಅದು ಆಕ್ರಮಣದ ಸದ್ದಿಗಿಂತ ಹೆಚ್ಚು ಭಯಾನಕವಾಗಿದೆ, ನಿಧಾನವಾಗಿ, ಅಸಮಾಧಾನದಿಂದ ಕನಿಕರವಿಲ್ಲದೆ ಆಗುತ್ತಿರುವ ಕುಸಿಯುವಿಕೆಯನ್ನು ಗಮನಿಸಿರಿ,–ರಾಶಿಯ ಮೇಲೆ ರಾಶಿಯಾಗಿರಿಸಿದ ನಮ್ಮ ತೇಪೆ ಹಾಕಿದ, ಅಸಂಬದ್ಧ, ಜರ್ಜರಿತ ರೀತಿಯಲ್ಲಿ ರಚನೆಗೊಂಡುದದರತ್ತ ಲಕ್ಷ್ಯಗೊಡಿರಿ; ರಚನೆಗೊಂಡ ಅದು ಹೊಡೆತಗಳಿಗೊಳಗಾಗಿ ಜೀರ್ಣವಾಗುತ್ತ, ಕಿರುಗುಡುತ್ತ, ಅಲುಗಾಡುತ್ತ, ಮುರಿದುಹಾಕಿಕೊಳ್ಳುತ್ತ, ಆ ಹೆದ್ದೆರೆಗಳ ಹುದುಗಿನಲ್ಲಿ ಮೌನವಾಗಿ ಇಲ್ಲವೆ ಎರೆಚಾಟದೊಂದಿಗೆ ಒಮ್ಮೆಗೆ ಇಲ್ಲವೆ ಸ್ವಲ್ಪ, ಸ್ವಲ್ಪವಾಗಿ, ಮುಳುಗುತ್ತಿರುವುದನ್ನು ನೋಡಿರಿ. ಹೊಸ ರಚನೆಗಾಗಿ ಕಾಲ ಸನ್ನಿಹಿತ ವಾಗಿದೆಯೆ? ಅದು ಆಗಿದೆ ಎಂದು ನಾವು ಹೇಳುತ್ತೇವೆ. ಮನುಕುಲದ ಚಟುವಟಿಕೆಯನ್ನು, ಆತುರವನ್ನು, ಅತ್ತಿತ್ತ ಅಲೆದಾಡುತ್ತ ಅವಸರದಲ್ಲಿರುವುದನ್ನು, ತೀವ್ರಗತಿಯಿಂದ ಅನ್ವೇಷಿಸುತ್ತಿರುವುದನ್ನು, ಅರಸುತ್ತಿರುವುದನ್ನು, ಅಗೆಯುತ್ತಿರು ವುದನ್ನು, ಪಾಯ ಹಾಕುತ್ತಿರುವುದನ್ನು ಗಮನಿಸಿರಿ–ಅವತಾರಿ ಪುರುಷರು, ಶ್ರೇಷ್ಠ ವಿಭೂತಿಗಳು ಬರುತ್ತಿರುವುದನ್ನು, ಅವರು ದಟ್ಟವಾಗಿ ಮೇಲೇರುವುದನ್ನು, ಒಬ್ಬರ ಹಿಂದೆ ಒಬ್ಬರಂತೆ ಹತ್ತಿರ ಹೆಜ್ಜೆ ಇಡುತ್ತಿರುವುದನ್ನು ನೋಡಿರಿ. ಇವೆಲ್ಲ ಶ್ರೇಷ್ಠ ಅವತಾರಿ ಪುರುಷ ಬಂದು ಕಲಿಯ ಮೊದಲ ಸತ್ಯಯುಗವನ್ನು ಸ್ಥಾಪಿಸಲಿರು ವುದರ ಕುರುಹುಗಳ ರೂಪದಲ್ಲಿ ನಮಗೆ ಹೇಳುತ್ತಿರುವುದಿಲ್ಲವೆ?

**CWSA, 12/55–56**

ಬರಲಿರುವ ದಿನಗಳಿಗೆ ಸೇರಿದ ನಾವು ಅಭಿವೃದ್ಧಿಯ ಹೊಸಯುಗದ ಶಿರದ ಮೇಲೆ ನಿಂತಿದ್ದೇವೆ, ಅದು ನಮ್ಮನ್ನು ಹೊಸ ಮತ್ತು ಹೆಚ್ಚು ಭವ್ಯವಾದ ಸಮನ್ವಯದತ್ತ ಕೊಂಡೊಯ್ಯಬೇಕು. ಮೂರು ಶಾಖೆಗಳ ಇಲ್ಲವೆ ತಾಂತ್ರಿಕರ ಕಡುಸಂಪ್ರದಾಯ ನಿಷ್ಠ ವೇದಾಂತಿಗಳಾಗಿರಲು, ಇಲ್ಲವೆ ಗತಕಾಲದ ಮತಧರ್ಮ ಶಾಸ್ತ್ರಗಳಿಗೆ ಸಂಬಂಧಿಸಿದ ಯಾವುದೊಂದು ಮತಕ್ಕೆ ಅಂಟಿಕೊಂಡಿರಲು ಇಲ್ಲವೆ ಗೀತೆಯ ಬೋಧನೆಯ ನಾಲ್ಕು ಮೂಲೆಗಳಲ್ಲಿ ಮುಳುಗಿ ಹೋಗಿರಲು ನಮಗೆ ಕರೆ ಕೊಡಲಾಗಿಲ್ಲ. ಅದು ನಮ್ಮನ್ನು ಸೀಮಿತತೆಗೆ ಒಳಪಡಿಸಿಕೊಳ್ಳುವುದಾಗಿದೆ ಮತ್ತು ನಮ್ಮ ಆಧ್ಯಾತ್ಮಿಕ ಜೀವನವನ್ನು ನಮ್ಮದೇ ಸತ್ತೆಯಿಂದ ಹಾಗೂ ನಮ್ಮವೇ ಸಾಧ್ಯಗೊಳಿಸುವ ಶಕ್ತಿಗಳಿಂದ (potentialities) ನಿರ್ಮಾಣ ಮಾಡುವುದರ ಬದಲಾಗಿ ಇತರರ ಹಾಗೂ ಗತಕಾಲದ ಜನರ ಸತ್ತೆಗಳಿಂದ, ಜ್ಞಾನ ಹಾಗೂ ಸ್ವಭಾವಗಳಿಂದ ಸೃಷ್ಟಿಸಲು ಪ್ರಯತ್ನ ಮಾಡುವುದಾಗಿದೆ. ನಾವು ಗತಕಾಲದ

ಅರುಣೋದಯಗಳಿಗೆ ಸೇರಿದವರಾಗಿಲ್ಲ, ಭವಿಷ್ಯತ್ಕಾಲದ ಮಧ್ಯಾಹ್ನಗಳಿಗೆ ಸೇರಿದವರಾಗಿದ್ದೇವೆ. ಹೊಸದ್ರವ್ಯದ ಮೊತ್ತವೊಂದು ನಮ್ಮೊಳಗೆ ಹರಿದು ಬರುತ್ತಿದೆ, ಭಾರತದ ಹಾಗೂ ಜಗತ್ತಿನ ಆಸ್ತಿಕತೆಯ ಶ್ರೇಷ್ಠ ಧರ್ಮಗಳ ಪ್ರಭಾವಗಳನ್ನು ಹಾಗೂ ಬೌದ್ಧಧರ್ಮದಿಂದ ಮರಳಿ ಪಡೆದ ಅರ್ಥವನ್ನು ಜೀರ್ಣಿಸಿಕೊಳ್ಳಬೇಕಾಗಿದೆಯಷ್ಟೇ ಅಲ್ಲ, ಆದರೆ ಆಧುನಿಕ ಜ್ಞಾನ ಹಾಗೂ ಅರಸುವಿಕೆಗಳ ಜ್ಞಾನ ಪ್ರಕಟಣೆಯ ಸಾಮರ್ಥ್ಯ ಸೀಮಿತವಾಗಿದ್ದರೂ, ಅವುಗಳನ್ನು ಸಂಪೂರ್ಣವಾಗಿ ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುತ್ತದೆ; ಮತ್ತು ಅದರಾಚೆಗೆ ಮೃತವಾಗಿದೆ ಎಂದು ತಿಳಿದಿದ್ದ ದೂರದಲ್ಲಿದ್ದ ಹಾಗೂ ದಿನಾಂಕರಹಿತ ಗತಕಾಲ ನಮ್ಮ ಮೇಲೆ ಹಲವಾರು ಪ್ರಕಾಶಮಯ ರಹಸ್ಯಗಳ ತೇಜಸ್ಸಿನೊಂದಿಗೆ ತಿರುಗಿ ಬರತೊಡಗಿದೆ, ಆ ರಹಸ್ಯಗಳು ಮನುಕುಲಕ್ಕೆ ಬಹಳ ಕಾಲದಿಂದ ಕಳೆದು ಹೋಗಿದ್ದವು, ಆದರೆ ಈಗ ಪರದೆಯ ಹಿಂದಿನಿಂದ ಹೊರಗೆ ಹರಿದು ಬರತೊಡಗಿವೆ; ಇದೆಲ್ಲವೂ ಹೊಸದಾದ, ಬಹಳ ಶ್ರೀಮಂತ ಹಾಗೂ ವಿಶಾಲವಾದ ಸಮನ್ವಯದತ್ತ ಬೆರಳು ಮಾಡಿ ತೋರಿಸುತ್ತಿದೆ; ತಾಜಾತನವಿರುವ, ನಮ್ಮ ಲಾಭಗಳನ್ನು ವಿಸ್ತಾರವಾಗಿ ಅಪ್ಪಿಕೊಂಡ ಸಾಮರಸ್ಯಗೊಳಿಸುವಿಕೆಯು ಭವಿಷ್ಯತ್ತಿನ ಬೌದ್ಧಿಕ ಹಾಗೂ ಆಧ್ಯಾತ್ಮಿಕ ಆವಶ್ಯಕತೆಯಾಗಿದೆ.

**CWSA, 19/9–10 SABCL, 13/7-8**

*

**ಬದಲಾವಣೆಯ ಚಕ್ರ**

ವ್ಯಕ್ತಿ ಬಹಳಷ್ಟು ಸಲ ಹಾಗೂ ಸಮಾಜ ಅದರ ಜೀವನದ ಯಾವುದೇ ಕ್ಷಣದಲ್ಲಿ, ಶಾಸ್ತ್ರದಿಂದ ದೂರ ಹೊರಳಿ ಹೋಗುವುದು, ಅದನ್ನು ಕುರಿತು ತಾಳ್ಮೆ ಕಳೆದುಕೊಳ್ಳುವುದು ಅದರ ಸಂಕಲ್ಪ ಹಾಗೂ ನಂಬಿಕೆಗಳನ್ನು ಕಳೆದುಕೊಳ್ಳುವುದು, ಹೊಸ ನಿಯಮವೊಂದನ್ನು ಅರಸಿಕೊಂಡು ಹೋಗುವುದು ಕಂಡುಬರುತ್ತದೆ; ಆ ಹೊಸ ನಿಯಮ ಈಗ ಹೆಚ್ಚು ಸರಿಯಾದದ್ದೆಂದು ಸ್ವೀಕರಿಸುವ ಮನೋಭಾವವಿರುತ್ತದೆ, ಅದನ್ನು ಅಸ್ತಿತ್ವದ ಹೆಚ್ಚು ಜೀವಧಾರಕವಾದ, ಉಚ್ಚತರವಾದ ಸತ್ಯವೆಂದು ಪರಿಗಣಿಸಲಾಗುತ್ತದೆ. ಸ್ಥಾಪಿತಗೊಂಡ ಶಾಸ್ತ್ರ ಜೀವಂತವಾಗಿರುವ ವಿಷಯವಾಗದೆ ಹೋದಾಗ, ರೂಢಿಗಳ ಹಾಗೂ ಸಂಪ್ರದಾಯಗಳ ಮೊತ್ತವಾಗಿ ಅವನತಿ ಹೊಂದಿದಾಗ ಇಲ್ಲವೆ ಬಿಗಿತಕ್ಕೊಳಗಾದಾಗ ಇಂತಹದು ಸಂಭವಿಸಬಹುದು. ಇಲ್ಲವೆ ಶಾಸ್ತ್ರ ಅಪರಿಪೂರ್ಣವಾಗಿದೆ ಮತ್ತು ಒತ್ತಾಯದಿಂದ ಬೇಡಲಾದ ಪ್ರಗತಿಗೆ



ಇನ್ನು ಮುಂದೆ ಉಪಯುಕ್ತವಾಗುವುದಿಲ್ಲ, ಹೆಚ್ಚು ಪರಿಪೂರ್ಣವಾದ ಹೊಸ ನಿಯಮ ಅಗತ್ಯವಾಗಿದೆ ಎಂದು ಕಂಡುಬಂದಾಗ ಅದು ಬರಬಹುದು, ಅದು ಅಸ್ತಿತ್ವದಲ್ಲಿರದಿದ್ದರೆ ಅದನ್ನು ಆ ಕುಲದ ಪ್ರಯತ್ನದಿಂದ ಶೋಧಿಸಬೇಕಾಗುತ್ತದೆ ಇಲ್ಲವೆ ಆ ಕುಲದ ಬಯಕೆ ಹಾಗೂ ಅರಸುವಿಕೆಯನ್ನು ಮೈವೆತ್ತ ಒಬ್ಬ ಶ್ರೇಷ್ಠ ಹಾಗೂ ಜ್ಞಾನೋದಯ ಪಡೆದ ವ್ಯಕ್ತಿ ಆ ಕಾರ್ಯವನ್ನು ಕೈಕೊಳ್ಳಬೇಕಾಗುತ್ತದೆ. ವೈದಿಕ ನಿಯಮ ಒಂದು ಸಂಪ್ರದಾಯವಾಗುತ್ತದೆ ಮತ್ತು ಬುದ್ಧನೊಬ್ಬ ತನ್ನ ಎಂಟು ಬಗೆಯ ಮಾರ್ಗಗಳುಳ್ಳ ಹೊಸ ನಿಯಮ ಮತ್ತು ನಿರ್ವಾಣದ ಗುರಿ ಇರಿಸಿಕೊಂಡು ಕಾಣಿಸಿಕೊಳ್ಳುತ್ತಾನೆ. ಮತ್ತು ಅವನು ಅದನ್ನು ವ್ಯಕ್ತಿಗತ ಅನ್ವೇಷಣೆ ಎಂದು ಪ್ರತಿಪಾದಿಸುವುದಿಲ್ಲ, ಆದರೆ ಜ್ಞಾನೋದಯ ಪಡೆದ ಹಾಗೂ ಎಚ್ಚತ್ತು ಕೊಂಡ ಆತ್ಮವಿರುವ ಆ ಬುದ್ಧನಿಂದ ಸತತ ಮರುಶೋಧನೆಗೆ ಒಳಗಾಗುತ್ತಿರುವ ಜೀವಂತ ಹಾಗೂ ನಿಜವಾದ ಆರ್ಯಕುಲದ ನಿಯಮ ಎಂದು ಪ್ರತಿಪಾದಿಸಲಾಗುತ್ತದೆ ಎಂದು ಹೇಳಬಹುದಾಗಿದೆ. ಆದರೆ ವ್ಯಾವಹಾರಿಕವಾಗಿ ಇದರರ್ಥ ಆದರ್ಶವೊಂದಿದೆ, ಧರ್ಮವೊಂದಿದೆ, ಅದನ್ನು ಮತ, ತತ್ವಜ್ಞಾನ, ನೈತಿಕತೆ, ಸತ್ಯ ಹಾಗೂ ಪರಿಪೂರ್ಣತೆಗಳನ್ನು ಬೆಂಬತ್ತುತ್ತ ಹೆಣಗುತ್ತಿರುವ ಮನುಷ್ಯನಲ್ಲಿರುವ ಎಲ್ಲ ಸಾಮರ್ಥ್ಯಗಳು ಆಂತರಿಕ ಹಾಗೂ ಬಾಹ್ಯ ಜೀವನದ ವಿಜ್ಞಾನ ಹಾಗೂ ಕಲೆಗಳನ್ನು ಕುರಿತು ಹೊಸ ಶಾಸ್ತ್ರವೊಂದರ ಹೊಸ ಹೇಳಿಕೆಗಳಲ್ಲಿ ಮೈವೆತ್ತಲು ಸತತ ಪ್ರಯತ್ನಿಸುತ್ತಿರುತ್ತವೆ. ಧಾರ್ಮಿಕ, ನೈತಿಕ ಮತ್ತು ಸಾಮಾಜಿಕ ಸದಾಚಾರನಿಷ್ಠತೆ ಇರುವ ವೈವಿಧ್ಯಮಯ ನಿಯಮವು ಸಂಕುಚಿತತೆ ಹಾಗೂ ಅಪರಿಪೂರ್ಣತೆಗಳಿಂದ ತಪ್ಪಿತಸ್ಥವಾಗಿದೆ ಮತ್ತು ಈಗ ಒಂದು ಸಂಪ್ರದಾಯ ವಾಗಿದೆ, ಕ್ರಿಸ್ತನ ನಿಯಮ ಅದರ ಸ್ಥಾನ ಬದಲಿಸಲು ಬರುತ್ತದೆ, ಮತ್ತು ಒಮ್ಮೆಗೆ ತಳ್ಳಿಹಾಕುವುದಕ್ಕಾಗಿ, ನೆರವೇರಿಕೆ ಕಂಡುಕೊಳ್ಳುವುದಕ್ಕಾಗಿ ಹಕ್ಕು ಸಾಧಿಸುತ್ತದೆ, ಅದು ಅಪರಿಪೂರ್ಣ ರೂಪವನ್ನು ತಳ್ಳಿಹಾಕಲು ಬಯಸುತ್ತದೆ, ಅದು ಗುರಿಯಾಗಿರಿಸಿ ಕೊಂಡ ದೈವೀ ನಿಯಮವು ಆಳಾತಿಆಳದ ಹಾಗೂ ವಿಸ್ತಾರವಾದ ಪ್ರಕಾಶದಲ್ಲಿ ನೆರವೇರಿಕೆ ಕಂಡುಕೊಳ್ಳುವುದನ್ನು ಅರಸುತ್ತದೆ. ಮಾನವ ಶೋಧ ಅಲ್ಲಿಗೆ ನಿಂತುಬಿಡುವುದಿಲ್ಲ. ಈ ಎಲ್ಲ ರೂಪತಾಳುವಿಕೆಗಳನ್ನು ಕೂಡ ಬಿಟ್ಟುಕೊಟ್ಟು, ಈ ಹಿಂದೆ ತಿರಸ್ಕರಿಸಿದ, ಗತಕಾಲದ ಯಾವುದೋ ಒಂದು ಸತ್ಯದತ್ತ ಹೋಗುತ್ತದೆ ಇಲ್ಲವೆ ಹೊಸ ಸತ್ಯವನ್ನು ಮತ್ತು ಸಾಮರ್ಥ್ಯವನ್ನು ಕಂಡುಕೊಳ್ಳುವತ್ತ ಮುನ್ನುಗ್ಗುತ್ತದೆ, ಆದರೆ ಅದು ಯಾವಾಗಲೂ ಅದೇ ವಿಷಯವನ್ನು ಎಂದರೆ ಅದರ ಪರಿಪೂರ್ಣತೆಯ ನಿಯಮ, ಸರಿಯಾಗಿ ಜೀವಿಸುವುದರ ನಿಯಮ,

ಅದರ ಸಂಪೂರ್ಣ ಅತ್ಯುಚ್ಚ ಮತ್ತು ಸಾರಭೂತ ಆತ್ಮ ಹಾಗೂ ಸ್ವಭಾವ ಇದೆಲ್ಲವನ್ನು ಶೋಧಿಸುತ್ತಿರುತ್ತದೆ.

**CWSA 19/478-79**

*

ಮನೋಭಾವ ಮತ್ತು ಸತ್ಯ ಅದೇ ಆಗಿರಬೇಕು, ಆದರೆ ರೂಪತಾಳುವಿಕೆಗಳು ಮನೋಭಾವಕ್ಕೆ ಅನುಕೂಲಕರವಾಗಿ ಭಿನ್ನವಾಗಿರಬಹುದು. ಒಂದು ರೂಪದ ಮೇಲೆ ಮಾತ್ರ ಒತ್ತುಕೊಡುವುದರಿಂದ ಕಟ್ಟುನಿಟ್ಟನ್ನು ಒಳತರುವಂತಾಗಬಹುದು, ಇಂತಹದು ಗತಕಾಲದಲ್ಲಿ ಭಾರತೀಯ ಸಮಾಜ ಹಾಗೂ ನಾಗರಿಕತೆಯ ಮೇಲೆ ಬೆಳೆದು ಬಂದಿತು ಮತ್ತು ಅದು ಆತ್ಮ ಸೆರೆಗೊಳಗಾಗುವಿಕೆಯನ್ನು, ಅವನತಿ ಹೊಂದುವುದನ್ನು ತರುವಂತಾಯಿತು. ಭಾರತದಲ್ಲಿ ಹಲವಾರು ರೂಪಗಳಿರುವ ವೈವಿಧ್ಯವಿದ್ದಾಗ, ಆದರೆ ಆತ್ಮ ಒಂದೇ ಆಗಿದ್ದಾಗ, ಅದು ಅತ್ಯಂತ ಬಲಿಷ್ಠ ಹಾಗೂ ಸಜೀವ ದೇಶವಾಗಿತ್ತು. ಮತ್ತು ನನಗೆ ಎನಿಸುವುದೇನೆಂದರೆ–ಕನಿಷ್ಠಪಕ್ಷ ಅದು ನನಗೆ ಅಲಿಪುರ ಜೇಲಿನಲ್ಲಾದ ಭವಿಷ್ಯಸೂಚನೆ (prevision)ಯಾಗಿತ್ತು ಮತ್ತು ನಾನಿನ್ನೂ ಭಿನ್ನ ವಿಸ್ತಾರ ನೋಟವನ್ನು ಕಾಣುತ್ತಿಲ್ಲ–ಭವಿಷ್ಯತ್ತಿನಲ್ಲಿಯೂ ಕೂಡ ಇಂತಹದೇ ಸಂದರ್ಭವಿರುವುದು.

**CWSA 36/238**

*

**ರೂಢಿ ಮತ್ತು ನಿಯಮಗಳನ್ನು ಬದಲಾಯಿಸಬಹುದು**

ಸಾಂಪ್ರದಾಯಿಕ ಜನರ ನಿಲುವನ್ನು ನೋಡಿ ಮನುಷ್ಯ ಆಶ್ಚರ್ಯ–ಪಡಬಹುದು, ಅಸ್ತಿತ್ವದಲ್ಲಿರುವುದೆಲ್ಲವನ್ನೂ ದೈವೀಕರಣಗೊಳಿಸಲು ಅವರು ಶ್ರಮಿಸುತ್ತಾರೆ. ಕೇವಲ ಸಾಂಪ್ರದಾಯಿಕವೆನಿಸುವ ಕೆಲವೊಂದು ವ್ಯವಸ್ಥೆಗಳು ಹಾಗೂ ಪದ್ಧತಿಗಳು ಹಿಂದೂ ಸಮಾಜದಲ್ಲಿವೆ. ಅವು ಪ್ರಾಚೀನಕಾಲದಲ್ಲಿ ಅಸ್ತಿತ್ವದಲ್ಲಿ ಇದ್ದವೆಂಬುದಕ್ಕೆ ಪ್ರಮಾಣವಿಲ್ಲ. ಭವಿಷ್ಯತ್ತಿನಲ್ಲಿ ಅವು ಏಕೆ ಉಳಿದುಕೊಂಡು ಹೋಗಬೇಕು ಎಂಬುದಕ್ಕೆ ಕಾರಣವಿಲ್ಲ. ಪ್ರಾಚೀನತೆಯಾಗಲಿ, ಆಧುನಿಕತೆಯಾಗಲಿ ಸತ್ಯಕ್ಕೆ ಇಲ್ಲವೆ ಉಪಯುಕ್ತತೆಗೆ ಪರೀಕ್ಷಾ ಪ್ರಮಾಣವಲ್ಲ. ಎಲ್ಲ ಋಷಿಗಳು ಗತಕಾಲಕ್ಕೆ ಸೇರಿದವರಲ್ಲ, ಅವತಾರಿ ಪುರುಷರು ಇನ್ನೂ ಬರುತ್ತಲೇ ಇದ್ದಾರೆ, ಜ್ಞಾನ ಪ್ರಕಟಣೆಗಳು ಇನ್ನೂ ಮುಂದುವರಿಯುತ್ತಲೇ ಇವೆ. ಆಧುನಿಕ ಸಮಾಜದಲ್ಲಿ 'ಮನು'ವನ್ನು ಇಡಿಯಾಗಿ ಮರುಸೃಷ್ಟಿ ಮಾಡುವುದೆಂದರೆ ಗಂಗಾ ನದಿಗೆ



ಹಿಮಾಲಯಕ್ಕೆ ಮರಳಿ ಹೋಗೆಂದು ಕೇಳಿದ ಹಾಗಾಗುತ್ತದೆ. ಮನು ನಿಸ್ಸಂಶಯವಾಗಿ ಸ್ವದೇಶೀಯನಾಗಿದ್ದ, ಹಾಗೆಯೇ ಪಶುಗಳನ್ನು ಬಲಿಕೊಡುವುದು ಕೂಡ ಸ್ವದೇಶೀಯವಾದದ್ದೆ, ಒಂದು ವಿಷಯ ಗತಕಾಲದಲ್ಲಿ ಸ್ವದೇಶೀಯ ವಾಗಿತ್ತೆಂದು ಭವಿಷ್ಯತ್ತಿನಲ್ಲಿಯೂ ಕೂಡ ಸ್ವದೇಶೀಯವಾಗಿರಬೇಕಾಗಿಲ್ಲ. ಬದಲಾದ ಪರಿಸ್ಥಿತಿಗಳನ್ನು ಗುರುತಿಸದೆ ಇರುವುದು ಹೆಡ್ಡತನದ ವಿಷಯ. ಎಲ್ಲ ವಿಷಯಗಳಿಗೂ ಅವುಗಳದೇ ಒಂದು ಕಾಲ ಹಾಗೂ ಒಂದು ಮಿತಿ ಇರುತ್ತವೆ. ದೀರ್ಘಕಾಲದವರೆಗೆ ಮುಂದುವರಿದುಕೊಂಡ ಬಂದ ಕುಲದೇವತಾ ಪದ್ಧತಿ ಮತ್ತು ಬಹುಪತಿತ್ವದಂತಹ ಸಂಪ್ರದಾಯಗಳು ಅವುಗಳ ಕಾಲದಲ್ಲಿ ಸಾರ್ವಭೌಮ ರೀತಿಯಲ್ಲಿ ಉಪಯುಕ್ತವಾಗಿದ್ದವು. ಗತಕಾಲದ ಉಪಯುಕ್ತತೆಯನ್ನು ನಾವು ಅಲಕ್ಷಿಸಬಾರದು, ಆದರೆ ಆದ್ಯತೆ ನೀಡುವ ರೀತಿಯಲ್ಲಿ ವರ್ತಮಾನದ ಹಾಗೂ ಭವಿಷ್ಯತ್ತಿನ ಉಪಯುಕ್ತತೆಯನ್ನು ಅರಸುತ್ತೇವೆ.

ಹಾಗಾಗಿ ಸಂಪ್ರದಾಯವನ್ನು ಹಾಗೂ ನಿಯಮವನ್ನು ಬದಲಾಯಿಸ ಬಹುದು. ಪ್ರತಿಯೊಂದು ಯುಗಕ್ಕೂ ಅದರದೇ ಶಾಸ್ತ್ರವಿರುತ್ತದೆ. ಆದರೆ ಅದನ್ನು ನಾವು ಕೂಡಲೇ ಬದಲು ಮಾಡಬೇಕೆಂದು ಇಲ್ಲವೆ ಒಂದು ನಿರ್ದಿಷ್ಟ ದಿಶೆಯಲ್ಲಿ ಅದನ್ನು ಬದಲು ಮಾಡಬೇಕೆಂದು ವಾದ ಮಾಡಲಾಗದು. ಸಮಾಜ ಸುಧಾರಕರ ಅಜ್ಞಾನಿ ಉತ್ಸಾಹದಿಂದ ಮನುಷ್ಯ ಜುಗುಪ್ಸೆಗೊಳಗಾಗುತ್ತಾನೆ. ಸಾಮಾನ್ಯವಾಗಿ ಅವರ ಮನಸ್ಸುಗಳು ಯುರೋಪಿಯನ್ ವಿಚಾರಗಳನ್ನು ಕೆಟ್ಟ ರೀತಿಯಲ್ಲಿ ಅರಗಿಸಿಕೊಂಡು ಕಲಬೆರಕೆಗೆ ಒಳಗಾಗಿರುತ್ತವೆ. ಅವರಲ್ಲಿ ಕಡಿಮೆ ಜನರು ಯುರೋಪಿನ ಬಗ್ಗೆ ಏನನ್ನಾದರೂ ತಿಳಿದುಕೊಂಡಿರುತ್ತಾರೆ, ಮತ್ತು ಯುರೋಪ ದೇಶಕ್ಕೆ ಭೇಟಿ ನೀಡಿದ ಜನರೂ ಕೂಡ ಅದನ್ನು ಕೆಟ್ಟ ರೀತಿಯಲ್ಲಿ ತಿಳಿದು–ಕೊಂಡಿರುತ್ತಾರೆ. ಯುರೋಪಿಯನ್‌ರ ವಿಚಾರಗಳಿಗೆ ವಿರುದ್ಧವಾದವುಗಳನ್ನು ಅವರು ಕೇವಲ ಮೂಢನಂಬಿಕೆಗಳು, ಅನಾಗರಿಕವಾದವುಗಳು, ಹಾನಿಕಾರಕ–ವಾದವುಗಳು ಮತ್ತು ಅಂಧಕಾರದಿಂದ ಕೂಡಿದವುಗಳು ಎಂದು ಅವುಗಳಿಗೆ ಅವಕಾಶ ಮಾಡಿಕೊಡುವುದನ್ನು ನಿರಾಕರಿಸುತ್ತಾರೆ, ಯುರೋಪಿನಲ್ಲಿ ಹೊಗಳಿಕೆಗೆ ಪಾತ್ರವಾದವುಗಳನ್ನು, ಆಚರಣೆಯಲ್ಲಿದ್ದವುಗಳನ್ನು ತರ್ಕಬದ್ಧವಾದವುಗಳು ಹಾಗೂ ಜ್ಞಾನೋದಯ ಪಡೆದವುಗಳು ಎಂದು ಹೇಳದೆ ಇರುವುದನ್ನು ಅವರು ಸಹಿಸಿಕೊಳ್ಳುವುದಿಲ್ಲ. . . .

**CWSA 12/50–52** **– ಶ್ರೀ ಅರವಿಂದರು**

*

**ಧೈರ್ಯ ಕಳೆದುಕೊಳ್ಳುವುದು ಬೇಡ**

ಮನುಷ್ಯನಲ್ಲಿ ಸಾಮರ್ಥ್ಯವಿದ್ದರೆ ಕೆಟ್ಟದಾದ ಏನೋ ಒಂದು ಒಳ್ಳೆಯದಾಗುವಂತೆ ತಿರುವು ಕೊಡಬಹುದು. ಅದು ಸೀಮಿತಗೊಳ್ಳದ ಸಾಮರ್ಥ್ಯ, ಅದರ ಅರ್ಥದಲ್ಲಿ, ಮನುಷ್ಯ ಒಂದು ತಪ್ಪು ಮಾಡಿದ್ದರೆ, ಅದು ಬಹಳ ಗಂಭೀರವಾದದ್ದಾಗಿದ್ದರೆ ಅವನಲ್ಲಿ ಈ ಸತ್ಯಪ್ರಜ್ಞೆಯನ್ನು, ಅತಿಮಾನಸಶಕ್ತಿಯನ್ನು ತರುವ ಸಾಮರ್ಥ್ಯವಿದ್ದರೆ ಮತ್ತು ಅದಕ್ಕೆ ಕಾರ್ಯಮಾಡಲು ಅನುವು ಮಾಡಿಕೊಟ್ಟರೆ ಅದು ಮಹತ್ತರ ಪ್ರಗತಿಯನ್ನು ಸಾಧಿಸುವುದಕ್ಕೆ ಒಂದು ಅವಕಾಶವಾಗಿರುತ್ತದೆ.

**CWM 6/289** – ಶ್ರೀಮಾತೆ

*

**ಹೂತುಹೋದ ಆತ್ಮಗಳಿಗೆ ಹಕ್ಕುದಾರಿಕೆಯನು ನಿರಾಕರಿಸುವುದು**

ಕಾರಣ ಜನ್ಮತಾಳಿರದ ಆತ್ಮದ ಕಾಲಾತೀತ ಸಾಮರ್ಥ್ಯ ಮಾತ್ರ
ಕಾಲದಲಿ ತಾಳಿದ ಜನ್ಮ ಹೇರಿದ ನೊಗವನ್ನು ಮೇಲೆತ್ತಬಹುದು.
ಈ ಆತ್ಮದ ಆಕಾರವನು ನಿರ್ಮಿಸಿದ ದಿವ್ಯಾತ್ಮ ಮಾತ್ರ
ಸ್ಥಿರಗೊಂಡ ಕೊನೆಗಾಣದ ರೇಖೆಯನು ಅಳಿಸಿ ಹಾಕಬಲ್ಲ
ಆ ರೇಖೆಯು ಬದಲಾಗುವ ಈ ಹೆಸರುಗಳನು, ಈ ಅಸಂಖ್ಯಾತ
ಜೀವನಗಳನು, ಈ ಮರೆತು ಹೋದ ವ್ಯಕ್ತಿವಿಶಿಷ್ಟತೆಗಳನು
ಮತ್ತು ನಮ್ಮ ಪ್ರಜ್ಞಾಪೂರ್ಣ ಕ್ರಿಯೆಗಳಲಿ ಅವು ಇನ್ನೂ
ಅವಿತುಗೊಂಡುದುದನು
ಹಳೆಯ ಮರೆತುಹೋದ ಯೋಚನೆಗಳ ಹಾಗೂ ಕ್ರಿಯೆಗಳ ಜಾಡನು
ಅಳಿಸಿಹಾಕಬಲ್ಲದು, ದೇಹ ಮತ್ತು ಆತ್ಮ ಕುರುಡಾಗಿ ಒಪ್ಪಿಕೊಂಡ
ಮಾಯವಾದ ನಮ್ಮ ರೂಪಗಳಿಗೆ ಭಾರವಾದ ಹಕ್ಕುದಾರಿಕೆಯನು
ಹೂತುಹೋದ ಆತ್ಮಗಳಿಗೆ ವಾರಸುದಾರಿಕೆಯನು ನಿರಾಕರಿಸಬೇಕು.
ನೆನಪಿಗೆ ತಂದುಕೊಂಡಿರದೆ ಇದ್ದ ಕತೆಯೊಂದರ ಪ್ರಸಂಗ ಅದರ
ಪ್ರಾರಂಭ ಕಳೆದುಹೋಗಿಹುದು, ಉದ್ದೇಶ ಹಾಗೂ ಯೋಜನೆ
ಮರೆಯಲ್ಲಿಹುದು,
ಒಮ್ಮೆ ಜೀವಂತವಾಗಿದ್ದ ಕತೆ ನಮ್ಮ ಸದ್ಯದ ವಿಧಿಯನು ಭೂತಕಾಲದ
ಚೈತನ್ಯಗಳ ಕೂಸನ್ನಾಗಿ ತಯಾರಿಸಿಹುದು ಹಾಗೂ ಮಾಡಿಹುದು



ಅವಿತುಕೊಂಡ ಅನಿವಾರ್ಯವಾಗಿ ಬಿಗಿದು ಹಾಕಿದ ಕೊಂಡಿಗಳ
ವಿಶ್ವವ್ಯಾಪಕ ಕ್ರಮಾನುಗತಿಗಳ ದೃಢತೆಯನು
ಅವಳು ತನ್ನ ಆತ್ಮದ ಶಕ್ತಿಯಿಂದ ಸ್ಫೋಟಿಸಬೇಕು, ನೆಲೆದಪ್ಪಿಸಬೇಕು,
ಅಮರನ ಮಾರ್ಗದಲಿ ಅಡೆತಡೆಯಾದ ಅವಳ ಗತಕಾಲ
ನೆಲೆಯಳಿದ ನೆಲ ಹೊಸ ಆಕಾರ ಪಡೆದ ವಿಧಿ ಆಗುವಂತೆ ಮಾಡಬೇಕು.

**Savitri, p.12.** – ಶ್ರೀ ಅರವಿಂದರು

*

## ಗತಕಾಲದ ಉಪಯುಕ್ತತೆ

**ಮುಂದೆ ಕರೆದೊಯ್ಯುವುದಕ್ಕಾಗಿ ಒಂದು ಹೆಜ್ಜೆಗಲ್ಲು.**

ಎಲ್ಲ ಗತಕಾಲ, ಯಾವಾಗಲೂ, ಸರಳವಾಗಿ ಒಂದು ಹೆಜ್ಜೆಗಲ್ಲು ಇಲ್ಲವೆ ಏಣಿಯ ಹಾಗಿರಬೇಕು, ಹೆಚ್ಚು ದೂರ ಕರೆದೊಯ್ಯಲು ಅದು ನಿಮ್ಮನ್ನು ಮುಂದೂಡುವುದರ ಹೊರತಾಗಿ ಅದಕ್ಕೆ ಬೇರೆ ಯಾವ ಉಪಯುಕ್ತತೆ ಇರಬಾರದು. ಇದು ನಿಮ್ಮ ಭಾವನೆಗೆ ಬಂದರೆ ಮತ್ತು ನೀವು ಸತತ ನಿಮ್ಮ ಬೆನ್ನನ್ನು ಗತಕಾಲದತ್ತ ತಿರುಗಿಸಿದರೆ ಹಾಗೂ ನೀವು ಕೈಕೊಳ್ಳಬೇಕಾದುದರತ್ತ ನೋಡುತ್ತಿದ್ದರೆ ಆಗ ನೀವು ತೀವ್ರಗತಿಯಿಂದ ಸಾಗಿಹೋಗುತ್ತೀರಿ, ದಾರಿಯಲ್ಲಿ ನೀವು ವೇಳೆಯನ್ನು ಹಾಳುಮಾಡುವುದಿಲ್ಲ. ಆಗಿ ಹೋದುದಕ್ಕೆ, ಈಗಿದ್ದುದಕ್ಕೆ ಮತ್ತು ಗತಕಾಲದಲ್ಲಿ ಯಾವುದು ನಿಮಗೆ ಸುಂದರವಾದದ್ದು, ಒಳ್ಳೆಯದು ಆಗಿ ಕಂಡಿತ್ತು ಎಂಬುದಕ್ಕೆ ಅಂಟಿಕೊಳ್ಳದೆ ಇದ್ದರೆ ನೀವು ವೇಳೆಯನ್ನು ಹಾಳು ಮಾಡುವುದಿಲ್ಲ. ಇದು ಕೇವಲ ನಿಮಗೆ ಸಹಾಯ ಮಾಡಬೇಕು, ಅದನ್ನು ನೀವು ತಿರಸ್ಕರಿಸಬಾರದು, ಆದರೆ ಮುಂದೆ ಸಾಗಲು ನಿಮಗೆ ಅದು ಸಹಾಯ ಮಾಡಬೇಕು, ಒಂದು ಹೆಜ್ಜೆ ಮುಂದಿರಿಸಲು ನೀವು ಆಸರೆ ಕಂಡುಕೊಳ್ಳಬಹುದಾದ ಏನೋ ಒಂದು ಅದಾಗಿರಬೇಕು.

ಈಗ, ಒಂದು ವಿಶಿಷ್ಟ ಸಮಯದಲ್ಲಿ, ಆಂತರಿಕ ಹಾಗೂ ಬಾಹ್ಯ ಪರಿಸ್ಥಿತಿಗಳ ಒಟ್ಟುಗೂಡುವಿಕೆಯಿದ್ದಾಗ ಒಂದು ವಿಶಿಷ್ಟ ಕಂಪನವನ್ನು ಮನುಷ್ಯ ಸ್ವೀಕರಿಸುವಂತಾಗಿದೆ, ಉದಾಹರಣೆಗೆ, ನೀನು ಹೇಳಿದ ಹಾಗೆ, ನಕ್ಷತ್ರಗಳತ್ತ ನೋಡುತ್ತಿದ್ದಾಗ, ಭೂದೃಶ್ಯವೊಂದನ್ನು ಕುರಿತು ಧ್ಯಾನಮಗ್ನನಾದಾಗ, ಪುಟವೊಂದನ್ನು ಓದುತ್ತಿದ್ದಾಗ

ಇಲ್ಲವೆ ಭಾಷಣವೊಂದನ್ನು ಕೇಳುತ್ತಿದ್ದಾಗ ಮನುಷ್ಯನಲ್ಲಿ ಒಮ್ಮೆಗೆ ಆಂತರಿಕ ತೆರೆದಿರಿಸಿಕೊಳ್ಳುವಿಕೆಯಾಗುತ್ತದೆ, ಅನುಭವವೊಂದಿರುತ್ತದೆ, ಹೊಸದಾದ ಏನೋ ಒಂದಕ್ಕೆ, ಪ್ರಭಾವ ಬೀರಿದ ಏನೋ ಒಂದರಿಂದ, ತೆರೆದುಕೊಂಡ ಭಾವನೆ ಅವನಿಗೆ ಬರುತ್ತದೆ. ಆದರೆ ಅದನ್ನು ಆ ರೀತಿಯಲ್ಲಿ ಗಟ್ಟಿಯಾಗಿ ಹಿಡಿದಿಟ್ಟುಕೊಳ್ಳಲು ಬಯಸಿದರೆ, ನೀವು ಎಲ್ಲವನ್ನೂ ಕಳೆದುಕೊಳ್ಳುತ್ತೀರಿ, ಏಕೆಂದರೆ ನೀವು ಗತಕಾಲವನ್ನು ಕಾಪಾಡಿಕೊಂಡು ಬರಲಾರಿರಿ, ಮನುಷ್ಯ ಯಾವಾಗಲೂ ಮುಂದೆ ಸಾಗುತ್ತಿರಬೇಕು, ಮುಂದುವರಿಯುತ್ತಲೇ ಇರಬೇಕು. ನಿಮ್ಮ ಇಡೀ ಸತ್ತೆಯನ್ನು ಈ ಹೊಸ ಸ್ತರದಲ್ಲಿ ಸಂಘಟಿಸಲು ಈ ಜ್ಞಾನೋದಯ ನಿಮ್ಮನ್ನು ತಯಾರು ಮಾಡಬೇಕು, ಅದರಿಂದಾಗಿ ಒಂದು ದಿನ, ಒಮ್ಮೆಗೆ ಉಚ್ಚಸ್ತರಕ್ಕೆ ಜಿಗಿದು ಹೋಗಲು ಶಕ್ತರಾಗುವಿರಿ.

**CWM, 7/35**

*

**ಗತಕಾಲಕ್ಕೆ ಗಟ್ಟಿಯಾಗಿ ಅಂಟಿಕೊಳ್ಳುವುದು: ಸಾಮಾನ್ಯವಾಗಿ ಕಂಡುಬರುವ ತಪ್ಪು**

ಗತಕಾಲದ ನೆನಪು ನಿಮಗೆ ಸಹಾಯ ಮಾಡುವಂತಿದ್ದರೆ ಅದನ್ನು ಕಾಪಾಡಿಕೊಂಡುಬರುವುದು ಒಳ್ಳೆಯದು, ಆದರೆ ನೀವು ಮುಂದೆ ಸಾಗುವುದನ್ನು ಅದು ತಡೆಹಿಡಿದು ನಿಲ್ಲಿಸಬಾರದು. ಒಂದು ಕಾಲಕ್ಕೆ ಒಳ್ಳೆಯದಾಗಿದ್ದ ಬೋಧನೆ ಇನ್ನೊಂದು ಕಾಲದಲ್ಲಿ ಹಾಗಿರುವುದಿಲ್ಲ, ಇದು ಸಂಪೂರ್ಣವಾಗಿ ನಿಶ್ಚಿತವಾದ ವಿಷಯ. . . .

. . . ಆದರೆ, ಸಾಮಾನ್ಯವಾಗಿ, ಗತಕಾಲಕ್ಕೆ ಅಂಟಿಕೊಂಡವರು ಅದನ್ನು ಅದಿರುವ ರೀತಿಯಲ್ಲಿ ಕಾಪಾಡಿಕೊಂಡು ಬರಲು ಬಯಸುತ್ತಾರೆ ಮತ್ತು ಮುಂದೆ ಸಾಗಿ ಹೋಗಲು ಬಯಸುವ ಇತರರು ಪ್ರತಿಯೊಂದನ್ನು ತಿರಸ್ಕರಿಸಿ ತಾವು ಕಂಡುಕೊಂಡದ್ದನ್ನು ಕಾಪಾಡಿಕೊಂಡು ಬರಲು ಬಯಸುತ್ತಾರೆ. ಇವರಿಬ್ಬರದೂ ಸಾಮಾನ್ಯ ಬಗೆಯ ತಪ್ಪಾಗಿರುತ್ತದೆ, ಎಂದರೆ ಅವರು ತಮ್ಮನ್ನು ಸೀಮಿತ ಗೊಳಿಸಿಕೊಂಡು, ತಮ್ಮ ಪ್ರಜ್ಞೆಯನ್ನು ವಿಸ್ತಾರಗೊಳಿಸಿಕೊಳ್ಳುವುದರ ಬದಲಾಗಿ ಸಂಕುಚಿತವಾದದ್ದನ್ನಾಗಿ ಮಾಡುತ್ತಾರೆ.

**CWM, 7/345**

*



ಕಂಪನವೊಂದು ಉಳಿದುಕೊಂಡು ಬರುವ ರೀತಿಯಲ್ಲಿ ಹಳೆಯ ರೂಪಗಳು ತಾಳಿಕೊಂಡು ಉಳಿಯಬಹುದು, ಆದರೆ ಐತಿಹಾಸಿಕವಾಗಿ ಅವುಗಳ ಉದ್ದೇಶ ಕ್ಷಣಿಕವಾದದ್ದು ಮತ್ತು ಒಂದರ ಸ್ಥಾನದಲ್ಲಿ ಇನ್ನೊಂದು ಬರುತ್ತಿರುತ್ತದೆ, ಅದರಿಂದಾಗಿ ಒಂದು ಹೆಜ್ಜೆ ಮುಂದಿರಿಸುವಂತಾಗುವುದು. ಮಾನವ ಕುಲ ಮಾಡುವ ತಪ್ಪೆಂದರೆ, ಯಾವಾಗಲೂ, ಹಿಂದುಳಿದದ್ದಕ್ಕೆ ತೂಗು ಹಾಕಿಕೊಂಡಿರು–ವುದು ಮತ್ತು ಗತಕಾಲ ಅನಂತಕಾಲದವರೆಗೆ ಶಾಶ್ವತವಾಗಿರುವಂತೆ ಮಾಡುವು–ದಾಗಿದೆ. ಈ ವಿಷಯಗಳು ಉಪಯುಕ್ತವಾಗಿದ್ದ ಸಮಯದಲ್ಲಿ ಅವುಗಳನ್ನು ಉಪಯೋಗಿಸಬೇಕು. ಏಕೆಂದರೆ, ಪ್ರತಿಯೊಬ್ಬನಿಗೆ ವ್ಯಕ್ತಿಗತ ಅಭಿವೃದ್ಧಿಯ ಇತಿಹಾಸವಿರುತ್ತದೆ, ಈ ಶಿಸ್ತುಪಾಲನೆಗಳು, ಕ್ಷಣಿಕಕಾಲ ಉಪಯುಕ್ತವಾಗಿದ್ದ ಹಂತಗಳಲ್ಲಿ ನೀವು ಸಾಗಿ ಹೋಗಬಹುದು, ಆದರೆ ಆ ಕ್ಷಣವನ್ನು ದಾಟಿ ಹೋದ ನಂತರ ನೀವು ಇನ್ನು ಬೇರೆ ಯಾವುದೋ ಒಂದರಲ್ಲಿ ಪ್ರವೇಶಿಸಬೇಕು ಮತ್ತು ಹಳೆಯದು ಐತಿಹಾಸಿಕವಾಗಿ ಉಪಯುಕ್ತವಾಗಿತ್ತು, ಆದರೆ ಈಗ ಅದು ಉಪಯುಕ್ತವಾಗಿ ಉಳಿದುಕೊಂಡಿಲ್ಲ ಎಂಬುದನ್ನು ನೋಡಬೇಕು. ಉದಾಹರಣೆಗೆ ಅಭಿವೃದ್ಧಿಯ ಒಂದು ಹಂತವನ್ನು ತಲುಪಿದವರು ಹಾಗು ಮಾನಸಿಕ ನಿಯಂತ್ರಣವನ್ನು ಪಡೆದವರು ಆದ ಜನರಿಗೆ, ನಿಶ್ಚಿತವಾಗಿ, ನಾನು "ಧಮ್ಮಪದವನ್ನು ಓದಿರಿ, ಅದನ್ನು ಕುರಿತು ಧ್ಯಾನ ಮಾಡಿರಿ" ಎಂದು ಹೇಳುವುದಿಲ್ಲ, ಅದು ಸಮಯವನ್ನು ಹಾಳು ಮಾಡುವುದಾಗಿರುತ್ತದೆ. ಆ ಹಂತವನ್ನು ದಾಟಿ ಆಚೆಗೆ ಹೋಗದೆ ಇದ್ದವರಿಗೆ ಅವಶ್ಯವಾಗಿದ್ದಲ್ಲಿ ನಾನು ಅದನ್ನು ಕೊಡುತ್ತೇನೆ. ಆದರೆ ಮನುಷ್ಯ, ಯಾವಾಗಲೂ, ತನ್ನ ಹೆಗಲ ಮೇಲೆ ಕೊನೆಗೊಳ್ಳದ ಭಾರವನ್ನು ಹೊತ್ತುಕೊಂಡಿರುತ್ತಾನೆ. ಗತಕಾಲದ ಯಾವುದನ್ನೂ ಬಿಟ್ಟುಕೊಡಲು ಅವನು ಬಯಸುವುದಿಲ್ಲ ಮತ್ತು ಹೆಚ್ಚು ಹೆಚ್ಚಾಗಿ, ಸಂಗ್ರಹ ಮಾಡಿದ ನಿರುಪಯುಕ್ತ ಭಾರದ ಕೆಳಗೆ ಬಾಗಿ ಹೋಗುತ್ತಾನೆ.

(ಆಧ್ಯಾತ್ಮಿಕ) ಮಾರ್ಗದಲ್ಲಿ ನಿಮಗೊಬ್ಬ ಮಾರ್ಗದರ್ಶಕನಿರುತ್ತಾನೆ, ಆದರೆ ಈ ಭಾಗದ ಮೇಲೆ ನೀವು ಪ್ರಯಾಣವನ್ನು ಕೈಕೊಂಡ ನಂತರ ಆ ಮಾರ್ಗವನ್ನು ಹಾಗೂ ಮಾರ್ಗದರ್ಶಕನನ್ನು ಬಿಟ್ಟುಕೊಟ್ಟು ಮುಂದೆ ಸಾಗಿರಿ! ಇದು ಕೈಕೊಳ್ಳಲು ಕಠಿಣವಾದ ಏನೋ ಒಂದೆಂದು ಜನರು ಭಾವಿಸುತ್ತಾರೆ. ಅವರಿಗೆ ಸಹಾಯಕವಾದ ಏನೋ ಒಂದರ ಮೇಲೆ ಅವರು ಹಿಡಿತ ಸಾಧಿಸಿದಾಗ, ಅವರು ಅದಕ್ಕೆ ಅಂಟಿಕೊಳ್ಳುತ್ತಾರೆ, ನಂತರ ಮುಂದೆ ಚಲಿಸಲು ಬಯಸುವುದಿಲ್ಲ. ಕ್ರಿಸ್ತಮತದಿಂದ ಪ್ರಗತಿ ಸಾಧಿಸಿದವರು ಅದನ್ನು ಬಿಟ್ಟುಕೊಡಲು ಬಯಸುವುದಿಲ್ಲ, ಅವರು ಅದನ್ನು

ತಮ್ಮ ಹೆಗಲಮೇಲೆ ಕೊಂಡೊಯ್ಯುತ್ತಾರೆ. ಬೌದ್ಧಮತದ ಸಹಾಯದಿಂದ ಪ್ರಗತಿ ಸಾಧಿಸಿದವರು ಅದನ್ನು ಬಿಟ್ಟುಬಿಡಲು ಬಯಸುವುದಿಲ್ಲ. ಅವರು ಅದನ್ನು ತಮ್ಮ ಹೆಗಲಮೇಲೆ ಕೊಂಡೊಯ್ಯುತ್ತಾರೆ ಮತ್ತು ಹಾಗಾಗಿ ಇದು ಮುಂದುವರಿದು ಹೋಗುವುದಕ್ಕೆ ಅಡೆತಡೆ ಉಂಟುಮಾಡುತ್ತದೆ ಮತ್ತು ನೀವು ಅನಿರ್ದಿಷ್ಟ ಕಾಲದವರೆಗೆ ತಡೆಗೊಳಗಾಗುತ್ತೀರಿ.

**CWM, 9/198**

*

ಧಾರ್ಮಿಕ ಬೋಧನೆ ಆಧ್ಯಾತ್ಮಿಕ ಬೋಧನೆಯೆಂದು ತಿಳಿದು ಗೊಂದಲಕ್ಕೀಡಾಗಬಾರದು. ಧಾರ್ಮಿಕ ಬೋಧನೆ ಗತಕಾಲಕ್ಕೆ ಸೇರಿದೆ ಮತ್ತು ಅದು ಪ್ರಗತಿಯನ್ನು ತಡೆಹಿಡಿಯುತ್ತದೆ. ಆಧ್ಯಾತ್ಮಿಕ ಬೋಧನೆ ಭವಿಷ್ಯತ್ಕಾಲಕ್ಕಾಗಿ ಇರುವ ಬೋಧನೆ–ಅದು ಪ್ರಜ್ಞೆಯನ್ನು ಪ್ರಕಾಶಕ್ಕೊಳಪಡಿಸುತ್ತದೆ ಮತ್ತು ಅದನ್ನು ಭವಿಷ್ಯತ್ತಿನ ಸಿದ್ಧಿಗಾಗಿ ತಯಾರು ಮಾಡುತ್ತದೆ. ಆಧ್ಯಾತ್ಮಿಕ ಬೋಧನೆ ಧರ್ಮಗಳ ಮೇಲ್ಗಡೆಗಿದ್ದು ವಿಶ್ವವ್ಯಾಪಿ ದೈವೀಸತ್ಯದತ್ತ ಹೆಣಗುತ್ತದೆ. ಅದು ಭಗವಂತನೊಡನೆ ನೇರ ಸಂಬಂಧಗಳಲ್ಲಿ ಪ್ರವೇಶಿಸುವುದನ್ನು ಕಲಿಸಿಕೊಡುತ್ತದೆ.

**CWM, 12/120**

*

**ಪ್ರಶ್ನೆ :** *ನಾನು ರಾಮಾಯಣ ಹಾಗೂ ಮಹಾಭಾರತಗಳ ಕತೆಗಳ ಮೇಲೆ ಹೆಚ್ಚು ಒತ್ತುಕೊಡುತ್ತ ಬಂದಿದ್ದೇನೆ, ಹಾಗೆಯೇ ಕಬೀರ, ಮೀರಾರಂತಹ ಸಂತರ ಭಜನೆಗಳಿಗೂ ಪ್ರಾಧಾನ್ಯ ನೀಡುತ್ತ ಬಂದಿದ್ದೇನೆ. ಈ ಹಳೆಯ ವಿಷಯಗಳನ್ನು ಮುಂದುವರಿಸಿಕೊಂಡು ಹೋಗುವುದು ನಿಮ್ಮ ಮಾರ್ಗಕ್ಕೆ ವಿರುದ್ಧವಾಗಿದೆಯೆ?*

**ಶ್ರೀಮಾತೆ :** ಎಳ್ಳಷ್ಟೂ ಇಲ್ಲ–ಮನೋಧರ್ಮ ಬಹಳ ಮಹತ್ವದ್ದು. ಗತಕಾಲ ಭವಿಷ್ಯತ್ತಿನತ್ತ ಜಿಗಿದು ಹೋಗುವುದಕ್ಕೆ ಒಂದು ಪ್ರೋತ್ಸಾಹಕರ ವಿಷಯವಾಗಬೇಕು, ಅದು ಮುಂದುವರಿದು ಹೋಗಲು ತಡೆಯನ್ನುಂಟು ಮಾಡುವ ಸರಪಳಿಯಾಗಬಾರದು. ನಾನು ಹೇಳಿದ ಹಾಗೆ ಎಲ್ಲವೂ ಗತಕಾಲ ಕುರಿತು ಇರುವ ಮನೋಧರ್ಮದ ಮೇಲೆ ಅವಲಂಬಿಸಿದೆ.

**CWM, 12/147**

*



ಅಭ್ಯಾಸದ ಎಲ್ಲ ವಿಷಯಗಳು ಇಲ್ಲವೆ ಆ ವಿಷಯಗಳಲ್ಲಿ ಬಹುಭಾಗ ಗತಕಾಲವನ್ನು ಕುರಿತಾಗಿರುತ್ತದೆ, ಅದರಿಂದ ನೀವು ವರ್ತಮಾನಕಾಲದ ಬಗ್ಗೆ ಹೆಚ್ಚು ಒಳ್ಳೆಯ ತಿಳಿವಳಿಕೆ ಪಡೆಯುವ ಭರವಸೆ ಹೊಂದಿರುತ್ತೀರಿ; ವಿದ್ಯಾರ್ಥಿಗಳು ಗತಕಾಲಕ್ಕೆ ಅಂಟಿಕೊಳ್ಳುವ, ಭವಿಷ್ಯದತ್ತ ನೋಡುವುದನ್ನು ತಿರಸ್ಕರಿಸುವ ಅಪಾಯವನ್ನು ತಪ್ಪಿಸಲು ನೀವು ಬಹಳ ಕಾಳಜಿ ತೆಗೆದುಕೊಳ್ಳಬೇಕು: ಗತಕಾಲದಲ್ಲಿ ಸಂಭವಿಸಿದುದೆಲ್ಲದರ ಉದ್ದೇಶ ಸದ್ಯ ಸಂಭವಿಸುತ್ತಿರುವುದನ್ನು ತಯಾರು ಮಾಡುವುದಕ್ಕಾಗಿತ್ತು ಮತ್ತು ಸದ್ಯ ಸಂಭವಿಸುತ್ತಿರುವುದೆಲ್ಲ ಭವಿಷ್ಯತ್ತಿನತ್ತ ದಾರಿ ಕಂಡುಕೊಳ್ಳುವುದಕ್ಕಾಗಿರುವ ತಯಾರಿಯಾಗಿರುತ್ತದೆ, ಅದಕ್ಕಾಗಿ ನಾವು ತಯಾರಿ ಮಾಡಿಕೊಳ್ಳುವುದು ಅತ್ಯಂತ ಮಹತ್ವದ್ದಾದ ವಿಷಯ ಎಂದು ವಿದ್ಯಾರ್ಥಿಗಳಿಗೆ ವಿವರಣೆ ನೀಡಬೇಕು.

ಅಂತರ್ಬೋಧೆಯನ್ನು ಅಭಿವೃದ್ಧಿಗೊಳಿಸಿಕೊಳ್ಳುವುದರ ಮೂಲಕ ಮನುಷ್ಯ ಭವಿಷ್ಯತ್ತಿಗಾಗಿ ಬದುಕಲು ತಯಾರಿ ಮಾಡಿಕೊಳ್ಳುತ್ತಾನೆ.

**CWM, 12/168**

*

**ಪ್ರಶ್ನೆ :** *ಶ್ರೀ ಅರವಿಂದರ ಯೋಗವನ್ನು ಅನುಸರಿಸುತ್ತಿರುವ ಸಾಧಕನ ಮನೋಭಾವ, ಗತಕಾಲದಲ್ಲಿ ಪೂಜಿಸುತ್ತಿದ್ದ ಹಾಗೂ ಸದ್ಯ ಪೂಜಿಸುವ ದೇವನ ಹಲವಾರು ರೂಪಗಳನ್ನು ಕುರಿತು ಯಾವ ರೀತಿಯದಾಗಿರಬೇಕು? ಅವನು ಆ ರೂಪಗಳನ್ನು ಪೂಜಿಸುವುದನ್ನು ಮುಂದುವರಿಸಿದರೆ ಅದು ಪ್ರಗತಿಗೆ ಅಡೆತಡೆ ಉಂಟುಮಾಡುತ್ತದೆಯೆ ಮತ್ತು ಅವನು ಸಿದ್ಧಿಸಿಕೊಳ್ಳಬೇಕಾದುದಕ್ಕೆ ತಡೆ ಉಂಟಾಗುತ್ತದೆಯೆ?*

**ಶ್ರೀಮಾತೆ :** ಪೂಜೆ ಮಾಡುವ ಎಲ್ಲರನ್ನು ಕುರಿತು ಸದಾಶಯದ ಸದ್ಭಾವನೆ ಇರಬೇಕು.

ಅಧಿಮಾನಸ ಸತ್ತೆಗಳೊಡನೆ ಸಂಬಂಧ ಈಗಾಗಲೇ ಏರ್ಪಟ್ಟಿದ್ದರೆ, ಪ್ರತಿಯೊಂದು ಸಂದರ್ಭದಲ್ಲಿ ಅದರದೇ ಪರಿಹಾರವಿರುತ್ತದೆ.

**CWM, 12/308**

*

**ಹಳೆಯ ಮಿತಿಗಳು ಮಾಯವಾಗುತ್ತವೆ, ಹೊಸ ಸಾಧ್ಯತೆಗಳು ಒಳಬರುತ್ತವೆ**

ಸಾಧ್ಯವಿದ್ದ ಸಂಯೋಜನೆಗಳ ಇಡಿಯಾದ ಗುಂಪಿನಲ್ಲಿ ಹೊಸ ಅಂಶವನ್ನು ಸೇರಿಸಿದ ಪ್ರತಿಸಲ ಅದು ಮಿತಿಗಳನ್ನು ಮುರಿದು ಹಾಕುವುದಕ್ಕೆ ಕಾರಣವಾಗುತ್ತದೆ: ಗತಕಾಲದ ಎಲ್ಲ ಮಿತಿಗಳನ್ನು ಮಾಯವಾಗಿಸುವಂತಹ ಏನೋ ಒಂದನ್ನು ಒಳಗೆ ಸೇರಿಸುವುದು ಮತ್ತು ಹೊಸ ಸಾಧ್ಯತೆಗಳು ಒಳಗೆ ಬಂದು ಹಳೆಯ ಸಾಧ್ಯತೆಗಳು ಅನಂತವಾಗಿ ಅನೇಕವಾಗುವಂತೆ ಮಾಡುವುದು ಆ ರೀತಿಯದಾಗಿರುತ್ತದೆ.

**CWM, 8/313** **– ಶ್ರೀಮಾತೆ**

*

ಭವಿಷ್ಯದತ್ತ ನೆಗೆತ ಮಾಡುವುದಕ್ಕಾಗಿ ಗತಕಾಲವನ್ನು, ಜಿಗಿತ ಮಾಡುವುದಕ್ಕಾಗಿ ಉಪಯೋಗಿಸುವ ಮಣೆಯಂತೆ, ಉಪಯೋಗಿಸಿರಿ.

**CWM, 15/70** **– ಶ್ರೀಮಾತೆ**

*

## ಗತಕಾಲದ ಚಾರಿತ್ರ್ಯದ ರೂಪತಾಳುವಿಕೆಗಳನ್ನು ಬದಲು ಮಾಡುವುದು

**ನೀವು ಆಗಬಾರದೆಂದು ಬಯಸುವುದನ್ನು ಸಾಧ್ಯವಿದ್ದಷ್ಟು ಪೂರ್ತಿಯಾಗಿ ಮರೆತುಬಿಡಿರಿ**

ಗತಕಾಲ ಏನೇ ಆಗಿರಲಿ, ಎಸಗಿದ ತಪ್ಪುಗಳು ಎಂತಹವೇ ಆಗಿರಲಿ, ಜೀವಿಸಿದ ಅಜ್ಞಾನ ಯಾವುದೇ ಬಗೆಯದಾಗಿರಲಿ, ಮನುಷ್ಯ ತನ್ನೊಳಗೆ ಪರಮೋಚ್ಚ ಪರಿಶುದ್ಧತೆಯನ್ನು ತನ್ನ ಆಳಾತಿಆಳದಲ್ಲಿ ಕೊಂಡೊಯ್ಯುತ್ತಾನೆ, ಅದು ಅದ್ಭುತ ಸಿದ್ಧಿಯಾಗಿ ರೂಪಾಂತರ ಪಡೆಯಬಹುದು.

ಯೋಚಿಸಬೇಕಾದ ಇಡೀ ವಿಷಯವೆಂದರೆ ಅದರ ಮೇಲೆ ಏಕಾಗ್ರತೆ ವಹಿಸುವುದಾಗಿದೆ ಮತ್ತು ಎಲ್ಲ ತೊಂದರೆಗಳು, ಅಡೆತಡೆಗಳು ಹಾಗೂ ಅಡಚಣೆಗಳು ಇವುಗಳನ್ನು ಕುರಿತು ಕಾಳಜಿ ಮಾಡದೆ ಇರುವುದಾಗಿದೆ.

*

ನೀವೇನಾಗಬೇಕೆಂದು ಬಯಸುತ್ತೀರೋ ಅದರ ಮೇಲಷ್ಟೇ ಏಕಾಗ್ರತೆ



ವಹಿಸಿರಿ, ಆಗಬಾರದೆಂದು ಬಯಸುವುದನ್ನು ಸಾಧ್ಯವಿದ್ದಷ್ಟು ಪೂರ್ತಿಯಾಗಿ ಮರೆತುಬಿಡಿರಿ.

**CWM, 4/215** **– ಶ್ರೀಮಾತೆ**

*

**ಅಚಂಚಲ ಮನಸ್ಸು ಮತ್ತು ಅಚಂಚಲ ಸಂಕಲ್ಪದ ಆವಶ್ಯಕತೆ**

ತಾಳ್ಮೆಯುಳ್ಳ, ಪಟ್ಟುಹಿಡಿಯುವ ಉದ್ರೇಕಕ್ಕಾಗಲಿ ಇಲ್ಲವೆ ಧೈರ್ಯಗುಂದುವಿಕೆಗಾಗಲಿ ಶರಣಾಗುವುದನ್ನು ತಿರಸ್ಕರಿಸುವ, ಆದರೆ ಸತ್ತೆಯಲ್ಲಿ ಅವಶ್ಯವಾಗಿರುವ ಬದಲಾವಣೆಯ ಮೇಲೆ ಪ್ರಶಾಂತತೆಯಿಂದ ಒತ್ತುನೀಡುವ ಅಚಂಚಲ ಮನಸ್ಸು ಮತ್ತು ಅಚಂಚಲ ಸಂಕಲ್ಪ ಅವಶ್ಯವಾಗಿವೆ. ಈ ಬಗೆಯ ಅಚಂಚಲ ಸಂಕಲ್ಪ ಕೊನೆಯಲ್ಲಿ ವಿಫಲವಾಗುವುದಿಲ್ಲ. ಅದರ ಪರಿಣಾಮ ಅನಿವಾರ್ಯವಾದದ್ದು. ಅದು ಮೊದಲಿಗೆ, ಎಚ್ಚತ್ತುಕೊಂಡಿರುವ ಸ್ಥಿತಿಯಲ್ಲಿ, ಪ್ರಾಣಿಕಕ್ಕೆ ರೂಢಿಗತವಾದ ಕಾರ್ಯಗಳನ್ನಷ್ಟೇ ಅಲ್ಲ, ಆದರೆ ಅವುಗಳ ಹಿಂದಿರುವ ಪ್ರಚೋದನೆಗಳನ್ನೂ ಕೂಡ ತಿರಸ್ಕರಿಸಬೇಕು, ಆ ಪ್ರಚೋದನೆಗಳು ಹಾಗೂ ಅವುಗಳ ಹಿಂದಿರುವ ಸೂಚನೆಗಳು ಯಾರಲ್ಲಿ ಪ್ರಕಟವಾಗಿರುತ್ತವೆಯೋ ಅಂತಹನಲ್ಲಿ ಅವು ಬಾಹ್ಯದಿಂದ ಬಂದಿರುತ್ತವೆ ಎಂಬುದನ್ನು ಅವನ ಸಂಕಲ್ಪ ತಿಳಿದುಕೊಳ್ಳಬೇಕು. ಒಮ್ಮೆ ರೂಢಿಗತವಾದ ಯೋಚನೆಗಳನ್ನು ಹಾಗೂ ಚಲನೆಗಳನ್ನು ಎಚ್ಚತ್ತಿರುವ ಸ್ಥಿತಿಯಲ್ಲಿ ತಿರಸ್ಕರಿಸಿದ್ದಾಗಲೂ ಕೂಡ ಅವು ನಿದ್ದೆಯಲ್ಲಿ, ಕನಸಿನಲ್ಲಿ ಮರಳಿ ಬರಬಹುದು, ಏಕೆಂದರೆ ಅವು ಅಚೇತನದ ಸತ್ತೆಯಲ್ಲಿ ಉಳಿದುಕೊಂಡಿರುತ್ತವೆ. ಆದರೆ ಎಚ್ಚತ್ತಿರುವ ಸ್ಥಿತಿಯನ್ನು ಪೂರ್ತಿಯಾಗಿ ನಿರ್ಮಲಗೊಳಿಸಿದರೆ ಈ ಕನಸಿನಲ್ಲಿಯ ಸ್ಥಿತಿಗಳು ಕ್ರಮೇಣ ಮಾಯವಾಗಬಹುದು, ಏಕೆಂದರೆ ಅವು ಅಚೇತನದಲ್ಲಿರುವ ತಮ್ಮ ಆಹಾರವನ್ನು, ಮನಸ್ಸಿನ ಮೇಲಾದ ಪ್ರಭಾವವನ್ನು ಕ್ರಮೇಣ ಕಳೆದುಕೊಳ್ಳುತ್ತವೆ.

(1) ಈ ವಿಷಯಗಳು ಯಾವುದೇ ನಿಜವಾದ ನೈತಿಕ ನಡತೆಗೆಟ್ಟತನದಿಂದ ಬರುವುದಿಲ್ಲ ಎಂಬುದನ್ನು ಅರಿವಿಗೆ ತಂದುಕೊಳ್ಳಿರಿ, ಏಕೆಂದರೆ ಅದು ಮನಸ್ಸೇ ಸ್ವತಃ ಭ್ರಷ್ಟವಾದಾಗ ಮತ್ತು ವಿಕೃತಿಗೊಂಡ ಪ್ರಾಣಿಕ ಪ್ರಚೋದನೆಗಳಿಗೆ ಆಧಾರ–ವಾದಾಗ ಮಾತ್ರ ಅಸ್ತಿತ್ವದಲ್ಲಿರುತ್ತದೆ. ಮನಸ್ಸು ಮತ್ತು ಸಂಕಲ್ಪ ತಿರಸ್ಕರಿಸುವಲ್ಲಿ ನೈತಿಕ ಸತ್ತೆ ದೃಢವಾಗಿರುತ್ತದೆ ಮತ್ತು ಅದು ಕೇವಲ ಪ್ರಾಣಿಕ ಭಾಗಗಳ ಇಲ್ಲವೆ ನರವ್ಯೂಹದ ದೌರ್ಬಲ್ಯ ಇಲ್ಲವೆ ಕಾಯಿಲೆ ಇರುವ ಸಂದರ್ಭದ್ದಾಗಿರುತ್ತದೆ.

(2) ಗತಕಾಲವನ್ನು ಕುರಿತು ಚಿಂತೆಗೊಳಗಾಗುವುದು ಬೇಡ, ಆದರೆ ತಾಳ್ಮೆಯುಳ್ಳ ಭರವಸೆ ಮತ್ತು ಆತ್ಮವಿಶ್ವಾಸದೊಂದಿಗೆ ಭವಿಷ್ಯದತ್ತ ನಿಮ್ಮ ಮುಖವನ್ನು ಹೊರಳಿಸಿರಿ. ಗತಕಾಲದ ವಿಫಲತೆ ಕುರಿತು ಚಿಂತಿಸುವುದರಿಂದ ನಿಮ್ಮ ಆರೋಗ್ಯವನ್ನು ಮರಳಿ ಪಡೆಯುವುದಕ್ಕೆ ತಡೆಯುಂಟಾಗುತ್ತದೆ ಮತ್ತು ನಿಮ್ಮ ಮನಸ್ಸು ಹಾಗೂ ಸಂಕಲ್ಪ ದುರ್ಬಲಗೊಳ್ಳುತ್ತವೆ, ಚಾರಿತ್ರ್ಯದ ಮರುನಿರ್ಮಾಣದ ಕಾರ್ಯದಲ್ಲಿ ಹಾಗೂ ಸ್ವಂತದ ಮೇಲೆ ಜಯ ಸಾಧಿಸುವುದರಲ್ಲಿ ತಡೆ–ಯುಂಟಾಗುತ್ತದೆ.

(3) ಯಶಸ್ಸು ಒಮ್ಮೆಗೆ ಬರದೆ ಹೋದರೆ ಧೈರ್ಯಗುಂದುವಿಕೆಗೆ ಶರಣಾಗುವುದು ಬೇಡ, ಆದರೆ ತಾಳ್ಮೆಯಿಂದ, ಏಕಪ್ರಕಾರವಾಗಿ ಕಾರ್ಯ ಪೂರ್ತಿಯಾಗುವವರೆಗೆ ಮುಂದುವರಿದುಕೊಂಡು ಹೋಗಿರಿ.

(4) ನಿಮ್ಮ ದೌರ್ಬಲ್ಯದ ಮೇಲೆ ನೆಲೆಸುತ್ತ ನಿಮ್ಮ ಮನಸ್ಸು ಪೀಡೆಗೊಳ ಗಾಗುವಂತೆ ಮಾಡಬೇಡಿರಿ. ಆ ದೌರ್ಬಲ್ಯಗಳು ನಿಮ್ಮನ್ನು ಜೀವನದುದ್ದಕ್ಕೂ ಅಯೋಗ್ಯರನ್ನಾಗಿ ಮಾಡುತ್ತವೆ, ಮಾನವ ಆದರ್ಶದ ನೆರವೇರಿಕೆ ಕಂಡುಕೊಳ್ಳದಂತೆ ಮಾಡುತ್ತವೆ ಎಂದು ಕಲ್ಪನೆ ಮಾಡಿಕೊಳ್ಳಬೇಡಿರಿ. ಅಲ್ಲಿ ಅವು ಇವೆ ಎಂದು ಒಮ್ಮೆ ಗುರುತಿಸಿದ ನಂತರ ನಿಮ್ಮ ಬಲದ ಮೂಲಗಳನ್ನು ಅರಸಿರಿ ಮತ್ತು ಹೆಚ್ಚಾಗಿ ಅವುಗಳ ಮೇಲೆ ಹಾಗೂ ವಿಜಯದ ನಿಶ್ಚಿತತೆಯ ಮೇಲೆ ನೆಲೆಸಿರಿ.

**CWSA, 36/306** **– ಶ್ರೀ ಅರವಿಂದರು**

*

**ಪ್ರಜ್ಞೆಯ ಹಿಮ್ಮೊಗವಾಗುವಿಕೆ**

**ಪ್ರಶ್ನೆ :** *ಮನುಷ್ಯನೊಬ್ಬ ಕೆಟ್ಟವನು ಹಾಗೂ ದುಷ್ಟನು ಆಗಿದ್ದರೆ, ಅವನು ಒಮ್ಮೆಗೆ ಬದಲಾಗಲು ನಿರ್ಧರಿಸಿದರೆ, ಆಗ ಅವನು ಕೆಟ್ಟದಾದ ಏನೋ ಒಂದನ್ನು ಕೈಕೊಂಡಾಗ, ಪ್ರತಿಸಲ ಎಚ್ಚರಿಕೆ ನೀಡುವ ಅವನಲ್ಲಿರುವ ಚಿಕ್ಕ ಧ್ವನಿಯನ್ನು ಕೇಳಿಸಿಕೊಳ್ಳುತ್ತಾನೆಯೆ?*

**ಶ್ರೀಮಾತೆ :** ಹಿಮ್ಮೊಗವಾಗುವಿಕೆ ಹಾಗೂ ಆಂತರಿಕವಾಗಿ ಆದ ಪರಿವರ್ತನೆ ಇವುಗಳ ಮೇಲೆ ಪ್ರತಿಯೊಂದು ಅವಲಂಬಿಸಿರುತ್ತದೆ. ಬದಲಾವಣೆ ಒಮ್ಮೆಗೆ ಆಗಿದ್ದರೆ, ಅದು ಹಾಗಾಗುವುದು ನಿಜ, ಆ ಮನುಷ್ಯ ಆ ಚಿಕ್ಕ ಧ್ವನಿಯ ಬಗ್ಗೆ



ಕೂಡಲೆ ಅರಿವುಳ್ಳವನಾಗಬಹುದು. ಅದು ಕ್ರಮೇಣ ಸಂಭವಿಸಿದ್ದು ಆಗಿದ್ದರೆ, ಅತ್ಯಂತ ಒಳ್ಳೆಯ ಪರಿಣಾಮಗಳೂ ಕೂಡ ಕ್ರಮೇಣ ಆಗುತ್ತವೆ. ಅದು ಸಂಪೂರ್ಣವಾಗಿ ಪ್ರತಿಯೊಂದು ಸಂದರ್ಭದ ಮೇಲೆ ಅವಲಂಬಿಸಿರುತ್ತದೆ, ಅದನ್ನು ಕುರಿತು ಹೇಳಲಾಗದು. ಒಂದು ಬಗೆಯ ಪರದೆ ಹರಿದು ಹೋಗುವಿಕೆ, ಜ್ಞಾನೋದಯ ಉಂಟಾಗುವಿಕೆ ಇದ್ದಾಗ ಸರಿ, ಮನುಷ್ಯನಿಗೆ ಕೂಡಲೆ ಆಂತರಿಕ ಸೂಚನೆ ದೊರಕುತ್ತದೆ. ಅದು ಪೂರ್ವಸ್ಮರಣೆಯ ರೂಪದ್ದೂ ಕೂಡ ಆಗಬಹುದು ಎಂದರೆ ಗತಕಾಲದ ಕೆಲವೊಂದು ಕ್ರಿಯೆಗಳನ್ನು ಕುರಿತು ಯೋಚಿಸುತ್ತಿದ್ದಾಗ ಮನುಷ್ಯ ತಾನು ಈಗಿರುವುದಕ್ಕೆ ಹೋಲಿಸಿದರೆ ಮೊದಲು ಏನಾಗಿದ್ದ ಎಂಬುದರ ಬಗ್ಗೆ ಸ್ಪಷ್ಟ ನೋಟ ಕಂಡುಕೊಳ್ಳುತ್ತಾನೆ. ಅಲ್ಲದೆ ಸತ್ತೆಯಲ್ಲಿ ನಿಜವಾದ ಬದಲಾವಣೆಯಾದ ಪ್ರತಿಸಲ, ಮನುಷ್ಯ ದೋಷವೊಂದರ ಮೇಲೆ ಜಯ ಸಾಧಿಸಿದ ಪ್ರತಿಸಲ ಒಟ್ಟು ವಿಷಯಗಳ ಬಗ್ಗೆ ಅವನಿಗೆ ಸ್ಪಷ್ಟ ದೃಷ್ಟಿಯಿರುತ್ತದೆ, ಬಹಳ ಸ್ವಾಭಾವಿಕವೆಂದು ತೋರಿಬರುವ ಅವು ಈಗ ಪರದೆಯ ಮೇಲೆ ಕಪ್ಪು ಚುಕ್ಕೆಗಳು ಹಾದು ಹೋಗುತ್ತಿರುವಂತಿರುತ್ತವೆ; ನೀವು ಮೂಲವನ್ನು, ಕಾರಣ–ಗಳನ್ನು ಹಾಗೂ ಪರಿಣಾಮಗಳನ್ನು ನೋಡುತ್ತೀರಿ. ನಿಮ್ಮಲ್ಲಿ ನಿಖರವಾದ ನೆನಪಿನ ಶಕ್ತಿ ಇದ್ದರೆ ಮತ್ತು ಕೆಲಕಾಲದವರೆಗೆ, ಹತ್ತುವರ್ಷಗಳ ಕಾಲಾವಧಿಯವರೆಗೆ ಎಂದು ತಿಳಿಯೋಣ, ನಿಮ್ಮನ್ನು ಪರಿವರ್ತನೆಗೊಳಪಡಿಸಿಕೊಳ್ಳುವ ಪ್ರಯತ್ನವನ್ನು ನಿಷ್ಕಪಟರಾಗಿ ಮಾಡಿದ್ದರೆ, ನಿಮ್ಮನ್ನು ಹೆಚ್ಚು ಹೆಚ್ಚಾಗಿ ಮುಡಿಪಾಗಿರಿಸಿಕೊಂಡಿದ್ದರೆ ಮತ್ತು ಅದಕ್ಕೂ ಮೊದಲು ನೀವು ಹೇಗಿದ್ದಿರಿ ಎಂಬುದನ್ನು ನೆನಪಿಗೆ ತಂದುಕೊಂಡರೆ "ಅದು ಸಾಧ್ಯವಿಲ್ಲ, ನಾನು ಹಾಗಿರಲಿಲ್ಲ!" ಎಂದು ಹೇಳುವಿರಿ. ಆದರೆ ನಿಜವಾಗಿ ನೀವು ಹಾಗಿದ್ದಿರಿ. ಮೊದಲು ನೀವೇನಾಗಿದ್ದಿರಿ, ಮತ್ತು ಮೊದಲು ನಿಮಗೆ ಯಾವುದು ಸ್ವಾಭಾವಿಕ ಎಂದು ಕಂಡುಬರುತ್ತಿತ್ತು ಎಂಬುದು ಹಾಗೂ ಈಗ ಯಾವುದು ನಿಮಗೆ ಸ್ವಾಭಾವಿಕ ಎಂದೆನಿಸುತ್ತದೆ ಎಂಬುದು ಇವೆರಡರ ನಡುವೆ ಎಷ್ಟೊಂದು ಅಂತರವಿರುತ್ತದೆ, ನೀವು ಅದೇ ವ್ಯಕ್ತಿಯಾಗಿದ್ದಿರಿ ಎಂಬುದನ್ನು ನಂಬಲು ಸಾಧ್ಯವಾಗುವುದಿಲ್ಲ. ನೀವು ಪ್ರಗತಿ ಸಾಧಿಸಿದ್ದೀರಿ ಎಂಬುದಕ್ಕೆ ಇದು ಅತ್ಯಂತ ಖಂಡಿತ ಸೂಚನೆ.

**CWM, 4/102**

*

**ಪ್ರಶ್ನೆ :** *ಸ್ವಭಾವವನ್ನು ಬದಲು ಮಾಡಬೇಕು ಮತ್ತು ಸತ್ತೆಯ ಭಿನ್ನ ಭಾಗಗಳ ಮೇಲೆ ಪ್ರಭುತ್ವ ಪಡೆಯಬೇಕು ಎಂಬುದಷ್ಟೇ ಅದಾಗಿದೆಯೆ, ಕೈಕೊಳ್ಳಬೇಕಾದ ಕಾರ್ಯ ಅದೇ ಆಗಿದೆಯೆ?*

**ಶ್ರೀಮಾತೆ :** ಒಂದರ ಹಿಂದೆ ಒಂದಿರುತ್ತದೆ. ಮೊಟ್ಟಮೊದಲಿಗೆ ಮನುಷ್ಯ ಅರಿವುಳ್ಳವನಾಗಬೇಕು, ನಂತರ ನಿಯಂತ್ರಿಸಬೇಕು, ಪ್ರಭುತ್ವವನ್ನು ಮುಂದುವರಿಸಿಕೊಂಡು ಹೋಗುತ್ತ ಮನುಷ್ಯ ತನ್ನ ಚಾರಿತ್ರ್ಯವನ್ನು ಬದಲು ಮಾಡಬೇಕು. ಚಾರಿತ್ರ್ಯದ ಬದಲಾವಣೆ ಕೊನೆಗೆ ಬರುತ್ತದೆ, ಕೆಟ್ಟ ಚಾಳಿಗಳು, ಹಳೆಯ ರೂಢಿಗಳು ಕಳಚಿ ಹೋಗಿ ಚಾರಿತ್ರ್ಯ ಬದಲಾಗುವುದಕ್ಕೆ ದೀರ್ಘ ಕಾಲ ಬೇಕಾಗುತ್ತದೆ.

ಮೇಲಿಂದ ಮೇಲೆ ಖಿನ್ನತೆಗೆ ಒಳಗಾಗುವ ಮನುಷ್ಯನೊಬ್ಬನ ಉದಾಹರಣೆಯನ್ನು ತೆಗೆದುಕೊಳ್ಳೋಣ. ವಿಷಯಗಳು ಅವನು ಬಯಸಿದ ರೀತಿಯಲ್ಲಿ ನಿಖರವಾಗಿ ಇರದೆ ಇದ್ದಾಗ ಖಿನ್ನತೆಗೆ ಒಳಗಾಗುತ್ತಾನೆ. ಹಾಗಾಗಿ ಮೊಟ್ಟಮೊದಲಿಗೆ ಅವನು ತನ್ನ ಖಿನ್ನತೆಯ ಬಗ್ಗೆ ಹಾಗೂ ಆ ಖಿನ್ನತೆಗೆ ಇರುವ ಕಾರಣದ ಬಗ್ಗೆ ಅರಿವುಳ್ಳವನಾಗಬೇಕು, ಅದು ಅಷ್ಟು ಸುಲಭವಾಗಿ ಏಕೆ ಬರುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕು. ಒಮ್ಮೆ ಅವನು ಅರಿವುಳ್ಳವನಾದ ನಂತರ ಖಿನ್ನತೆಗಳ ಮೇಲೆ ನಿಯಂತ್ರಣ ಪಡೆಯಬೇಕು, ಖಿನ್ನತೆಗೆ ಕಾರಣವಿದ್ದಾಗಲೂ ಖಿನ್ನತೆಗೆ ಒಳಗಾಗುವುದನ್ನು ನಿಲ್ಲಿಸಬೇಕು–ತನ್ನ ಖಿನ್ನತೆಯ ಮೇಲೆ ಪ್ರಭುತ್ವ ಪಡೆದು ಅದು ಬರುವುದನ್ನು ನಿಲ್ಲಿಸಬೇಕು. ಸಾಕಷ್ಟು ದೀರ್ಘಕಾಲದವರೆಗೆ ಈ ಕಾರ್ಯವನ್ನು ಕೈಕೊಂಡು ಮುಕ್ತಾಯ ಕಂಡುಕೊಂಡ ನಂತರ ಸ್ವಭಾವ ಖಿನ್ನತೆಗೆ ಒಳಗಾಗುವ ರೂಢಿಯನ್ನು ಕಳೆದುಕೊಳ್ಳುತ್ತದೆ, ಮೊದಲಿನ ರೀತಿಯಲ್ಲಿ ಪ್ರತಿಕ್ರಿಯೆ ತೋರಿಸುವುದಿಲ್ಲ, ಸ್ವಭಾವ ಬದಲಾಗಿರುತ್ತದೆ.

**CWM, 4/340–41**

*

**ಗತಕಾಲದ ದೋಷಗಳ ಪರಿಣಾಮದಿಂದ ಪಾರಾಗುವುದು**

ಮನುಷ್ಯ ತನ್ನ ತಪ್ಪುಗಳನ್ನು ಪುನರಾವರ್ತಿಸುತ್ತಿರುವವರೆಗೆ ಏನನ್ನೂ ತೆಗೆದುಹಾಕಲಾಗುವುದಿಲ್ಲ, ಏಕೆಂದರೆ ಅವನು ಅವುಗಳನ್ನು ಪ್ರತಿ ನಿಮಿಷ ಪುನಃ ಸೃಷ್ಟಿಮಾಡುತ್ತಿರುತ್ತಾನೆ. ಗಂಭೀರವಾದ ಇಲ್ಲವೆ ಗಂಭೀರವಾಗಿರದ ತಪ್ಪನ್ನು ಮನುಷ್ಯ ಮಾಡಿದಾಗ ಅದರ ಪರಿಣಾಮ ಅವನ ಜೀವನದಲ್ಲಾಗುತ್ತದೆ, ಕರ್ಮದ



ರೂಪದಲ್ಲಿ ಉಳಿದುಕೊಳ್ಳುತ್ತದೆ, ಅದನ್ನು ಅವನು ಬರಿದು ಮಾಡಬೇಕಾಗುತ್ತದೆ, ಆದರೆ ಅವನು ದೈವೀಕೃಪೆಯತ್ತ ಹೊರಳಿದರೆ ಅದಕ್ಕೆ ಪರಿಣಾಮಗಳನ್ನು ತೆಗೆದುಹಾಕುವ ಸಾಮರ್ಥ್ಯವಿರುತ್ತದೆ, ಅದಕ್ಕಾಗಿ ಅವನು ಆ ತಪ್ಪನ್ನು ಪುನಃ ಮಾಡಬಾರದು. ಮನುಷ್ಯ ಒಂದೇ ಬಗೆಯ ಹೆಡ್ಡತನವನ್ನು ಅನಿಶ್ಚಿತಕಾಲದವರೆಗೆ ಮುಂದುವರಿಸಿಕೊಂಡು ಹೋಗಬಹುದು ಮತ್ತು ದೈವೀಕೃಪೆ ಅದನ್ನು ಅನಿಶ್ಚಿತಕಾಲದವರೆಗೆ ತೆಗೆದುಹಾಕುತ್ತಿರುತ್ತದೆ ಎಂದು ಯೋಚಿಸಬಾರದು; ಅದು ಆ ರೀತಿ ಸಂಭವಿಸುವುದಿಲ್ಲ!

ಗತಕಾಲವನ್ನು ಸಂಪೂರ್ಣವಾಗಿ ಪರಿಶುದ್ಧಗೊಳಿಸಬಹುದು, ನಿರ್ಮಲವಾ–ಗಿಸಬಹುದು, ಅದೆಷ್ಟರ ಮಟ್ಟಿಗೆಂದರೆ ಭವಿಷ್ಯತ್ತಿನ ಮೇಲೆ ಕಿಂಚಿತ್ತೂ ಪರಿಣಾಮ ವನ್ನು ಉಂಟುಮಾಡದ ಹಾಗೆ ಮಾಡಬಹುದು; ಆದರೆ ಅದಕ್ಕೆ ನಿಬಂಧನೆ ಇದೆ. ಮನುಷ್ಯ ಅದನ್ನು ಮತ್ತೆ ನಿರಂತರ ವರ್ತಮಾನ ಕಾಲದ ವಿಷಯವನ್ನಾಗಿ ಮಾಡಬಾರದು, ಅವನೇ ಸ್ವತಃ ತನ್ನಲ್ಲಿ ಕೆಟ್ಟ ಕಂಪನಗಳನ್ನು ನಿಲ್ಲಿಸಬೇಕು, ಅದೇ ಕಂಪನಗಳನ್ನು ಅನಿಶ್ಚಿತಕಾಲದವರೆಗೆ ಪುನರುತ್ಪಾದನೆ ಮಾಡುತ್ತ ಹೋಗಬಾರದು.

**CWM, 8/58**

*

ಜೀವನದಲ್ಲಿರುವ ಏಕೈಕ ಸುರಕ್ಷಿತತೆ, ಗತಕಾಲದ ದೋಷಗಳ ಪರಿಣಾಮದಿಂದ ಪಾರಾಗುವ ಮಾರ್ಗ ಎಂದರೆ ದೈವೀ ಸಾನ್ನಿಧ್ಯದೊಡನೆ ಏಕತೆ ಪಡೆಯುವತ್ತ ಆಂತರಿಕ ಅಭಿವೃದ್ಧಿ ಮಾಡಿಕೊಳ್ಳುವುದಾಗಿದೆ, ಆ ಸಾನ್ನಿಧ್ಯ ಮಾತ್ರ ಏಕೈಕ ಪರಿಣಾಮಕಾರಿ ಮಾರ್ಗದರ್ಶಕ, ನಮ್ಮ ಸತ್ತೆಯ ಹಾಗೂ ಎಲ್ಲ ಸತ್ತೆಗಳ ಏಕೈಕ ದೈವೀ ಸತ್ಯ.

**CWM, 10/275**

*

**ಪ್ರಶ್ನೆ :** *ಗತಕಾಲದ ಕರ್ಮ ಸಾಧನೆಯ ಮಾರ್ಗದಲ್ಲಿ ಅಡ್ಡ ಬರುವುದಿಲ್ಲವೆ?*

**ಶ್ರೀಮಾತೆ :** ಭಗವಂತನಿಗೆ ಸಂಪೂರ್ಣವಾಗಿ ಮುಡಿಪಾಗಿರಿಸಿಕೊಳ್ಳುವಿಕೆ ಗತಕಾಲ ದಲ್ಲಿ ಮನುಷ್ಯ ಆಗಿದ್ದನ್ನು ಅಳಿಸಿ ಹಾಕುತ್ತದೆ.

**CWM, 15/72**

*

ನನ್ನ ಮುದ್ದು ಮಗು, ನಿನ್ನ ಪ್ರಾರ್ಥನೆಯನ್ನು ಕೇಳಿಸಿಕೊಳ್ಳಲಾಗಿದೆ ನಿನ್ನ ಗತಕಾಲ ಮಾಯವಾಗಿದೆ.

ಪ್ರಜ್ಞೆಯಲ್ಲಿ, ಪ್ರಕಾಶದಲ್ಲಿ ಹಾಗೂ ಶಾಂತಿಯಲ್ಲಿ ಬೆಳೆಯಲು ತಯಾರಿ ಮಾಡಿಕೋ.

ನಮ್ಮ ಆಶೀರ್ವಾದಗಳು ಸತತ ನಿನ್ನ ಜೊತೆಗಿರುತ್ತವೆ.

**CWM, 15/72**

*

**ಪರಮೋಚ್ಚ ಪ್ರೇಮ ಇಡೀ ಗತಕಾಲವನ್ನು ಕರಗಿಸಬಲ್ಲದು**

ಅದರ ಸಾರದಲ್ಲಿ ಹಾಗೂ ಮೂಲದಲ್ಲಿ ದೈವೀ ಪ್ರೇಮ ಜ್ವಾಲೆಯ ಹಾಗಿರುತ್ತದೆ, ಶ್ವೇತವರ್ಣದ್ದಾದ ಆ ಜ್ವಾಲೆ ಎಲ್ಲ ಪ್ರತಿರೋಧಗಳ ಮೇಲೆ ಜಯಸಾಧಿಸುತ್ತದೆ. ಇದನ್ನು ನೀವೇ ಅನುಭವಕ್ಕೆ ತಂದುಕೊಳ್ಳಬಹುದು. ನಿಮ್ಮ ಸತ್ತೆಯಲ್ಲಿ ತೊಂದರೆ ಏನೇ ಇರಲಿ, ಸಂಗ್ರಹವಾದ ದೋಷಗಳ, ಅಜ್ಞಾನದ, ಅಸಮರ್ಥತೆಯ ಹಾಗೂ ದುಷ್ಟ ಸಂಕಲ್ಪದ ಭಾರ ಎಷ್ಟೇ ಇರಲಿ ಈ ಪರಿಶುದ್ಧ ಸಾರಭೂತ, ಪರಮೋಚ್ಚ ದೈವೀ ಪ್ರೇಮದ ಒಂದು ಸೆಕೆಂಡಿನ ಕಾಲ ಎಲ್ಲವನ್ನೂ ಕರಗಿಸಿಬಿಡುತ್ತದೆ, ಒಂದು ಕ್ಷಣದಲ್ಲಿ ಇಡೀ ಗತಕಾಲ ಮಾಯವಾಗಬಹುದು, ಅದರ ಸಾರದಲ್ಲಿ ಅದನ್ನು ಒಂದು ಕ್ಷಣಕಾಲ ಸ್ಪರ್ಶಿಸಿದಿರಾದರೆ ಇಡೀ ಭಾರ ನಶಿಸಿ ಹೋಗುತ್ತದೆ.

**CWM, 10/72**

*

**ನಿಮ್ಮನ್ನು ಭವಿಷ್ಯತ್ಕಾಲಕ್ಕೆ ಕೊಟ್ಟುಕೊಳ್ಳಿರಿ**

**ಪ್ರಶ್ನೆ :** *ನನಗೆ ಇಷ್ಟೊಂದು ಗಟ್ಟಿಯಾಗಿ ಅಂಟಿಕೊಂಡಿರುವ ಗತಕಾಲವನ್ನು ಹೇಗೆ ತೊಡೆದು ಹಾಕಬೇಕೆಂಬುದನ್ನು ದಯವಿಟ್ಟು ನನಗೆ ತಿಳಿಸಿಕೊಡಿರಿ.*

**ಶ್ರೀಮಾತೆ :** ಗತಕಾಲವನ್ನು ತೊಡೆದು ಹಾಕುವುದು ಬಹಳ ಕಠಿಣವಾದದ್ದೆಂದು ತೋರಿಬರುತ್ತದೆ, ಅದನ್ನು ಕೈಕೊಳ್ಳುವುದು ಬಹುಮಟ್ಟಿಗೆ ಅಸಾಧ್ಯ ಎಂದು ಕಂಡುಬರುತ್ತದೆ.



ಆದರೆ ನಿನ್ನನ್ನು ಇಡಿಯಾಗಿ, ಏನನ್ನೂ ಕಾದಿರಿಸಿಕೊಳ್ಳದೆ ಭವಿಷ್ಯತ್ಕಾಲಕ್ಕೆ ಕೊಟ್ಟುಕೊಳ್ಳಬಲ್ಲೆಯಾದರೆ, ಮತ್ತು ಈ ಕೊಡುವಿಕೆಯನ್ನು ಸತತ ನವೀಕರಿಸುತ್ತಿದ್ದರೆ ಗತಕಾಲ ತನ್ನಷ್ಟಕ್ಕೆ ಬಿದ್ದುಹೋಗುತ್ತದೆ, ನಂತರ ಅದು ನಿನಗೆ ಆತಂಕ ಉಂಟುಮಾಡುವುದಿಲ್ಲ.

**CWM, 16/364**

*

**ಹಳೆಯ ರೂಢಿಗಳು ಹಾಗೂ ರೂಪತಾಳುವಿಕೆಗಳು**

**ಪ್ರಶ್ನೆ :** *"ಹಳೆಯ ರೂಢಿಗಳು" ಹಾಗೂ "ರೂಪತಾಳುವಿಕೆಗಳು" ಇವುಗಳನ್ನು ಕುರಿತು ಶ್ರೀ ಅರವಿಂದರು ಹೇಳಿದ್ದಾರೆ, ಇವುಗಳಲ್ಲಿರುವ ವ್ಯತ್ಯಾಸವೇನು?*

**ಶ್ರೀಮಾತೆ :** ಅದು ಬಹುಮಟ್ಟಿಗೆ ಒಂದೇ ವಿಷಯ ಆಗಿದೆ. ಉದಾಹರಣೆಗೆ ನಿನ್ನ ದೇಹ ಶೀತಸ್ಥಿತಿ, ಉಷ್ಣತೆ, ಹಸಿವು ಇತ್ಯಾದಿಗಳಿಗೆ ಒಂದು ಬಗೆಯ ಪ್ರತಿಕ್ರಿಯೆ ತೋರಿಸುತ್ತದೆ ಮತ್ತು ಈ ರೂಢಿ ನಿನ್ನ ಭೌತಿಕ ಸ್ವಭಾವದಲ್ಲಿ ಒಂದು ಬಗೆಯ ರೂಪತಾಳುವಿಕೆಯನ್ನು ಮಾಡಿಸುತ್ತದೆ, ಎಂದರೆ ಅದು ದೇಹದಲ್ಲಿ ಒಂದು ಸ್ಥಿರಗೊಂಡ ನಿರಿಗೆಯ ಹಾಗಿರುತ್ತದೆ, ಮತ್ತು ಅದು ಇರುವುದು ಹಾಗೆ. ರೂಪತಾಳುವಿಕೆಗಳು ರೂಢಿಗಳಿಂದ ಉಂಟಾದ ಪರಿಣಾಮ ಸ್ವರೂಪದವಾಗಿ ರುತ್ತವೆ. ಅದೇ ರೀತಿಯಲ್ಲಿ ಚಾರಿತ್ರ್ಯದ ರೂಪತಾಳುವಿಕೆಗಳಿರುತ್ತವೆ, ಉದಾಹರಣೆಗೆ ವಿಷಯಗಳು ನಿಮಗೆ ಸಂತೋಷಕೊಡದ ರೀತಿಯವಾದಾಗ ನೀವು ಕೋಪಾ–ವಿಷ್ಟರಾಗುತ್ತೀರಿ ಹಾಗೂ ಆ ರೂಢಿ ನಿಮ್ಮ ಸ್ವಭಾವದಲ್ಲಿ ಆಂತರಿಕ ನಿರಿಗೆ–ಯನ್ನುಂಟು ಮಾಡುತ್ತದೆ. ವಿಷಯವೊಂದು ನಿಮಗೆ ಸಂತೋಷ ನೀಡದ ಪ್ರತಿಸಲ, ಸ್ವಯಂಚಾಲಿತವಾಗಿ, ನಿಯಂತ್ರಣವಿಲ್ಲದೆ ನೀವು ಸಿಟ್ಟಿಗೇಳುತ್ತೀರಿ, ಇದನ್ನೇ ಒಂದು "ರೂಪತಾಳುವಿಕೆ" ಎಂದು ಕರೆಯುತ್ತಾರೆ, ಅವು ನಿಮ್ಮ ಚಾರಿತ್ರ್ಯದ ಒಂದು ಭಾಗ–ವಾಗಿರುವ ರೂಢಿಗಳಾಗಿರುತ್ತವೆ.

ಆದರೆ ನಿನ್ನನ್ನು ಇಡಿಯಾಗಿ, ಏನನ್ನೂ ಕಾದಿರಿಸಿಕೊಳ್ಳದೆ ಭವಿಷ್ಯತ್ಕಾಲಕ್ಕೆ ಕೊಟ್ಟುಕೊಳ್ಳಬಲ್ಲೆಯಾದರೆ, ಮತ್ತು ಈ ಕೊಡುವಿಕೆಯನ್ನು ಸತತ ನವೀಕರಿಸುತ್ತಿದ್ದರೆ ಗತಕಾಲ ತನ್ನಷ್ಟಕ್ಕೆ ಬಿದ್ದುಹೋಗುತ್ತದೆ, ನಂತರ ಅದು ನಿನಗೆ ಆತಂಕ ಉಂಟುಮಾಡುವುದಿಲ್ಲ.

**CWM, 4**

*

## ನಿಷ್ಕಾಪಟ್ಯ ಕುರಿತು ಒಂದು ಪ್ರಶ್ನೆ

ಆದರೆ ಮನುಷ್ಯ ನಿಷ್ಕಪಟನಾಗಿ ವಾಸಿಯಾಗಲು ಬಯಸಿದರೆ, ಅಡೆತಡೆಗಳ ಮೇಲೆ ಜಯಸಾಧಿಸಲು, ತನ್ನ ಮೇಲ್ಗಡೆ ಸಾಗಿ ಹೋಗಲು, ತನ್ನನ್ನು ಕೆಳಗೆಳೆ–ಯುತ್ತಿರುವುದೆಲ್ಲವನ್ನು ಬಿಟ್ಟುಕೊಡಲು, ಮಿತಿಗಳನ್ನು ಮುರಿದು ಹಾಕಲು, ನಿರ್ಮಲಗೊಳ್ಳಲು, ಮಾರ್ಗದಲ್ಲಿ ಅಡ್ಡಬರುವುದೆಲ್ಲದರಿಂದ ಪರಿಶುದ್ಧಗೊಳ್ಳಲು ಅವನಲ್ಲಿ ನಿಜವಾದ ಅಭೀಪ್ಸೆಯಿದ್ದರೆ, ಗತಕಾಲದ ದೋಷಗಳಲ್ಲಿ ಮತ್ತೆ ಬಿದ್ದುಬಿಡದೆ ಇರಲು, ಅಂಧಕಾರ ಹಾಗೂ ಅಜ್ಞಾನಗಳಿಂದ ಮೇಲೆದ್ದು ಬರಲು, ಮಾನವ ಸಹಜವೆನಿಸುವ, ಅತಿ ಕ್ಷುಲ್ಲಕವೆನಿಸುವ, ಅಜ್ಞಾನದ್ದೆನಿಸುವ ಎಲ್ಲವನ್ನು ಕಿತ್ತುಹಾಕಲು ಗಾಢವಾದ ಸಂಕಲ್ಪವಿದ್ದರೆ–ಆಗ ಅದು ಕಾರ್ಯಮಾಡುತ್ತದೆ, ಬಹಳ ಸಾಮರ್ಥ್ಯಪೂರ್ಣವಾಗಿ ಕಾರ್ಯಮಾಡುತ್ತದೆ. ಆದರೆ ಹಳೆಯ ಚಲನೆಗಳಿಗೆ ಅಂಟಿಕೊಳ್ಳುವ, ಆ ಕ್ಷಣದಲ್ಲಿ ಅಚಂಚಲತೆಯಿಂದಿದ್ದು, ಅಡಗಿಕೊಂಡಿದ್ದು ನಂತರ ತನ್ನ ಮುಖವನ್ನು ತೋರಿಸಿ "ಹೌದು, ನಿನ್ನ ಅನುಭವವಾದ ಅದು ಬಹಳ ಅಂದವಾದದ್ದು, ಆದರೆ ಈಗ ನನ್ನ ಸರದಿ" ಎಂದು ಹೇಳುವಂತಹದು ಯಾವುದೂ ಇರಬಾರದು. ಆಗ, ಅಂತಹದು ಸಂಭವಿಸಿದರೆ, ನಾನು ಯಾವುದಕ್ಕೂ ಉತ್ತರ ನೀಡುವುದಿಲ್ಲ, ಏಕೆಂದರೆ ಕೆಲವೊಮ್ಮೆ ಪ್ರತಿಕ್ರಿಯೆಯ ರೂಪದಲ್ಲಿ ಅದು ಬಹಳ ಕೆಟ್ಟದ್ದಾಗುತ್ತದೆ. ಆ ಕಾರಣದಿಂದಾಗಿ ನಾನು ಮತ್ತೆ ಅದೇ ವಿಷಯದತ್ತ ಬರುತ್ತೇನೆ, ಅದೇ ವಿಷಯ ಕುರಿತು ಹೇಳುತ್ತೇನೆ: ಮನುಷ್ಯ ನಿಜವಾಗಿಯೂ ನಿಷ್ಕಪಟನಾಗಿರಬೇಕು.

ಗಟ್ಟಿಯಾಗಿ ಅಂಟಿಕೊಳ್ಳುವಂತಹದು ಏನಾದರೂ ಅಲ್ಲಿದ್ದರೆ ಮನುಷ್ಯ ಅದನ್ನು ಸಂಪೂರ್ಣವಾಗಿ ಕಿತ್ತಿಹಾಕಲು, ಅದು ತನ್ನ ಹಿಂದೆ ಏನೂ ಉಳಿಸದಂತೆ ಮಾಡಲು ತಯಾರಾಗಿರಬೇಕು. ಈ ಕಾರಣದಿಂದಾಗಿಯೆ ಮನುಷ್ಯ ಕೆಲವೊಮ್ಮೆ ಅದೇ ತಪ್ಪನ್ನು ಮಾಡುತ್ತಾನೆ, ಪುನರಾವರ್ತಿಸುತ್ತಾನೆ, ಹಾಗಾಗಿ ಇಡಿಯಾದ ನಿಷ್ಕಾಪಟ್ಯವನ್ನು ಹೇರುವಂತಾಗುವವರೆಗೆ ವೇದನೆ ಭವ್ಯವಾಗುತ್ತಿರುತ್ತದೆ. ಮನುಷ್ಯ ಆ ವಿಧಾನವನ್ನು ಅನುಸರಿಸಬಾರದು, ಅದು ಒಳ್ಳೆಯದಲ್ಲ, ಏಕೆಂದರೆ ಅದು ಹಲವಾರು ವಿಷಯಗಳನ್ನು ನಾಶಮಾಡುತ್ತದೆ, ಚೈತನ್ಯವನ್ನು ಹಾಳುಮಾಡುತ್ತದೆ, ಕೆಟ್ಟ ಕಂಪನಗಳನ್ನು ಹರಡುತ್ತದೆ. ಆದರೆ ಮನುಷ್ಯನಿಗೆ ಹಾಗೆ ಮಾಡದೆ ಇರಲು ಸಾಧ್ಯವಾಗದೆ ಹೋದರೆ ಸರಿ, ವೇದನೆಯ ಗಾಢತೆಯಲ್ಲಿ ಅವನು ಪರಿಪೂರ್ಣ ನಿಷ್ಕಾಪಟ್ಯಕ್ಕಾಗಿ ಸಂಕಲ್ಪ ಕಂಡುಕೊಳ್ಳಬಹುದು ಮತ್ತು ಪ್ರತಿಯೊಬ್ಬನ ಜೀವನದಲ್ಲಿ ಒಂದು ಕ್ಷಣವಿರುತ್ತದೆ, ಆಗ ಪರಿಪೂರ್ಣ ನಿಷ್ಕಾಪಟ್ಯದ ಆವಶ್ಯಕತೆಗೆ ಆದ್ಯತೆ ನಿಶ್ಚಿತ ರೂಪದ ಆಯ್ಕೆಯಾಗಿ ಬರುತ್ತದೆ. ಮನುಷ್ಯನ ವ್ಯಕ್ತಿಗತ ಜೀವನದಲ್ಲಿ ಹಾಗೆಯೇ ಸಾಮೂಹಿಕ ಜೀವನದಲ್ಲಿ ಒಂದು ಕ್ಷಣ ಇರುತ್ತದೆ, ಆಗ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಕೆಲವೊಮ್ಮೆ ಇದು ಬಹಳ ಗಂಭೀರವಾಗಿರುತ್ತದೆ, ಗುಂಪಿಗೆ ಜೀವಿಸುವ ಇಲ್ಲವೆ ಸಾವನ್ನಪ್ಪುವ ಪ್ರಶ್ನೆಯಾಗಿರುತ್ತದೆ, ಅದು ಉಳಿದು–ಕೊಳ್ಳಬೇಕೆಂದಿದ್ದರೆ ನಿರ್ಧಾರಕ ಪ್ರಗತಿಯನ್ನು ಮಾಡಬೇಕು.



**CWM, 6/146**

*

## ಮನುಷ್ಯ ತನ್ನ ಛಾಯೆಯನ್ನು ಕುರಿತು ವ್ಯವಹರಿಸುವುದು

**ಪ್ರಶ್ನೆ :** *ಶ್ರೀಮಾತೆಯವರೆ, ನಮ್ಮಲ್ಲಿ ಅಂಧಕಾರದ ಅಂಶವಿರುತ್ತದೆ . . . ಅದು ಸೂಚನೆ ನೀಡುತ್ತದೆ . . . ನಾವು ಹೆಡ್ಡತನದ ಕಾರ್ಯ ಮಾಡುವಂತೆ ಅದು ಮಾಡುತ್ತದೆ ಎಂದು ಹೇಳಿದ್ದಿರಿ. ಮನುಷ್ಯ ಈ ಅಂಶದ ಬಗ್ಗೆ ಅರಿವುಳ್ಳವನಾದಾಗ ಅದನ್ನು ಎಳೆದು ತೆಗೆದು ಹಾಕಬೇಕು ಎಂದೂ ಹೇಳಿದ್ದಿರಿ. ಆದರೆ ಎಳೆದು ತೆಗೆದು ಹಾಕುವುದೆಂದರೇನು? ಉದಾಹರಣೆಗೆ ನಮ್ಮಲ್ಲಿ ಈ ಅಂಶ ಬಂದಿದೆ ಎಂಬ ಅರಿವು ನಮಗಾದಾಗ ನಾವು ಪ್ರಯತ್ನಪಟ್ಟು ಹೆಡ್ಡತನದ ಕಾರ್ಯಗಳನ್ನು ಮಾಡದಂತೆ ಉಳಿದುಕೊಂಡರೆ ಅದನ್ನು ತೆಗೆದು ಹಾಕಿದೆವೆಂದು ಹೇಳಬಹುದೆ?*

**ಶ್ರೀಮಾತೆ :** ಅದಕ್ಕಾಗಿ ನೀವು, ಮೊಟ್ಟಮೊದಲಿಗೆ, ಅದರ ಬಗ್ಗೆ ಅರಿವುಳ್ಳ–ವರಾಗಬೇಕು, ಅದನ್ನು ನಿಮ್ಮ ಮುಂದಿರಿಸಬೇಕು, ನಿಮ್ಮ ಪ್ರಜ್ಞೆಗೆ ಅದು ಅಂಟಿಸುವ ಕೊಂಡಿಗಳನ್ನು ಕತ್ತರಿಸಿ ಹಾಕಬೇಕು. ಅದು ಆಂತರಿಕವಾಗಿ ಕೈಕೊಳ್ಳಬೇಕಾದ ಮನಶ್ಶಾಸ್ತ್ರೀಯ ಕಾರ್ಯ.

ಮನುಷ್ಯ ತನ್ನನ್ನೇ ಕುರಿತು ಬಹಳ ಲಕ್ಷ್ಯಗೊಟ್ಟು ಅಭ್ಯಾಸ ಮಾಡಿದಾಗ ಅದನ್ನು ಕಂಡುಕೊಳ್ಳಬಹುದು. ಉದಾಹರಣೆಗೆ, ನಿಮ್ಮನ್ನೇ ನೀವು ಅವಲೋಕಿಸಿ–ದಾಗ, ಒಂದು ದಿನ ನೀವು ಬಹಳ ಉದಾರರಾಗಿರುವುದನ್ನು ನೋಡುತ್ತೀರಿ. ಇಂತಹದನ್ನೇ ನಾವು ಕೈಗೆತ್ತಿಕೊಳ್ಳೋಣ, ಅದು ತಿಳಿದುಕೊಳ್ಳಲು ಸುಲಭವಾಗಿದೆ. ನಿಮ್ಮ ಭಾವನೆಗಳಲ್ಲಿ, ಸಂವೇದನೆಗಳಲ್ಲಿ, ಯೋಚನೆಗಳಲ್ಲಿ, ಮತ್ತು ಪ್ರಾಪಂಚಿಕ

ವಿಷಯಗಳಲ್ಲಿಯೂ ಕೂಡ ಬಹಳ ಉದಾರರಾಗಿರುತ್ತೀರಿ, ಎಂದರೆ ನೀವು ಇತರರ ದೋಷಗಳನ್ನು, ಉದ್ದೇಶಗಳನ್ನು, ದೌರ್ಬಲ್ಯಗಳನ್ನು, ಅವರ ಅಸಹ್ಯ ಚಲನೆಗಳನ್ನೂ ಕೂಡ ಅರ್ಥ ಮಾಡಿಕೊಳ್ಳುತ್ತೀರಿ. ನೀವು ಇದೆಲ್ಲವನ್ನೂ ನೋಡುತ್ತೀರಿ, ಒಳ್ಳೆಯ ಹಾಗೂ ಉದಾರ ಭಾವನೆಗಳಿಂದ ತುಂಬಿಕೊಂಡಿರುತ್ತೀರಿ. "ಸರಿ, ಪ್ರತಿಯೊಬ್ಬನೂ ತನಗೆ ಸಾಧ್ಯವಿರುವಷ್ಟು ಒಳ್ಳೆಯದನ್ನು ಕೈಕೊಳ್ಳುತ್ತಾನೆ" ಎಂದು ನಿಮಗೆ ನೀವೇ ಹೇಳಿಕೊಳ್ಳುತ್ತೀರಿ. ಅದು ಹಾಗಿರುತ್ತದೆ.

ಇನ್ನೊಂದು ದಿನ–ಇಲ್ಲವೆ ಬಹುಶಃ ಅದರ ಮುಂದಿನ ಕ್ಷಣ ನೀವು ನಿಮ್ಮಲ್ಲಿ ಒಂದು ಬಗೆಯ ಶುಷ್ಕತೆ, ಸ್ಥಿರಸ್ಥಿತಿ, ಕಹಿಯಾದ ಏನೋ ಒಂದು ಇರುವುದನ್ನು ಗಮನಕ್ಕೆ ತಂದುಕೊಳ್ಳುತ್ತೀರಿ, ಅದು ಅಸಮಾಧಾನ ಹಾಗೂ ಬದ್ಧ–ದ್ವೇಷ ಇವುಗಳನ್ನು ಸಹಿಸಿಕೊಂಡ ರೀತಿಯಲ್ಲಿ ಕಠೋರ ತೀರ್ಮಾನಕ್ಕೆ ಬರುತ್ತದೆ, ತಪ್ಪು ಮಾಡಿದವರು ಶಿಕ್ಷೆಗೊಳಗಾಗಲಿ ಎಂಬ ಒಲವು ಹೊಂದಿರುತ್ತದೆ, ಅದು ಸೇಡನ್ನು ತೀರಿಸಿಕೊಳ್ಳಬೇಕೆಂಬ ಭಾವನೆಯನ್ನು ಬಹುಮಟ್ಟಿಗೆ ಹೊಂದಿರುವಂತಹದು, ಮೊದಲಿನದಕ್ಕೆ ತೀರಾ ವಿರುದ್ಧವಾದದ್ದು. ಒಂದು ದಿನ ಯಾರೋ ಒಬ್ಬರು ನಿಮಗೆ ಹಾನಿಯನ್ನುಂಟು ಮಾಡುತ್ತಾರೆ ಮತ್ತು ನೀವು "ಅದರಲ್ಲೇನೂ ವಿಶೇಷವಿಲ್ಲ, ಅವನಿಗೆ ಅದು ತಿಳಿದಿರಲಿಲ್ಲ", ಇಲ್ಲವೆ "ಹಾಗಲ್ಲದೆ ಅವನು ಬೇರೇನನ್ನೂ ಮಾಡಲಾರದಾಗಿದ್ದ" ಇಲ್ಲವೆ "ಅದು ಅವನ ಸ್ವಭಾವ" ಇಲ್ಲವೆ "ಅವನು ಅರ್ಥಮಾಡಿಕೊಳ್ಳಲಾರದವನಾಗಿದ್ದ" ಎಂದು ಹೇಳುತ್ತೀರಿ. ಮರುದಿನ ಇಲ್ಲವೆ ಒಂದು ಗಂಟೆಯ ನಂತರ ನೀವು "ಅವನಿಗೆ ಶಿಕ್ಷೆಯಾಗಬೇಕು, ಅವನು ದಂಡ ತೆರಬೇಕು, ತಾನು ತಪ್ಪು ಮಾಡಿದ್ದೇನೆ ಎಂಬ ಅರಿವನ್ನು ಅವನಿಗೆ ತಂದುಕೊಡಬೇಕು" ಎಂದು ಒಂದು ಬಗೆಯ ಕೋಪದಿಂದ ಹೇಳುವಿರಿ. ನಿಮಗಾಗಿಯೇ ಇಟ್ಟುಕೊಳ್ಳಲು ವಸ್ತುಗಳನ್ನು ತೆಗೆದುಕೊಳ್ಳಲು ಬಯಸುವಿರಿ, ನಿಮ್ಮಲ್ಲಿ ಅಸೂಯೆ, ಹೊಟ್ಟೆಕಿಚ್ಚು, ಸಂಕುಚಿತತೆ ಇವೆಲ್ಲವುಗಳ ಭಾವನೆ ಇರುತ್ತದೆ, ಅದು ನಿಮಗೆ ತಿಳಿದ ಹಾಗೆ ಮೊದಲಿನದಕ್ಕೆ ವಿರುದ್ಧವಾಗಿರುತ್ತದೆ.

ಇದು ಅಂಧಕಾರದ ಬದಿ ಮತ್ತು ಹಾಗಾಗಿ ಮನುಷ್ಯ ಅದನ್ನು ನೋಡಿದ ತಕ್ಷಣ, ಅದರತ್ತ ಗಮನ ಹರಿಸಿ "ಅದು ನಾನು" ಎಂದು ಅವನು ಹೇಳದಿದ್ದರೆ "ಇಲ್ಲ ಅದು ನನ್ನ ಛಾಯೆ, ನನ್ನಿಂದ ಹೊರಗೆ ಚೆಲ್ಲಿಕೊಡಬೇಕಾದ ಸತ್ತೆ ಅದು" ಎಂದು ಹೇಳಿದರೆ ಅದರ ಮೇಲೆ ಇನ್ನೊಂದು ಭಾಗದ ಪ್ರಕಾಶವನ್ನು ಇರಿಸುತ್ತಾನೆ,



ಅವು ಒಂದರ ಮುಖದ ಎದುರಿಗೆ ಇನ್ನೊಂದು ಮುಖ ಮಾಡಿ ಇರುವಂತೆ ತರಲು ಪ್ರಯತ್ನಿಸುತ್ತಾನೆ ಮತ್ತು ಇನ್ನೊಂದರ ಜ್ಞಾನ ಹಾಗೂ ಪ್ರಕಾಶದಿಂದ ಅದು ಅಚಂಚಲವಾಗಿ ಉಳಿದುಕೊಳ್ಳುವಂತೆ ಒತ್ತಾಯ ತರುತ್ತಾನೆ, ಮನವರಿಕೆ ಮಾಡಿಕೊಡಲು ಪ್ರಯತ್ನ ಮಾಡುವುದಿಲ್ಲ, ಏಕೆಂದರೆ ಅದು ಬಹಳ ಕಠಿಣವಾದದ್ದು. ಮೊದಲು ದೂರ ಸರಿದು ನಿಲ್ಲುವುದಾಗಿದೆ, ನಂತರ ಅದರ ಮೇಲೆ ಶ್ರೇಷ್ಠ ಪ್ರಕಾಶಬೀರಿ ಅದು ಬಹಳ ದೂರ ಹೋಗುವಂತೆ ಎಸೆದು ಬಿಡುವುದಾಗಿದೆ, ಅದರಿಂದಾಗಿ ಅದು ಮತ್ತೆ ಮರಳಿ ಬರಲು ಸಾಧ್ಯವಾಗುವುದಿಲ್ಲ. ಬದಲಾವಣೆ ಸಾಧ್ಯವಾಗುವಂತೆ ಮಾಡಬಹುದಾದ ಉದಾಹರಣೆಗಳಿವೆ, ಆದರೆ ಅಂತಹದು ಅಪರೂಪಕ್ಕೆ ಕಂಡುಬರುತ್ತದೆ. ಈ (ಛಾಯಾ) ಸತ್ತೆಯ ಮೇಲೆ ಮನುಷ್ಯ ಗಾಢವಾದ ಪ್ರಕಾಶ ಬೀರಲು ಸಾಧ್ಯವಾದಾಗ ಅದು ಪರಿವರ್ತನೆ ಹೊಂದಿದ ಉದಾಹರಣೆಗಳಿವೆ, ಅದು ನಿಮ್ಮ ಸತ್ತೆಯ ಸತ್ಯವಾಗಿ ಬದಲಾಗುತ್ತದೆ.

ಆದರೆ ಇದು ಅಪರೂಪಕ್ಕೆ ಕಂಡುಬರುವಂತಹದು. ಅದನ್ನು ಕೈಕೊಳ್ಳಬಹುದಾಗಿದೆ. ಸಾಮಾನ್ಯವಾಗಿ ಹೇಳಬಹುದಾದ ಒಳ್ಳೆಯ ರೀತಿ ಹೀಗಿದೆ: "ಇಲ್ಲ, ಇದು ನಾನಲ್ಲ! ನನಗೆ ಅದು ಬೇಡ! ಈ ಚಲನೆಯೊಂದಿಗೆ ನನಗೇನೂ ಆಗಬೇಕಾಗಿಲ್ಲ! ಅದು ನನಗಾಗಿ ಅಸ್ತಿತ್ವದಲ್ಲಿಲ್ಲ, ಅದು ನನ್ನ ಸ್ವಭಾವಕ್ಕೆ ವಿರುದ್ಧವಾದ ಏನೋ ಒಂದು." ಹಾಗಾಗಿ ಒತ್ತಾಯ ತರುವ ಹಾಗೂ ದೂರ ತಳ್ಳಿಬಿಡುವ ಬಲದೊಂದಿಗೆ ಮನುಷ್ಯ ಕೊನೆಗೆ ತಾನು ಅದರಿಂದ ಪ್ರತ್ಯೇಕಗೊಳ್ಳುವಂತೆ ಮಾಡುತ್ತಾನೆ.

**CWM, 6/262**

*

**ಅವಶ್ಯವಾದ ಬದಲಾವಣೆ ಎಂದರೆ ಮನುಷ್ಯ ತನ್ನನ್ನೇ ಬದಲಾಯಿಸುವುದಾಗಿದೆ**

ವರ್ಷದ ಈ ಕೊನೆಯ ದಿನದಂದು ನಮ್ಮ ಎಲ್ಲ ದೌರ್ಬಲ್ಯಗಳು ಹಾಗೂ ಹಟಮಾರಿ ಮಬ್ಬುತನಗಳು, ಕಳೆದು ಹೋಗುತ್ತಿರುವ ವರ್ಷದೊಂದಿಗೆ ನಮ್ಮಿಂದ ಕಳೆದು ಹೋಗಲಿ ಎಂಬ ನಿರ್ಧಾರ ತೆಗೆದುಕೊಳ್ಳೋಣ.

**CWM, 14/239**

*

ಅದೇ ತಪ್ಪುಗಳನ್ನು ಇನ್ನು ಮುಂದೆ ಮತ್ತೆ ಎಸಗದಿರುವ ಮತ್ತು ದೈವೀಕೃಪೆ–ಯಲ್ಲಿ ಸಂಪೂರ್ಣ ವಿಶ್ವಾಸವಿರಿಸುವ ಬಲವತ್ತರವಾದ ಹಾಗೂ ಪರಿಣಾಮಕಾರಿ ನಿರ್ಧಾರ ಏಕೈಕ ಉಪಾಯವಾಗಿದೆ.

**CWM, 14/239**

*

ಮನುಷ್ಯನಿಗೆ ಬಾಹ್ಯ ಬದಲಾವಣೆಗಳ ಆವಶ್ಯಕತೆ ಉಂಟಾದಾಗ ಅದರರ್ಥ ಅವನು ಆಂತರಿಕವಾಗಿ ಪ್ರಗತಿ ಹೊಂದುತ್ತಿರುವುದಿಲ್ಲ ಎಂದಿರುತ್ತದೆ, ಏಕೆಂದರೆ ಆಂತರಿಕವಾಗಿ ಪ್ರಗತಿ ಹೊಂದುತ್ತಿರುವ ಮನುಷ್ಯ ಅದೇ ಬಾಹ್ಯ ಪರಿಸ್ಥಿತಿ–ಗಳಡಿಯಲ್ಲಿ ಜೀವಿಸಬಲ್ಲ: ಅವು ಅವನಿಗೆ ಹೊಸ ಸತ್ಯಗಳನ್ನು ಸತತ ತೆರೆದು ತೋರಿಸುತ್ತವೆ.

ಎಲ್ಲ ಬಾಹ್ಯ ಬದಲಾವಣೆ ಸ್ವಯಂಪ್ರೇರಿತವಾಗಿರಬೇಕು ಮತ್ತು ಆಂತರಿಕ ಪರಿವರ್ತನೆಯ ಅನಿವಾರ್ಯ ಅಭಿವ್ಯಕ್ತಿಯಾಗಿರಬೇಕು. ಸಾಮಾನ್ಯವಾಗಿ ಭೌತಿಕ ಜೀವನದ ಎಲ್ಲ ಪರಿಸ್ಥಿತಿಗಳು ಆಂತರಿಕವಾಗಿ ಸಿದ್ಧಿಸಿಕೊಂಡ ಪ್ರಗತಿಯ ಅರಳುವಿಕೆ ಮೇಲ್ಮೆಯಲ್ಲಿ ಕಂಡುಬರಬೇಕು.

**CWM, 14/216**

*

ಮನೆಯನ್ನು ಬದಲು ಮಾಡುವುದರಿಂದ ನಿಮ್ಮ ಚಾರಿತ್ರ್ಯವನ್ನು ಬದಲು ಮಾಡಲಾರಿರಿ.

ನಿಮ್ಮ ಚಾರಿತ್ರ್ಯವನ್ನು ಬದಲು ಮಾಡಿದರೆ ನಿಮ್ಮ ಪರಿಸರವನ್ನು ಬದಲು ಮಾಡುವ ಆವಶ್ಯಕತೆ ಇರುವುದಿಲ್ಲ.

**CWM, 14/217**

*

ಮನುಷ್ಯ ಸಾಧನೆಯನ್ನು ಕೈಕೊಳ್ಳುತ್ತಿರುವಾಗ ಬಾಹ್ಯವಿಷಯಗಳು ಅತಿ ಕಡಿಮೆ ಮಹತ್ವದವಾಗಿರಬೇಕು. ಪರಿಸರ ಎಂತಹದೇ ಇರಲಿ, ಅವಶ್ಯವಾದ ಶಾಂತಿಯನ್ನು ಸ್ಥಾಪಿಸುವುದು ಶಕ್ಯವಿದೆ.

**CWM, 14/217**

*



ಮನುಷ್ಯ ಎಂದಿಗೂ ಧೈರ್ಯಕಳೆದುಕೊಂಡ ಭಾವನೆ ತಂದುಕೊಳ್ಳಬಾರದು, ಇಲ್ಲವೆ ಅವನು ಬಹಳಷ್ಟು ತಪ್ಪುಗಳನ್ನು ಮಾಡಿದಾಗಲೂ ಅವುಗಳನ್ನು ಇನ್ನು ಮುಂದೆ ಮಾಡದೆ ಇರುವ ಸಂಕಲ್ಪವನ್ನು ಕಾಪಾಡಿಕೊಂಡು ಬರಬೇಕು. ಅವನು ತನ್ನ ಸಂಕಲ್ಪದಲ್ಲಿ ಪಟ್ಟು ಹಿಡಿದರೆ ಒಂದಿಲ್ಲೊಂದು ದಿನ ಆ ತೊಂದರೆಯ ಮೇಲೆ ಜಯ ಸಾಧಿಸುವನೆಂಬುದರ ಬಗ್ಗೆ ನಿಶ್ಚಿತತೆ ಹೊಂದಿರಬೇಕು.

**CWM, 6/289** **– ಶ್ರೀಮಾತೆ**

*

ಅಂತರಂಗದಲ್ಲಿ ನಿನ್ನ ಹೃದಯ ತೊಂದರೆಗೊಳಗಾಗಿದ್ದರೆ, ದೀರ್ಘ ಕಾಲದವರೆಗೆ ನೀನು ಯಾವ ಪ್ರಗತಿಯನ್ನೂ ಸಾಧಿಸಿರದಿದ್ದರೆ, ನಿನ್ನ ಶಕ್ತಿ ಬಲಗುಂದಿದ್ದರೆ, ಚಡಪಡಿಸುತ್ತಿದ್ದರೆ ನಮ್ಮ ದೈವೀ ಪ್ರೇಮಿ ಹಾಗೂ ದೈವೀ ಪ್ರಭುವಿನ ಸನಾತನ ವಚನ "ನಾನು ನಿನ್ನನ್ನು ಎಲ್ಲ ಪಾಪ ಹಾಗೂ ಅನಿಷ್ಟಗಳಿಂದ ಮುಕ್ತಗೊಳಿಸುತ್ತೇನೆ" (ಅಹಂ ತ್ವಾಂ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ) ಇದನ್ನು ಯಾವಾಗಲೂ ನೆನಪಿನಲ್ಲಿಟ್ಟುಕೋ.

**CWSA, 12/461** **– ಶ್ರೀ ಅರವಿಂದರು**

*

## ಗತಕಾಲಕ್ಕೆ ಅಂಟಿಕೊಳ್ಳುವುದು ಬೇಡ

**ಭವಿಷ್ಯತ್ತಿನಲ್ಲಿ ನಂಬಿಕೆ ಇರುವುದರ ಕೊರತೆಯಿಂದಾಗಿ ನಾವು ಗತಕಾಲಕ್ಕೆ ಅಂಟಿಕೊಳ್ಳುತ್ತೇವೆ.**

ಅಹಾ, ನನ್ನ ಮಗು, ನಮ್ಮಲ್ಲಿ ನಂಬಿಕೆ ಇಲ್ಲ. "ನಮಗೆ ದೈವೀ ಜೀವನ ಬೇಕು" ಎಂದು ಹೇಳುತ್ತೇವೆ–ಆದಾಗ್ಯೂ ಅದರ ಬಗ್ಗೆ ನಮ್ಮಲ್ಲಿ ಭಯವಿರುತ್ತದೆ! ಭಯ ಹೊರಟು ಹೋದ ತತ್ಕ್ಷಣ ಮತ್ತು ನಾವು ನಿಷ್ಕಪಟರಾಗಿದ್ದಾಗ ಪ್ರತಿಯೊಂದು ನಿಜವಾಗಿ ಬದಲಾಗುತ್ತದೆ.

"ಈ ಜೀವನ ಈ ನಂತರ ನಮಗೆ ಬೇಕಾಗಿಲ್ಲ" ಎಂದು ಹೇಳುತ್ತೇವೆ (ಶ್ರೀಮಾತೆಯವರು ನಗುತ್ತಾರೆ) ಮತ್ತು ಅದಕ್ಕೆ ಅಂಟಿಕೊಂಡಿರುವ ಏನೋ ಒಂದಿರುತ್ತದೆ. ಅದು ಹಾಸ್ಯಾಸ್ಪದವಾದದ್ದು.

ನಮ್ಮ ಹಳೆಯ ವಿಚಾರಗಳಿಗೆ, ಮಾಯವಾಗಬೇಕಾದ ಈ ಹಳೆಯ ಜಗತ್ತಿಗೆ ನಾವು ಅಂಟಿಕೊಂಡಿರುತ್ತೇವೆ–ಮತ್ತು ನಾವು ಭಯಭೀತರಾಗಿರುತ್ತೇವೆ!

ಮನಸ್ಸಿನ ಶಿರದಲ್ಲಿ ದೈವೀ ಶಿಶು ಕುಳಿತಿರುತ್ತದೆ ಹಾಗೂ ಆಟವಾಡುತ್ತದೆ, ಇದರ ಚಿತ್ರವನ್ನು ಬರೆಯಲು ಸಾಧ್ಯವಾಗಲಿ ಎಂದು ಬಯಸುತ್ತೇನೆ, ಅದು ಅದ್ಭುತವಾಗಿದೆ. ನಾವು ಎಷ್ಟೊಂದು ಹೆಡ್ಡರಾಗಿದ್ದೇವೆಂದರೆ (ಶ್ರೀಮಾತೆಯವರು ನೊಂದುಕೊಂಡ ಹಿರಿಮೆಯಿಂದ ಹೇಳಿದಂತಿರುವ ಧ್ವನಿಯನ್ನು ಹೊರಡಿಸುತ್ತ) ನಾವು:"ಭಗವಂತನಿಂದ ತಪ್ಪಾಗಿದೆ, ಅವನು ಆ ರೀತಿ ಮಾಡಬಾರದಾಗಿತ್ತು" ಎಂದು ಹೇಳುವಷ್ಟರ ಮಟ್ಟಿಗೆ ಬರುತ್ತೇವೆ. ನನ್ನ ಮಗು, ಅದು ನಗೆ ಬರಿಸುವಂತಹದು.

(ಮೌನ)

ನನಗೆ ಅತ್ಯಂತ ಒಳ್ಳೆಯ ಉಪಾಯ (ಅತ್ಯಂತ ಸುಲಭವಾದದ್ದು) "ಭಗವಂತ ನೀನು ಸಂಕಲ್ಪಿಸಿದ ಹಾಗೆ" ಎಂದು ಎಲ್ಲ ನಿಷ್ಕಾಪಟ್ಯದಿಂದ ಹೇಳುವುದಾಗಿದೆ– ಮತ್ತು ನಂತರ ತಿಳಿವಳಿಕೆ ಬರುತ್ತದೆ. ಆಗ ನೀವು ಅರ್ಥಮಾಡಿಕೊಳ್ಳುತ್ತೀರಿ ಆದರೆ ನೀವು ಮನಸ್ಸಿನಿಂದ ಅರ್ಥಮಾಡಿಕೊಳ್ಳುವುದಿಲ್ಲ, ಅದು ಅಲ್ಲಿರುವುದಿಲ್ಲ (ಶ್ರೀಮಾತೆಯವರು ತಲೆಯ್ನನು ಸ್ಪರ್ಶಿಸುತ್ತಾರೆ.)

"ಭಗವಂತ ನೀನು ಸಂಕಲ್ಪಿಸಿದ ಹಾಗೆ"

**CWM, 14/312**

*

**ಪೂರ್ವಭಾವಿಯಾಗಿ ಕಲ್ಪಿಸಿಕೊಂಡ ವಿಚಾರಗಳನ್ನು ಹೊಂದಿರದೆ ಇರುವುದು ಅತ್ಯಂತ ಒಳ್ಳೆಯದಾದದ್ದು.**

ಮನುಷ್ಯ ಕೈಕೊಳ್ಳಬಹುದಾದ ಅತ್ಯಂತ ಒಳ್ಳೆಯದೆಂದರೆ ಅವನು ಯಾವುದೇ ಪಕ್ಷ ವಹಿಸದೆ ಇರುವುದಾಗಿದೆ, ಪೂರ್ವಭಾವಿಯಾಗಿ ಕಲ್ಪಿಸಿಕೊಂಡ ವಿಚಾರ–ಗಳನ್ನು ಹೊಂದಿರದೆ ಇರುವುದಾಗಿದೆ. ಓಹ್! ನೈತಿಕ ತತ್ವಗಳು, ನಿರ್ದಿಷ್ಟಪಡಿಸಿದ ನಡತೆಯ ನಿಯಮಗಳು, ಮನುಷ್ಯ ಏನನ್ನು ಕೈಕೊಳ್ಳಬೇಕು, ಏನನ್ನು ಕೈಕೊಳ್ಳ–ಬಾರದು ಎಂಬುದು, ನೈತಿಕ ದೃಷ್ಟಿಕೋನದಿಂದ ಹಾಗೂ ಪ್ರಗತಿಯ ದೃಷ್ಟಿಕೋನದಿಂದ ಪೂರ್ವಭಾವಿಯಾಗಿ ಕಲ್ಪಿಸಿಕೊಂಡ ವಿಚಾರಗಳು, ಎಲ್ಲ ಸಾಮಾಜಿಕ ಹಾಗೂ ಮಾನಸಿಕ ಸಂಪ್ರದಾಯಗಳು. ಇವೆಲ್ಲವುಗಳಿಗಿಂತ ಬೇರೆ ಹೆಚ್ಚು ಅಡೆತಡೆ ಉಂಟುಮಾಡುವ ವಿಷಯಗಳಿರುವುದಿಲ್ಲ. ಒಂದು ಮಾನಸಿಕ



ರಚನೆಯ ಮೇಲೆ ಜಯ ಸಾಧಿಸುವುದಕ್ಕಾಗಿ ಹಲವಾರು ದಶಮಾನಗಳ ಕಾಲವನ್ನು ವ್ಯಯ ಮಾಡಿದವರ ಪರಿಚಯ ನನಗಿದೆ. ಮನುಷ್ಯ ತನ್ನನ್ನು ತೆರೆದಿರಿಸಿಟ್ಟುಕೊಂಡ ರೀತಿಯವನಾಗಿದ್ದರೆ, ಸರಳ ರೀತಿಯಲ್ಲಿ ತೆರೆದಿರಿಸಿಟ್ಟುಕೊಂಡಿದ್ದರೆ, ಆ ಸರಳತೆ ಅದು ಅಜ್ಞಾನದ್ದೆಂದು ತಿಳಿದಿರುತ್ತದೆ,–(ತಮ್ಮನ್ನು ಮೇಲ್ಗಡೆಗೆ ಬಿಟ್ಟುಕೊಡುವ ಸಂಜ್ಞೆಯನ್ನು ಶ್ರೀಮಾತೆಯವರು ಮಾಡುತ್ತಾರೆ) ಅದು ಬರುವುದನ್ನು ಸ್ವೀಕರಿಸುತ್ತದೆ. ಆಗ ಏನೋ ಒಂದು ಸಂಭವಿಸುತ್ತದೆ.

ಮತ್ತು ಸ್ವಾಭಾವಿಕವಾಗಿ ಪ್ರಗತಿ, ಜ್ಞಾನ, ಪರಿವರ್ತನೆ ಮತ್ತು ಎಲ್ಲದಕ್ಕಿಂತಲೂ ಹೆಚ್ಚಾಗಿ ದೈವೀ ಪ್ರೇಮ ಹಾಗೂ ದೈವೀ ಸತ್ಯ ಇವುಗಳಿಗಾಗಿರುವ ಪಿಪಾಸೆ (thirst) ಯನ್ನು ಮನುಷ್ಯ ಇಟ್ಟುಕೊಂಡಿದ್ದರೆ ಅವನು ತೀವ್ರಗತಿಯಿಂದ ಸಾಗಿ ಹೋಗುತ್ತಾನೆ, ಅದು ಒಂದು ನಿಜವಾದ ಪಿಪಾಸೆ ಹಾಗೂ ಆವಶ್ಯಕತೆ ಆಗಿರಬೇಕು.

ಉಳಿದದ್ದಕ್ಕೆಲ್ಲ ಅಷ್ಟೊಂದು ಮಹತ್ವವಿರುವುದಿಲ್ಲ. ಅದು ಮಾತ್ರ ಮನುಷ್ಯನಿಗೆ ಅವಶ್ಯವಾಗಿರುತ್ತದೆ. ಮನುಷ್ಯ ತಾನು ನಂಬಿರುವುದಕ್ಕೆ, ತಿಳಿದುಕೊಂಡಿರುವುದಕ್ಕೆ, ಭಾವನೆ ತಂದುಕೊಂಡಿರುವುದಕ್ಕೆ, ಪ್ರೀತಿಸುವುದಕ್ಕೆ, ತನ್ನ ರೂಢಿಗಳಿಗೆ, ತನ್ನ ಆವಶ್ಯಕತೆಗಳು ಎಂದು ಕರೆದುಕೊಳ್ಳುವುದಕ್ಕೆ, ಅದಿದ್ದ ಹಾಗಿರುವ ಜಗತ್ತಿಗೆ ಅಂಟಿಕೊಂಡಿರುವುದು ನಿಮ್ಮನ್ನು ಬಂಧನಕ್ಕೊಳಪಡಿಸುತ್ತದೆ. ಒಂದರ ನಂತರ ಒಂದರಂತೆ ಇವೆಲ್ಲವನ್ನೂ ತೆಗೆದು ಹಾಕಬೇಕು. ಎಲ್ಲ ಬಂಧಕಗಳನ್ನು ತೆಗೆದು ಹಾಕಬೇಕು; ಅದನ್ನು ಸಾವಿರಾರು ಸಲ ಹೇಳಲಾಗಿದೆ, ಮತ್ತು ಜನರು ಅದನ್ನೇ ಮುಂದುವರಿಸಿಕೊಂಡು ಹೋಗುತ್ತಾರೆ. . . . ಅದನ್ನು ಇತರರಿಗೆ ಬೋಧಿಸುವ ನಿರರ್ಗಳವಾಗಿ ಮಾತನಾಡಬಲ್ಲ ಪ್ರವಚನಕಾರರೂ ಕೂಡ ಅಂಟಿಕೊಳ್ಳುತ್ತಾರೆ, ಅವರು ನೋಡುವ ತಮ್ಮದೇ ದೃಷ್ಟಿಗೆ, ತಂದುಕೊಳ್ಳುವ ಭಾವನೆಗೆ, ಪ್ರಗತಿ ಸಾಧಿಸುವ ರೂಢಿಗೆ ಅಂಟಿಕೊಳ್ಳುತ್ತಾರೆ, ಅದು ಅವರಿಗೆ ಏಕೈಕವಾದದ್ದೆಂದು ತೋರಿಬರುತ್ತದೆ.

ಹೆಚ್ಚಿನ ಬಂಧನಗಳು ಬೇಡ–ಮುಕ್ತರಾಗಿರೋಣ. ಈ ಪಿಪಾಸೆ (thirst) ಗಾಗಿ ಅಭೀಪ್ಸೆ ಹೊಂದಿರುವುದರ ಹೊರತಾಗಿ, ಯಾವಾಗಲೂ ಎಲ್ಲವನ್ನೂ ಬದಲು ಮಾಡಲು ತಯಾರಾಗಿರಬೇಕು.

ಭಗವಂತನನ್ನು ಕುರಿತಾದ ವಿಚಾರದ ಬಗ್ಗೆ ಒಲವಿಲ್ಲದ ಜನರನ್ನು ನಾನು ಚೆನ್ನಾಗಿ ಅರ್ಥಮಾಡಿಕೊಳ್ಳುತ್ತೇನೆ, ಏಕೆಂದರೆ ಅದು ಕೂಡಲೆ ಯುರೋಪಿಯನ್‌ರ

ಇಲ್ಲವೆ ಪಾಶ್ಚಾತ್ಯರ ಕಲ್ಪನೆಗಳ (ಅವು ಭಯಾನಕವಾಗಿವೆ) ಮಿಶ್ರಣಕ್ಕೊಳಗಾಗುವಂತೆ ಮಾಡುತ್ತದೆ ಮತ್ತು ಅದು ಅವರ ಜೀವನ ಸ್ವಲ್ಪಮಟ್ಟಿಗೆ ಜಟಿಲವಾಗುವಂತೆ ಮಾಡುತ್ತದೆ. ಆದರೆ ಅದರ ಆವಶ್ಯಕತೆ ನಿಮಗಿರುವುದಿಲ್ಲ–ದೈವಿಕವಾದ ಏನೋ ಒಂದರ ಆವಶ್ಯಕತೆ ಇರುತ್ತದೆ, ಅದು ದೈವೀ ಪ್ರೇಮ, ದೈವೀ ಸತ್ಯ ಹಾಗೂ ಪರಮೋಚ್ಚ ಪರಿಪೂರ್ಣತೆ–ಅವಶ್ಯವಾದದ್ದು ಅದಷ್ಟೇ, ಸೂತ್ರಗಳಿರುತ್ತವೆ . . . ಅಲ್ಲಿ ಅತಿ ಕಡಿಮೆ ಸೂತ್ರಗಳಿದ್ದರೆ ಅದು ಹೆಚ್ಚು ಒಳ್ಳೆಯದು. ಆದರೆ ಆ ಆವಶ್ಯಕತೆ, ಅದಕ್ಕೆ ಆ ದೈವೀ ವಿಷಯ ಮಾತ್ರ ತೃಪ್ತಿ ತಂದುಕೊಡಬಲ್ಲದು,–ಬೇರೆ ಯಾವುದೂ ಅಲ್ಲ, ಅರೆಮನಸ್ಸಿನಿಂದ ಕಾರ್ಯಕೈಕೊಳ್ಳುವುದಲ್ಲ, ಕೇವಲ ಅದು ಮತ್ತು ನಂತರ ನೀವು ಸಾಗಿ ಹೋಗುವಿರಿ! ನಿಮ್ಮ ಮಾರ್ಗ ನಿಮ್ಮದೇ ಆಗಿರುತ್ತದೆ, ಅದಕ್ಕೆ ಮಹತ್ವವಿರುವುದಿಲ್ಲ. ಮಾರ್ಗ ಯಾವುದೇ ಆಗಿರಲಿ, ಅದರಲ್ಲಿ ವಿಶೇಷವೇನೂ ಇರುವುದಿಲ್ಲ. ದುಂದುಗಾರಿಕೆಯ ಸ್ವಭಾವವಿರುವ ಆಧುನಿಕ ಅಮೇರಿಕಾ ದೇಶದ ತರುಣನೊಬ್ಬನ ಮಾರ್ಗವೂ ಕೂಡ ಒಂದು ಮಾರ್ಗ, ಅದಕ್ಕೆ ಮಹತ್ವವಿರುವುದಿಲ್ಲ.

**CWM, 11/5** – **ಶ್ರೀಮಾತೆ**

*

**ಭಗವಂತನನ್ನು ಕುರಿತು ಗತಕಾಲದ ರಚನೆಗಳ ಪ್ರಭಾವದಿಂದ ಮುಕ್ತವಾಗುವುದು**

ಸಮಗ್ರ ಯೋಗವನ್ನು ಆಚರಿಸಲು ನಾವು ಪ್ರಯತ್ನ ಮಾಡುತ್ತಿದ್ದರೆ, ಭಗವಂತನನ್ನು ಕುರಿತು ಸಮಗ್ರವಾಗಿರುವ ವಿಚಾರದೊಂದಿಗೆ ಪ್ರಾರಂಭಿಸುವುದು ಹೆಚ್ಚು ಯೋಗ್ಯವಾದದ್ದು. ಯಾವುದೇ ಸಂಕುಚಿತ ಮಿತಿಗಳಿಗೆ ಒಳಗಾಗದ ಸಿದ್ಧಿಗಾಗಿ ಹೃದಯದಲ್ಲಿ ಸಾಕಷ್ಟು ವಿಶಾಲವಾದ ಅಭೀಪ್ಸೆ ಇರಬೇಕು. ಪಂಥೀಯ ಅಭಿಮಾನದ ಧಾರ್ಮಿಕ ದೃಷ್ಟಿಕೋನ ಹೊಂದಿರುವುದನ್ನು ತಪ್ಪಿಸಿಕೊಳ್ಳಬೇಕು, ಅಷ್ಟೇ ಅಲ್ಲ, ಆದರೆ ಎಲ್ಲ ಏಕಮುಖ ತಾತ್ವಿಕ ಕಲ್ಪನೆಗಳ ಪ್ರಭಾವಕ್ಕೂ ಒಳಗಾಗಬಾರದು, ಆ ಕಲ್ಪನೆಗಳು ದೈವೀ ವರ್ಣನಾತೀತನಾದವನನ್ನು ಪರಿಮಿತಿಗೊಳಪಡಿಸುವ ಮಾನಸಿಕ ಸೂತ್ರದಲ್ಲಿ ಮುಚ್ಚಿಹಾಕಲು ಪ್ರಯತ್ನಿಸುತ್ತವೆ.

**CWSA, 23/82** – **ಶ್ರೀ ಅರವಿಂದರು**

*

**ಪ್ರಶ್ನೆ:** *ಮಧುರ ಮಾತೆಯವರೆ, ಭಗವಂತನನ್ನು ಕುರಿತು ಸಮಗ್ರ ವಿಚಾರ–ವಿರಬೇಕು ಎಂದು ಶ್ರೀ ಅರವಿಂದರು ಹೇಳಿದುದರ ಅರ್ಥವೇನು?*



**ಶ್ರೀಮಾತೆ :** ಭಗವಂತನನ್ನು ಕುರಿತು ಪ್ರತಿಯೊಬ್ಬನು ತನಗಾಗಿ ರೂಪಿಸಿಕೊಂಡ ವಿಚಾರ ಅವನ ವೈಯಕ್ತಿಕ ಅಭಿರುಚಿ, ತಿಳಿದುಕೊಳ್ಳಲು ಅವನಲ್ಲಿರುವ ಸಾಧ್ಯತೆಗಳು, ಅವನ ಮಾನಸಿಕ ಆದ್ಯತೆಗಳು, ಅವನ ಆಸೆಗಳು ಇವೆಲ್ಲವುಗಳಿಗೆ ಅನುಗುಣ–ವಾಗಿರುತ್ತದೆ. ಭಗವಂತನನ್ನು ಕುರಿತು ಜನರು ತಾವು ಬಯಸಿದ ರೀತಿಯಲ್ಲಿ, ಭೇಟಿ ಮಾಡಬೇಕೆಂದಿರುವ ರೀತಿಯಲ್ಲಿ ವಿಚಾರಗಳನ್ನು ಇಟ್ಟುಕೊಂಡಿರುತ್ತಾರೆ, ಹಾಗಾಗಿ ಅವರು, ಸ್ವಾಭಾವಿಕವಾಗಿ, ಪಡೆಯಲಿರುವ ಸಿದ್ಧಿಯನ್ನು ಸೀಮಿತಗೊಳಿಸುತ್ತಾರೆ.

ಆದರೆ, ಭಗವಂತ ನಾವು ಕಲ್ಪಿಸಿಕೊಳ್ಳಬಹುದೆಲ್ಲವೂ ಆಗಿದ್ದಾನೆ, ಅದಕ್ಕಿಂತ ಅನಂತಪಟ್ಟು ಹೆಚ್ಚಿನವನಾಗಿದ್ದಾನೆ ಎಂಬುದು ನಮಗೆ ತಿಳಿದು ಬಂದಾಗ ನಾವು ಸಮಗ್ರತೆಯತ್ತ ಪ್ರಗತಿ ಸಾಧಿಸಲು ಪ್ರಾರಂಭಿಸಿರುತ್ತೇವೆ. ಮಾನವ ಪ್ರಜ್ಞೆ ತನ್ನನ್ನು ಸೀಮಿತಗೊಳಿಸಿಕೊಳ್ಳುತ್ತ ಅರಿವುಳ್ಳದ್ದಾಗಲು ಪ್ರಾರಂಭಿಸುತ್ತದೆ, ಹಾಗಾಗಿ ಆ ಪ್ರಜ್ಞೆಗೆ ಸಮಗ್ರತೆ ಅತ್ಯಂತ ಕಠಿಣವಾದ ವಿಷಯವಾಗಿರುತ್ತದೆ. ಆದಾಗ್ಯೂ ಮಾನಸಿಕ ಚಟುವಟಿಕೆಗಳೊಡನೆ ಆಟವಾಡುವುದನ್ನು ತಿಳಿದುಕೊಂಡ ಜನರಿಗೆ ಸ್ವಲ್ಪ ಪ್ರಯತ್ನದ ಮೂಲಕ ತಮ್ಮನ್ನು ವಿಸ್ತಾರಗೊಳಿಸಿಕೊಂಡು ಸಮಗ್ರವಾದ ಏನೋ ಒಂದನ್ನು ಸಮೀಪಿಸುವುದು ಸಾಧ್ಯವಾಗುತ್ತದೆ.

ಭಗವಂತನನ್ನು ಕುರಿತು ನಿಮ್ಮ ಸ್ವಭಾವಕ್ಕೆ ಹಾಗೂ ಕಲ್ಪನೆಗೆ ಹೊಂದಿಕೆ–ಯಾಗುವ ವಿಚಾರವನ್ನು ರೂಪಿಸಿಕೊಂಡಿರುತ್ತೀರಿ, ಅಲ್ಲವೆ? ಹಾಗಾಗಿ ನಿಮ್ಮಿಂದ ನೀವು ಹೊರಗೆ ಬರಲು ಮತ್ತು ನಿಜವಾಗಿ ಸಮಗ್ರಯೋಗವನ್ನು ಕೈಕೊಳ್ಳುವುದಕ್ಕೆ ಪ್ರಯತ್ನಮಾಡಲು ಬಯಸಿದರೆ ಭಗವಂತ, ಅವನ ಬಗ್ಗೆ ನೀವು ಯೋಚಿಸಿದ ಹಾಗೂ ಭಾವನೆ ತಂದುಕೊಂಡ ರೀತಿಯಲ್ಲಷ್ಟೇ ಇರುವುದಿಲ್ಲ, ಆದರೆ ಇತರರು ಅವನ ಬಗ್ಗೆ ಯೋಚಿಸುವ ಹಾಗೂ ಭಾವನೆ ತಂದುಕೊಳ್ಳುವ ರೀತಿಯಲ್ಲಿಯೂ ಇರುತ್ತಾನೆ–ಮತ್ತು ಅದಕ್ಕೂ ಅಧಿಕವಾಗಿ ಯೋಚಿಸಲು ಹಾಗೂ ಭಾವನೆಗೆ ತಂದುಕೊಳ್ಳಲು ಯಾರಿಗೂ ಸಾಧ್ಯವಾಗದ ರೀತಿಯಲ್ಲಿಯೂ ಇರುತ್ತಾನೆ ಎಂಬುದನ್ನು ನೀವು ತಿಳಿದುಕೊಳ್ಳಬೇಕು.

ಇದನ್ನು ನೀವು ತಿಳಿದುಕೊಂಡರೆ ಸಮಗ್ರತೆಯ ಮಾರ್ಗದಲ್ಲಿ ಮೊದಲ ಹೆಜ್ಜೆ ಇರಿಸುವಿರಿ. ಸಹಜವಾಗಿ ಮತ್ತು ಅದರ ಬಗ್ಗೆ ಅರಿವನ್ನೂ ತಂದುಕೊಳ್ಳದೆ ಜನರು ಭಗವಂತ ತಮ್ಮ ಕಲ್ಪನೆಗಳಿಗೆ ಹೊಂದಿಕೊಳ್ಳುವ ರೀತಿಯಲ್ಲಿ ಇರಲೆಂದು

ಪಟ್ಟುಹಿಡಿದು ಬಯಸುತ್ತಾರೆ. ಏಕೆಂದರೆ, ಯೋಚನೆ ಮಾಡದೆ ಅವರು ನಿಮಗೆ "ಇದು ಭಗವಂತ, ಇದು ಭಗವಂತನಲ್ಲ" ಎಂದು ಹೇಳುತ್ತಾರೆ. ಅದರ ಬಗ್ಗೆ ಅವರಿಗೆ ಏನು ತಿಳಿದಿರುತ್ತದೆ! (ಆಧ್ಯಾತ್ಮಿಕ) ಮಾರ್ಗದಲ್ಲಿ ಇನ್ನೂ ಹೆಜ್ಜೆ ಇರಿಸಿರದ ಕೆಲವರು ಇಲ್ಲಿಗೆ ಬಂದು ವಸ್ತು–ವಿಷಯಗಳನ್ನು ಹಾಗೂ ಜನರನ್ನು ನೋಡುತ್ತಾರೆ, ಮತ್ತು ನಿಮಗೆ "ಭಗವಂತನೊಂದಿಗೆ ಈ ಆಶ್ರಮ ಯಾವ ಸಂಬಂಧವನ್ನೂ ಹೊಂದಿಲ್ಲ, ಇದು ಭಗವಂತನದು ಆಗಿಯೇ ಇಲ್ಲ" ಎಂದು ಹೇಳುತ್ತಾರೆ. ಆದರೆ ನೀವು ಅವರಿಗೆ "ಭಗವಂತ ಎಂದರೆ ಏನು?" ಎಂದು ಪ್ರಶ್ನೆ ಕೇಳಿದಾಗ ಅವರಿಗೆ ಉತ್ತರ ಕೊಡುವುದು ಕಷ್ಟದಾಯಕವಾಗುತ್ತದೆ, ಅವರಿಗೆ ಅವನ ಬಗ್ಗೆ ಏನೂ ತಿಳಿದಿರುವುದಿಲ್ಲ. ಮನುಷ್ಯ ತಿಳಿದುಕೊಂಡದ್ದು ಅತ್ಯಂತ ಕಡಿಮೆ ಇದ್ದಾಗ ಅವನು ಹೆಚ್ಚಿನ ರೀತಿಯಲ್ಲಿ ತೀರ್ಮಾನ ನೀಡುತ್ತಾನೆ. ಇದು ಸಂಪೂರ್ಣವಾಗಿ ವಾಸ್ತವವಾದ ಸಂಗತಿ. ಮನುಷ್ಯ ತಿಳಿದುಕೊಂಡದ್ದು ಹೆಚ್ಚಿನದಾಗಿದ್ದಾಗ, ಅವನು ವಿಷಯ–ವಸ್ತುಗಳನ್ನು ಕುರಿತು ಕೊಡುವ ತೀರ್ಮಾನ ಬಹಳ ಕಡಿಮೆಯಾಗಿರುತ್ತದೆ.

ಮತ್ತು ಒಂದು ಸಮಯ ಬರುತ್ತದೆ, ಆಗ ಮನುಷ್ಯ ಕೈಕೊಳ್ಳಬಹುದಾದುದು ಕೇವಲ ಅವಲೋಕನ ಮಾಡುವುದಾಗಿರುತ್ತದೆ, ಆದರೆ ತೀರ್ಮಾನ ನೀಡುವುದು ಅಸಾಧ್ಯವಾಗುತ್ತದೆ. ಮನುಷ್ಯ ವಸ್ತು–ವಿಷಯಗಳನ್ನು ಅವುಗಳಿದ್ದ ಹಾಗೆ, ಹಾಗೂ ಅವುಗಳ ಸಂಬಂಧಗಳಲ್ಲಿ ಅವುಗಳಿರುವ ಸ್ಥಾನಗಳಲ್ಲಿ ನೋಡಬಲ್ಲ, ಹಾಗೆ ನೋಡುವಾಗ ಅವು ಈಗಿರುವ ಸ್ಥಾನ ಮತ್ತು ಅವುಗಳಿರಬೇಕಾಗಿದ್ದ ಸ್ಥಾನ ಇವುಗಳ ನಡುವಿನ ವ್ಯತ್ಯಾಸವನ್ನು ಗುರುತಿಸುವ ಪರಿಜ್ಞಾನ ಅವನಲ್ಲಿರುತ್ತದೆ–ಏಕೆಂದರೆ ಇದು ಜಗತ್ತಿನಲ್ಲಿರುವ ಭವ್ಯ ಅಸ್ತವ್ಯಸ್ತತೆ–ಆದರೆ ಅವನು ತೀರ್ಮಾನ ನೀಡುವುದಿಲ್ಲ, ಕೇವಲ ಸರಳ ರೀತಿಯಲ್ಲಿ ಅವಲೋಕನ ಮಾಡುತ್ತಾನೆ.

ಮತ್ತು ಒಂದು ಕ್ಷಣ ಬರುತ್ತದೆ, ಆಗ "ಇದು ಭಗವಂತ, ಇದು ಭಗವಂತನಲ್ಲ" ಎಂದು ಹೇಳಲು ಶಕ್ಯವಾಗುವುದಿಲ್ಲ, ಏಕೆಂದರೆ ಆ ಕ್ಷಣದಲ್ಲಿ ಮನುಷ್ಯ ಇಡೀ ವಿಶ್ವವನ್ನು ಎಷ್ಟೊಂದು ಇಡಿಯಾಗಿ ಹಾಗೂ ಎಲ್ಲವನ್ನೂ ಒಳಗೊಳ್ಳುವ ರೀತಿಯಲ್ಲಿ ನೋಡುತ್ತಾನೆಂದರೆ ಆಗ ಪ್ರತಿಯೊಂದನ್ನೂ ಕ್ಷೋಭೆಗೊಳಪಡಿಸದೆ ಆ ವಿಶ್ವದಿಂದ ಏನನ್ನೂ ತೆಗೆದು ಹಾಕಲಾಗುವುದಿಲ್ಲ.

**CWM, 8/1–2** **– ಶ್ರೀಮಾತೆ**

*



# ಭವಿಷ್ಯದತ್ತ ಮಾರ್ಗ

## ಹೊಸ ಜೀವನದಲ್ಲಿ ಮರುಜನ್ಮ ಪಡೆಯಲು ಗತಕಾಲವನ್ನು ಕಳಚಿಬಿಡಿರಿ

ಓ ದೈವೀ ಪ್ರಭು, ವರ್ಷ ಕೊನೆಗೊಳ್ಳುತ್ತಿರುವ ಸಮಯದಲ್ಲಿ ಏರ್ಪಡಿಸಲಾದ ಈ ಸಮ್ಮೇಳನ ನಮಗೆ ಇನ್ನು ಮುಂದೆ ನಮ್ಮ ಜೀವನಗಳಲ್ಲಿ ಯಾವ ಉದ್ದೇಶವನ್ನೂ ಹೊಂದಿರದ ಬಂಧನಗಳು, ಆಸಕ್ತಿಗಳು, ಭ್ರಮೆಗಳು ಹಾಗೂ ದೌರ್ಬಲ್ಯಗಳು ಇವೆಲ್ಲವುಗಳಿಗೆ ಕೊನೆ ಹೇಳುವ ಅವಕಾಶ ಒದಗಿಸಲಿ. ಪ್ರತಿಯೊಂದು ಕ್ಷಣದಲ್ಲಿ ನಾವು ಗತಕಾಲವನ್ನು, ಮೈಮೇಲೆ ಬೀಳುವ ಧೂಳನ್ನು ಝಾಡಿಸಿ ತೆಗೆದು ಹಾಕುವಂತೆ, ಕೊಡವಿ ಹಾಕಬೇಕು, ಅದರಿಂದಾಗಿ ಆ ಪ್ರತಿ ಕ್ಷಣದಲ್ಲಿ ನಮ್ಮೆದುರಿಗೆ ತೆರೆದುಕೊಳ್ಳುತ್ತಿರುವ ನಿಷ್ಕಳಂಕ ಮಾರ್ಗ ಮಲಿನವಾಗದಂ–ತಾಗುವುದು.

ನಮ್ಮೊಳಗಿರುವುದನ್ನು ಒಪ್ಪಿಕೊಂಡು ಪರಿಹರಿಸಲಾದ ತಪ್ಪುಗಳು ಯಾವ ಪರಿಣಾಮವನ್ನೂ ತಂದುಕೊಡದ, ಸಾಮರ್ಥ್ಯರಹಿತ, ವ್ಯರ್ಥ ಮರೀಚಿಕೆಗಳಿಗಿಂತ ಹೆಚ್ಚಿನವೇನೂ ಆಗದಿರಲಿ, ಇನ್ನು ಮುಂದೆ ಅಸ್ತಿತ್ವದಲ್ಲಿ ಇರಬಾರದಂತಹ ಎಲ್ಲ ಅಜ್ಞಾನ, ಎಲ್ಲ ಮಬ್ಬುತನ, ಎಲ್ಲ ಅಹಂಕಾರ ಇವುಗಳ ಮೇಲೆ ನಮ್ಮ ಹೆಜ್ಜೆಯನ್ನು ದೃಢವಾಗಿ ಊರಿ, ನಮ್ಮ ಮೇಲ್ಮುಖ ಹಾರಾಟವನ್ನು, ದಿಟ್ಟತನದಿಂದ, ವಿಶಾಲವಾದ ಕ್ಷಿತಿಜಗಳತ್ತ, ಗಾಢತರವಾದ ಪ್ರಕಾಶದತ್ತ, ಹೆಚ್ಚು ಪರಿಪೂರ್ಣವಾದ ಕರುಣೆಯತ್ತ, ಹೆಚ್ಚು ನಿರಾಸಕ್ತ ಪ್ರೇಮದತ್ತ . . . ಹಾಗೂ ದೈವೀಪ್ರಭು ನಿನ್ನೆಡೆಗೆ ಮಾಡುವಂತಾಗಲಿ.

ಓ ದೈವೀ ಪ್ರಭು, ನಮ್ಮ ಜೀವನದ ಒಡೆಯನೆ ನಿನಗೆ ವಂದನೆಗಳು, ಪೃಥ್ವಿಯ ಮೇಲೆ ನಿನ್ನ ಆಳಿಕೆ ಇರುವುದನ್ನು ನಾನು ಸಾರಿ ಹೇಳಲು ಬಯಸುತ್ತೇನೆ.

ಪ್ರತಿಕ್ಷಣ ಪ್ರತಿಯೊಂದನ್ನು ದೊರಕಿಸುವುದಕ್ಕಾಗಿ, ಪ್ರತಿಯೊಂದನ್ನು ಹೇಗೆ ಕಳೆದುಕೊಳ್ಳಬೇಕು ಎಂಬುದನ್ನು ನಾವು ತಿಳಿದುಕೊಂಡಿರಬೇಕು. ಮೃತ ದೇಹವನ್ನು ತೊರೆದು ಬಿಡುವ ಹಾಗೆ ಗತಕಾಲವನ್ನು ಕಳಚಿ ಹಾಕಬೇಕು, ಅದರಿಂದಾಗಿ ನಾವು ಶ್ರೇಷ್ಠತರ ವೈಶಾಲ್ಯದಲ್ಲಿ ಮರುಜನ್ಮ ಪಡೆಯುವಂತಾಗುವುದು. ಅದು ಹಾಗಿರುವು–ದರಿಂದಾಗಿ ಆಂತರಿಕ ಸತ್ತೆಯ ಸತತ ಅಭೀಪ್ಸೆ ತನ್ನನ್ನು ಅಭಿವ್ಯಕ್ತಗೊಳಿಸುತ್ತದೆ, ನಿನ್ನೆಡೆಗೆ ಹೊರಳಿಕೊಂಡು ಎಂದೆಂದಿಗೂ ಶುದ್ಧವಾದ ಕನ್ನಡಿಯಲ್ಲಿ ನಿನ್ನನ್ನು ಪ್ರತಿಫಲಿಸಲು ಬಯಸುತ್ತದೆ, ಮತ್ತು ನಿನ್ನ ಬದಲಾಗದ ದಿವ್ಯಾನಂದ ಅದರಲ್ಲಿ

ಹೋಲಿಸಲಾಗದ ಗಾಢತೆಯಿರುವ ಪ್ರಗತಿಯ ಶಕ್ತಿಯನ್ನು ಮುಂದೂಡುವ ಕಾರ್ಯರೂಪ ಪಡೆಯುತ್ತದೆ, ಮತ್ತು ಈ ಶಕ್ತಿ ಅತ್ಯಂತ ಬಾಹ್ಯ ಸತ್ತೆಯಲ್ಲಿ ಸ್ಥಿರ, ದೃಢಗೊಂಡ ಸಂಕಲ್ಪವಾಗಿ ಪರಿವರ್ತನೆ ಹೊಂದುತ್ತದೆ, ಅದರ ಮೇಲೆ ಯಾವ ಅಡೆತಡೆಗೂ ಜಯಸಾಧಿಸಲಾಗುವುದಿಲ್ಲ.

*



**ಭಗವಂತನಿಗೆ ಮಾತ್ರ ಅಂಟಿಕೊಳ್ಳಿರಿ, ಗತಕಾಲಕ್ಕಲ್ಲ**

ನಿಮ್ಮ ಮನಸ್ಸು ಸಂಪೂರ್ಣವಾಗಿ ಬರಿದಾಗಿರುವಂತೆ, ದೈವೀಶಕ್ತಿಯನ್ನು ಸ್ವೀಕರಿಸುವಂತೆ ಅದನ್ನಿರಿಸಿರಿ. ಭಗವಂತನಿಗೆ ಮಾತ್ರ ಅಂಟಿಕೊಳ್ಳಿರಿ, ಗತಕಾಲಕ್ಕಲ್ಲ. ಭಗವಂತ ದೈವೀ ಸತ್ಯ, ದೈವೀ ಪ್ರೇಮ ಹಾಗೂ ದೈವೀ ಸಂತೋಷ ಇವೆಲ್ಲವೂ ಆಗಿದ್ದಾನೆ.

**(Mother you said it. p.8)** **– ಶ್ರೀಮಾತೆ**

*

**ಪ್ರತಿಯೊಂದು ಕ್ಷಣ ವಿಶ್ವವನ್ನು ಹೊಸದಾಗಿ ಸೃಷ್ಟಿಸಲಾಗುತ್ತದೆ.**

ಪ್ರತಿಕ್ಷಣ ಪೂರ್ವಭಾವಿಯಾಗಿ ಕಂಡುಕೊಂಡಿರದ, ಅನಿರೀಕ್ಷಿತವಾದ ಹಾಗೂ ಅಪರಿಚಿತವಾದ ಎಲ್ಲವೂ ನಮ್ಮೆದುರಿಗಿರುತ್ತದೆ, ಪ್ರತಿಕ್ಷಣ ವಿಶ್ವವನ್ನು ಅದರ



ಇಡಿಯಾಗಿರುವಿಕೆಯಲ್ಲಿ, ಅದರ ಭಾಗಗಳ ಪ್ರತಿಯೊಂದರಲ್ಲಿ ಹೊಸದಾಗಿ ಸೃಷ್ಟಿಸಲಾಗುತ್ತದೆ.

ಭಗವಂತ, ನಿನ್ನಲ್ಲಿ ನಿಜವಾಗಿ ಜೀವಂತವಿರುವ ನಂಬಿಕೆಯಿದ್ದರೆ, ನಿನ್ನ ಸರ್ವ–ಸಾಮರ್ಥ್ಯ ಹಾಗೂ ನಿನ್ನ ಏಕೈಕ ದೈವೀ ನೈಜತೆ ಇವುಗಳ ಬಗ್ಗೆ ನಿಶ್ಚಿತತೆಯಿದ್ದರೆ ಪ್ರತಿಕ್ಷಣ ನಿನ್ನ ಪ್ರಕಟಣೆ ಎಷ್ಟೊಂದು ಸ್ಪಷ್ಟವಾಗುತ್ತದೆಂದರೆ ಇಡೀ ವಿಶ್ವ ಅದರಿಂದ ಪರಿವರ್ತನೆಗೊಳಗಾಗುತ್ತದೆ. ಆದರೆ ನಮ್ಮ ಸುತ್ತಲಿರುವ ಹಾಗೂ ನಮ್ಮೆದುರು ಸಾಗಿ ಹೋದ ಪ್ರತಿಯೊಂದಕ್ಕೂ ನಾವು ಎಷ್ಟೊಂದು ಗುಲಾಮಗಿರಿಗೆ ಒಳಗಾಗಿ–ದ್ದೇವೆಂದರೆ, ಪ್ರಕಟವಾದ ವಸ್ತು–ವಿಷಯಗಳೆಲ್ಲವುಗಳಿಂದ ಎಷ್ಟೊಂದು ಪ್ರಭಾವಿತ–ರಾಗಿದ್ದೇವೆಂದರೆ, ಹಾಗೂ ನಮ್ಮ ನಂಬಿಕೆ ಎಷ್ಟೊಂದು ದುರ್ಬಲವಾಗಿದೆಯೆಂದರೆ ರೂಪಪರಿವರ್ತನೆಯ ಶ್ರೇಷ್ಠ ಪವಾಡಕ್ಕಾಗಿ ಮಧ್ಯವರ್ತಿಗಳಾಗಲು ನಮಗೆ ಸಾಧ್ಯವಾಗಿಲ್ಲ. . . . ಆದರೆ ದೈವೀ ಪ್ರಭುವೆ, ಒಂದು ದಿನ ಅದು ಬರಲಿದೆ ಎಂಬುದು ನನಗೆ ತಿಳಿದಿದೆ, ಒಂದು ದಿನ ಬರುತ್ತದೆ, ಆಗ ನೀನು ನಮ್ಮೆಡೆಗೆ ಬರುವ ಎಲ್ಲರನ್ನೂ ಪರಿವರ್ತನೆಗೆ ಒಳಪಡಿಸುವಿ, ನೀನು ಅವರನ್ನು ಎಷ್ಟೊಂದು ಮೂಲಭೂತವಾಗಿ ಪರಿವರ್ತಿಸುವಿ ಎಂದರೆ ಗತಕಾಲದ ಎಲ್ಲ ಬಂಧನಗಳಿಂದ ಮುಕ್ತರಾದ ಅವರು ನಿನ್ನಲ್ಲಿ ಇಡಿಯಾಗಿ ಹೊಸ ಜೀವನ ನಡೆಸುತ್ತ ವಾಸಿಸಲು ಪ್ರಾರಂಭಿಸುತ್ತಾರೆ, ಆ ಜೀವನ ಕೇವಲ ನಿನ್ನಿಂದಾಗಿರುತ್ತದೆ, ನೀನು ಅದರ ಸಾರ್ವಭೌಮ ಪ್ರಭುವಾಗಿರುತ್ತೀ ಮತ್ತು ಈ ರೀತಿಯಲ್ಲಿ ಎಲ್ಲ ತಳಮಳಗಳು ಪ್ರಶಾಂತತೆಯಾಗಿ, ಎಲ್ಲ ಬೇಗುದಿ ಶಾಂತಿಯಾಗಿ, ಎಲ್ಲ ಸಂಶಯಗಳು ನಿಶ್ಚಿತತೆ–ಗಳಾಗಿ, ಎಲ್ಲ ಕುರೂಪ ಸಾಮರಸ್ಯವಾಗಿ, ಎಲ್ಲ ಅಹಂಕಾರ ಸ್ವ–ನಿವೇದನೆಯಾಗಿ, ಎಲ್ಲ ಅಂಧಕಾರ ಪ್ರಕಾಶವಾಗಿ ಮತ್ತು ಎಲ್ಲ ವೇದನೆ ಬದಲಾಗದ ಸಂತೋಷವಾಗಿ ಪರಿವರ್ತನೆಗೊಳಗಾಗುತ್ತವೆ.

*

**ದೈವೀ ಪ್ರಭುವಿನೆದುರಿನಲ್ಲಿ ಖಾಲಿ ಪುಟದಂತಾಗಿರಿ, ಅದರಿಂದಾಗಿ ಅವನು ಅದರಲ್ಲಿ ತನ್ನ ಸಂಕಲ್ಪವನ್ನು ಬರೆಯುವಂತಾಗುವುದು.**

ಓಹ್, ದೈವೀ ಪ್ರಭು, ನಿನ್ನೆದುರು ನಾನು ಯಾವಾಗಲು ಪರಿಪೂರ್ಣವಾಗಿ ಖಾಲಿ ಪುಟದಂತಿರಲು ಇಷ್ಟಪಡುತ್ತೇನೆ, ಅದರಿಂದಾಗಿ ನಿನ್ನ ಸಂಕಲ್ಪವನ್ನು ಯಾವುದೇ ತೊಂದರೆ ಇಲ್ಲವೆ ಮಿಶ್ರಣವಿಲ್ಲದೆ ನನ್ನಲ್ಲಿ ಬರೆದಿಡುವಂತಾಗಲಿ.

ಗತಕಾಲದ ಅನುಭವಗಳ ನೆನಪು, ಕೆಲವೊಮ್ಮೆ, ಯೋಚನೆಯಿಂದ ಹೊರಗೆಸೆದುಕೊಂಡು ಹೋಗುವಂತಾಗಬೇಕು, ಅದರಿಂದಾಗಿ ಈ ನಿರಂತರ ಪುನರ್ರಚನೆಗೆ ಅಡೆತಡೆ ಇಲ್ಲದಂತಾಗುತ್ತದೆ. ಈ ಪುನರ್ರಚನೆ ಮಾತ್ರ, ಸಾಪೇಕ್ಷತೆ–ಗಳಿರುವ ಈ ಜಗತ್ತಿನಲ್ಲಿ ನಿನ್ನ ಪರಿಪೂರ್ಣ ಪ್ರಕಟಣೆಗೆ ಅನುಮತಿ ನೀಡುತ್ತದೆ. ಬಹಳಷ್ಟು ಸಲ ಮನುಷ್ಯ ಹಿಂದೆ ಇದ್ದುದಕ್ಕೆ ಅಂಟಿಕೊಳ್ಳುತ್ತಾನೆ, ಅವನಿಗೆ ಬಹುಮೌಲ್ಯವುಳ್ಳ ಅನುಭವವನ್ನು ಕಳೆದುಕೊಳ್ಳುವ, ವಿಶಾಲ ಹಾಗೂ ಉಚ್ಚ ಪ್ರಜ್ಞೆಯನ್ನು ಬಿಟ್ಟುಕೊಡುವ, ನಿಮ್ನತರ ಸ್ಥಿತಿಯಲ್ಲಿ ಹಿಂದೆ ಬಿದ್ದುಬಿಡಬಹು–ದಾದುದರ ಭಯವಿರುತ್ತದೆ.

ಆದಾಗ್ಯೂ ಭಗವಂತ, ನಿನ್ನವನೇ ಆದ ಅವನು ಯಾವುದಕ್ಕೆ ಭಯಪಡಬೇಕು? ನೀನು ಅವನಿಗಾಗಿ ಗುರುತಿಸಿಕೊಟ್ಟ ಮಾರ್ಗದ ಮೇಲೆ, ಅದೇನೇ ಆಗಿರಲಿ, ಒಟ್ಟಿನಲ್ಲಿ ಈ ಮಾರ್ಗ ಅವನ ಸೀಮಿತ ತರ್ಕಬುದ್ಧಿಗೆ ತಿಳಿಯದಂತಹದೇ ಆಗಿರಲಿ, ಅವನು ಸಂತೋಷವಿರುವ ಆತ್ಮದೊಂದಿಗೆ ನಡೆದು ಹೋಗಬಲ್ಲನಲ್ಲವೆ?

ಓ, ದೈವೀ ಪ್ರಭುವೆ, ಯೋಚನೆಯ ಪರಂಪರಾಗತ ವ್ಯವಸ್ಥೆಗಳನ್ನು ಮುರಿದು ಹಾಕು, ಗತಕಾಲದ ಅನುಭವಗಳನ್ನು ತೆಗೆದು ಹಾಕು, ನಿನಗೆ ಅವಶ್ಯವೆನಿಸಿದರೆ ಪ್ರಜ್ಞಾಪೂರ್ಣ ಸಮನ್ವಯವನ್ನು ಕರಗಿಸಿಬಿಡು, ಅದರಿಂದಾಗಿ ನಿನ್ನ ಕಾರ್ಯ ಹೆಚ್ಚು ಒಳ್ಳೆಯ ರೀತಿಯಲ್ಲಿ ಸಿದ್ಧಿಸಿಕೊಳ್ಳುವಂತಾಗಲಿ, ಪೃಥ್ವಿಯ ಮೇಲಿನ ನಿನ್ನ ಸೇವೆ ಪರಿಪೂರ್ಣಗೊಳ್ಳಲಿ.

*

**ಗತಕಾಲದ ಮೃತ್ಯು : ಹೊಸ ಜೀವನದ ಜನ್ಮ**

ಒಳಗೆಳೆದುಕೊಂಡಿರುವ ಒಂದು ಸ್ಥಿತಿಯಲ್ಲಿ ಉಳಿದುಕೊಂಡು ಗತಕಾಲದ ಕನಸಿನಲ್ಲಿ ಕಣ್ಮರೆಯಾಗುತ್ತಿರುವಂತಹ ತಿರುವು ಪಡೆಯುತ್ತಿರುವ ಈ ಪುಟವನ್ನು ಕುರಿತು ಧ್ಯಾನಿಸುತ್ತೇನೆ ಮತ್ತು ಭವಿಷ್ಯತ್ತಿನ ಕನಸನ್ನು ಕಾರ್ಯರೂಪಕ್ಕೆ ತರುವ ಪೂರ್ತಿ ಸಾಧ್ಯತೆಯನ್ನು ಹೊಂದಿರುವ ಹೊಸ ಪುಟದತ್ತ ನೋಡುತ್ತೇನೆ. . . . ಆದಾಗ್ಯೂ ನಿನ್ನ ಶಾಶ್ವತತೆಯ ಪ್ರಕಾಶದಲ್ಲಿ ನೋಡಿದಾಗ ಇದು ಎಷ್ಟೊಂದು ನಿರರ್ಥಕ, ಬಾಲಿಶ ಹಾಗೂ ಮಹತ್ವವಿಲ್ಲದ್ದು ಎಂದು ತೋರಿಬರುತ್ತದೆ.



ಮಹತ್ವದ್ದಾದ ಒಂದೇ ವಿಷಯವೆಂದರೆ, ಭಗವಂತ, ನಿನ್ನ ನಿಯಮಕ್ಕೆ ಪ್ರೇಮ ಹಾಗೂ ಸಂತೋಷದಿಂದ ವಿಧೇಯರಾಗಿರುವುದಾಗಿದೆ.

ಎಲ್ಲ ಗತಕಾಲ, ಅದರ ಬಾಹ್ಯರೂಪದಲ್ಲಿ ಹಾಸ್ಯಾಸ್ಪದವಾಗುವ ಹಾಗೆ ಸ್ವೇಚ್ಛಾನುಸಾರಿಯಾಗಿತ್ತು ಎಂದು ನನಗೆ ತೋರಿಬರುತ್ತದೆ, ಮತ್ತು ಆದಾಗ್ಯೂ ಅದು ಅದರದೇ ಕಾಲದಲ್ಲಿ ಉಪಯುಕ್ತವಾಗಿತ್ತು ಎಂಬುದು ನನಗೆ ತಿಳಿದಿದೆ.

ಆದರೆ ಈಗ ಎಲ್ಲವೂ ಬದಲಾಗಿದೆ: ಹೊಸ ಸ್ಥಿತಿ ಪ್ರಾರಂಭವಾಗಿದೆ.

*

ನಾನು ಹೊಸ ಜೀವನ ನಡೆಸಲು ಜನ್ಮ ತಾಳುತ್ತಿದ್ದೇನೆ ಎಂದು ನನಗೆ ತೋರಿಬರುತ್ತಿದೆ, ಮತ್ತು ಎಲ್ಲ ವಿಧಾನಗಳು, ಗತಕಾಲದ ರೂಢಿಗಳು ಇನ್ನು ಮುಂದೆ ಯಾವ ಉಪಯೋಗಕ್ಕೂ ಬರುವುದಿಲ್ಲ. ನಾನು ಪರಿಣಾಮಗಳೆಂದು ತಿಳಿದುಕೊಂಡಂತಹವುಗಳು ಒಂದು ತಯಾರಿ ರೂಪದವಾದವುಗಳಿಗಿಂತ ಹೆಚ್ಚಿನವೇನಾಗಿಲ್ಲ. ನಾನು ಈವರೆಗೆ ಏನನ್ನೂ ಕೈಕೊಂಡಿಲ್ಲ, ಆಧ್ಯಾತ್ಮಿಕ ಜೀವನವನ್ನು ಜೀವಿಸಿಲ್ಲ, ಕೇವಲ ಅದರತ್ತ ಕೊಂಡೊಯ್ಯುವ ಮಾರ್ಗದ ಮೇಲೆ ಪ್ರವೇಶಿಸಿದ್ದೇನೆ, ನನಗೆ ಏನೂ ತಿಳಿದಿಲ್ಲ, ಯಾವುದಕ್ಕೂ ರೂಪಕೊಡಲು ಅಸಮರ್ಥಳಾಗಿದ್ದೇನೆ, ಎಲ್ಲ ಅನುಭವ ಇನ್ನು ಮುಂದೆ ಪ್ರಾರಂಭವಾಗಬೇಕಾಗಿದೆ ಎಂಬ ಭಾವನೆ ನನಗೆ ಬರುತ್ತಿದೆ. ನನ್ನಿಂದ ನನ್ನ ಎಲ್ಲ ಗತಕಾಲವನ್ನು ಕಿತ್ತು ಹಾಕಿದಂತಿದೆ, ಅದರ ದೋಷಗಳು ಹಾಗೂ ವಿಜಯಗಳೊಂದಿಗೆ ಅದು ಕಣ್ಮರೆಯಾದಂತಿದೆ ಮತ್ತು ಅದು ಹೊಸದಾಗಿ ಜನ್ಮತಾಳಿದ ಮಗುವಿಗೆ ಸ್ಥಾನ ಮಾಡಿಕೊಡುತ್ತಿರುವಂತಿದೆ, ಅದರ ಇಡೀ ಅಸ್ತಿತ್ವವನ್ನು ಇನ್ನು ಜೀವಿಸಬೇಕಾಗಿದೆ, ಅದಕ್ಕೆ ಯಾವ ಕರ್ಮವು ಇಲ್ಲ, ಕಲಿತುಕೊಳ್ಳಲು ಯಾವ ಅನುಭವವೂ ಇಲ್ಲ, ಆದರೆ ಸರಿಪಡಿಸಬೇಕಾದ ಯಾವ ದೋಷವೂ ಇಲ್ಲ. ನನ್ನ ತಲೆ ಎಲ್ಲ ಜ್ಞಾನ ಹಾಗೂ ದೃಢನಂಬಿಕೆ ಇವುಗಳಾವೂ ಇಲ್ಲದೆ ಬರಿದಾಗಿದೆ, ಹಾಗೆಯೇ ಅಲ್ಲಿ ವ್ಯರ್ಥ ಯೋಚನೆಯೂ ಇಲ್ಲ. ನಾನು ಈ ಸ್ಥಿತಿಗೆ ಯಾವ ವಿರೋಧವನ್ನು ವ್ಯಕ್ತಪಡಿಸದೆ ಶರಣಾಗುವುದು ಹೇಗೆ ಎಂಬುದನ್ನು ಕಲಿತುಕೊಂಡರೆ, ಸಂಪೂರ್ಣವಾಗಿ ಒಬ್ಬ ಅಜ್ಞಾನಿ ಹಾಗೂ ಬಿಚ್ಚುಮನಸ್ಸಿನ ಮಗುವಾಗುವುದಕ್ಕೆ ಒಪ್ಪಿಗೆ ನೀಡಿದರೆ ಯಾವುದೋ ಹೊಸ ಸಾಧ್ಯತೆಯೊಂದು ನನ್ನೆದುರಿಗೆ ತೆರೆದುಕೊಳ್ಳುತ್ತದೆ. ನಾನು ಈಗ ನನ್ನನ್ನು ನಿರ್ಧಾರಕವಾಗಿ ಬಿಟ್ಟುಕೊಡಬೇಕು ಮತ್ತು ಸಂಪೂರ್ಣವಾಗಿ ಬರಿದಾಗಿರುವ ಪುಟದ ಹಾಗಾಗಬೇಕು ಎಂಬುದನ್ನು ತಿಳಿದಿದ್ದೇನೆ, ಆ ಪುಟದ

ಮೇಲೆ ಓ ಭಗವಂತ, ನಿನ್ನ ಯೋಚನೆ, ನಿನ್ನ ಸಂಕಲ್ಪಗಳನ್ನು ವಿರೂಪಗೊಳ್ಳುವ ಅಪಾಯವಿಲ್ಲದೆ ಮುಕ್ತವಾಗಿ ರೇಖಿಸುವಂತಾಗುವುದು.

*

ಕೊನೆಯ ಈ ದಿನಗಳಲ್ಲಿದ್ದುದಕ್ಕಿಂತ ಗತಕಾಲ ಹೆಚ್ಚು ಬಲವಂತವಾಗಿ ಮೃತವಾಗಿದೆ, ಹೊಸ ಜೀವನದ ಕಿರಣಗಳಡಿಯಲ್ಲಿ ಅದು ಹುಗಿದು ಹೋದ ಹಾಗಿದೆ.

ಈ ಪುಸ್ತಕದ ಕೆಲವು ಪುಟಗಳನ್ನು ಓದುತ್ತಿದ್ದಂತೆ, ನಾನು ಹಿಂದೆ ಸರಿದು ನೋಡಿದ ಕೊನೆಯ ಇಣುಕು ನೋಟ ಈ ಮೃತ್ಯು ಕುರಿತು ಮನವರಿಕೆ ಮಾಡಿಕೊಟ್ಟಿತು, ಮತ್ತು ಓ ದೈವೀ ಪ್ರಭು ನಾನು ನಿನ್ನೆದುರಿಗೆ ಮಗುವಿನ ಎಲ್ಲ ಸರಳತೆಯಿಂದ ಹಾಗೂ ನಿರ್ಮಲತೆಯಿಂದ ಇರಿಸುವ ಭವ್ಯ ಭಾರವನ್ನು ಅದು ಹಗುರು ಮಾಡಿತು. . . . ಆದಾಗ್ಯೂ ನಾನು ಸ್ಥಿರತೆ ಮತ್ತು ಪರಿಶುದ್ಧ ಭವ್ಯತೆ ಇವುಗಳನ್ನು ಮಾತ್ರ ಗ್ರಹಿಕೆಗೆ ತಂದುಕೊಳ್ಳುತ್ತಿದ್ದೇನೆ.

*

ನಿಮ್ಮ ಮೃತ ಗತಕಾಲದಿಂದ ಹೊರಳಿರಿ ಮತ್ತು ನೇರವಾಗಿ ಭವಿಷ್ಯದತ್ತ ನೋಡಿರಿ. ಯೋಗಾಚರಣೆಯತ್ತ ಬಂದಾಗ ನಿಮ್ಮ ಎಲ್ಲ ಮಾನಸಿಕ ನಿರ್ಮಾಣಗಳನ್ನು ಎಲ್ಲ ಪ್ರಾಣಿಕ ಹಂದರಗಳನ್ನು ಪುಡಿಪುಡಿಯಾಗುವಂತೆ ಮಾಡಲು ಬಿಟ್ಟುಕೊಡಬೇಕು. ನಿಮ್ಮ ನಂಬಿಕೆಯ ಹೊರತಾಗಿ ಬೇರಾವ ಆಧಾರವಿಲ್ಲದೆ ಗಾಳಿಯಲ್ಲಿ ತೂಗುತ್ತಿರುವುದಕ್ಕೆ ನೀವು ತಯಾರಾಗಿರಬೇಕು. ನಿಮ್ಮ ಹಿಂದಿನ ಆತ್ಮವನ್ನು ಹಾಗೂ ಅದಕ್ಕೆ ಅಂಟಿಕೊಂಡಿರುವುದೆಲ್ಲವನ್ನು ಒಟ್ಟಿನಲ್ಲಿ ಮರೆತುಬಿಡಬೇಕಾಗುತ್ತದೆ, ಅದನ್ನು ನಿಮ್ಮ ಪ್ರಜ್ಞೆಯಿಂದ ಕಿತ್ತುಹಾಕಿ, ಎಲ್ಲ ಬಗೆಯ ಬಂಧನದಿಂದ ಮುಕ್ತರಾಗಿ ಹೊಸ ಜನ್ಮ ಪಡೆಯಬೇಕಾಗುತ್ತದೆ. ನೀವೇನಾಗಿದ್ದಿರಿ ಎಂಬುದನ್ನು ಕುರಿತು ಯೋಚಿಸುವುದು ಬೇಡ, ಆದರೆ ನೀವು ಸಿದ್ಧಿಸಿಕೊಳ್ಳುವುದರಲ್ಲಿ ನೀವೇನಾಗಲು ಬಯಸುವಿರಿ ಎಂಬುದನ್ನು ಕುರಿತಾದ ಅಭೀಪ್ಸೆಯ ಬಗ್ಗೆ ಯೋಚಿಸಿರಿ. ನಿಮ್ಮ ಮೃತ ಗತಕಾಲ–ದಿಂದ ಹೊರಳಿರಿ, ನೇರವಾಗಿ ಭವಿಷ್ಯದತ್ತ ನೋಡಿರಿ. ನಿಮ್ಮ ಧರ್ಮ, ದೇಶ, ಕುಟುಂಬ ಎಲ್ಲವೂ ಅಲ್ಲಿರುತ್ತವೆ, ಅದೆಲ್ಲವೂ ಭಗವಂತ.

**CWM,** 1/42, 283, 54, 277, 114, 116, 123; 3/83–84 **– ಶ್ರೀಮಾತೆ**

*





ಪ್ರಕಾಶ ಬಂದಿದೆ, ಮಾರ್ಗ ತೆರೆದುಕೊಂಡಿದೆ, ಶ್ರಮದಾಯಕವಾಗಿದ್ದ ಗತಕಾಲಕ್ಕೆ ಕೃತಜ್ಞತೆಯಿಂದ ನಮಸ್ಕರಿಸಿ ನಾವು ತೀವ್ರಗತಿಯಿಂದ ಮುಂದೆ ಸಾಗುವೆವು, ಆ ಮಾರ್ಗ ಭಗವಂತ, ನಿನ್ನಿಂದ ನಮ್ಮೆದುರಿಗೆ ವಿಸ್ತಾರವಾಗಿ ತೆರೆದುಕೊಂಡಿದೆ.

ಹೆಚ್ಚು ವಿಶಾಲ ಹಾಗೂ ಪ್ರಜ್ಞಾಪೂರ್ಣ ಸಿದ್ಧಿಯ ಈ ಹೊಸ ಕ್ಷೇತ್ರದ ಹೊಸ್ತಿಲಲ್ಲಿ ಓ ದೈವೀ ಪ್ರಭು, ಸಮಗ್ರ ಶರಣಾಗತಿ ಹಾಗೂ ಆರಾಧನೆಗಳಿಂದ ನಾವು ಬಾಗಿ ಸಮಸ್ಕಾರ ಮಾಡುತ್ತೇವೆ. ಯಾವ ಕಾದಿರಿಸಿಕೆ ಇಲ್ಲದೆ ನಾವು ನಮ್ಮನ್ನು ನಿನಗೆ ಕೊಟ್ಟುಕೊಳ್ಳುತ್ತೇವೆ.

**CWM, 1/230** **– ಶ್ರೀಮಾತೆ**

*

## ಗತಕಾಲದ ದೋಷಗಳು ಹಾಗೂ ತಪ್ಪುಗಳೊಡನೆ ವ್ಯವಹರಿಸುವುದಕ್ಕಾಗಿ ಸೂತ್ರಗಳು

### ಗತಕಾಲದ ತಪ್ಪುಗಳನ್ನು ಸರಿಪಡಿಸುವುದು

ಗತಕಾಲದ ಎರಕಗಳನ್ನು ಮುರಿದು ಹಾಕಿರಿ, ಆದರೆ ಅವುಗಳಿಂದ ದೊರಕಿಸಿದ ಲಾಭಗಳನ್ನು, ಮನೋಭಾವವನ್ನು ಕಾಪಾಡಿಕೊಂಡು ಬನ್ನಿರಿ, ಹಾಗಿಲ್ಲದೆ ಹೋದರೆ ನಿಮಗೆ ಭವಿಷ್ಯವಿರುವುದಿಲ್ಲ.

*

ಪ್ರತಿಯೊಂದು ಕ್ಷಣ ದೋಷಗಳನ್ನು ಹಾಗೂ ತಪ್ಪುಗಳನ್ನು ಅಳಿಸಿ ಹಾಕದಿದ್ದರೆ ಜಗತ್ತಿಗೆ ಮುಕ್ತಿ ದೊರಕಿಸುವ ಭರವಸೆಯಿರುವುದಿಲ್ಲ.

*

ನಿಮ್ಮ ಜೀವನದಲ್ಲಿ ಒಂದು ತಪ್ಪನ್ನು ಮಾಡಿದರೆ, ನಿಮ್ಮ ಜೀವನದುದ್ದಕ್ಕೂ ವೇದನೆ ಪಡಬೇಕಾಗಬಹುದು. ಅದರರ್ಥ ಪ್ರತಿಯೊಬ್ಬನೂ ಆ ರೀತಿ ವೇದನೆ–ಗೊಳಗಾಗುತ್ತಾನೆ ಎಂದಿರುವುದಿಲ್ಲ. ತಪ್ಪುಗಳನ್ನೆಸಗುತ್ತ ಹೋಗುವ ಜನರಿರುತ್ತಾರೆ, ಆದಾಗ್ಯೂ ಅವರು ವೇದನೆಗೊಳಗಾಗುವುದಿಲ್ಲ.

ಆಧ್ಯಾತ್ಮಿಕ ಜೀವನಕ್ಕಾಗಿ ಜನ್ಮ ತಾಳಿದವರು ಬಹಳ ಕಾಳಜಿಯಿಂದ ಇರಬೇಕು.

*

ನಿಮ್ಮ ತಪ್ಪುಗಳನ್ನು ಗುರುತಿಸುವುದು ಒಳ್ಳೆಯದು, ಆದರೆ ಅದರಿಂದ ನಿಮ್ಮನ್ನು ಪೀಡೆಗೆ ಒಳಪಡಿಸಿಕೊಳ್ಳಬಾರದು.

ನೀವು ವೇದನೆಪಡಬಾರದು, ಬದಲಾಗಿ ನಿಮ್ಮನ್ನು ಸರಿಪಡಿಸಿಕೊಳ್ಳಬೇಕು.

*

ತಪ್ಪೊಂದನ್ನು ಮಾಡಿದಾಗ, ಅದನ್ನು ಯಾವಾಗಲೂ ಪ್ರಗತಿಗಾಗಿ ಒಂದು ಸಾಧನವನ್ನಾಗಿ ಮಾಡಬೇಕು; ಒಮ್ಮೆ ಅವಶ್ಯವಾದ ಬದಲಾವಣೆಯನ್ನು ಮಾಡಿದಾಗ ಆ ತಪ್ಪು ಹಾಗೂ ಅದಕ್ಕಿದ್ದ ಕಾರಣ ಮಾಯವಾಗಿರುತ್ತವೆ ಮತ್ತು ಅವು ಪುನರಾವರ್ತಿಸುವುದು ಸಾಧ್ಯವಿರುವುದಿಲ್ಲ.

*



ಪ್ರತಿದಿನ ರಾತ್ರಿ ನಿದ್ದೆ ಮಾಡುವ ಮೊದಲು ನಾವು ಹಗಲಿನ ವೇಳೆಯಲ್ಲಿ ಮಾಡಿರಬಹುದಾದ ತಪ್ಪುಗಳು ಭವಿಷ್ಯತ್ತಿನಲ್ಲಿ ಪುನರಾವರ್ತಿಸದಿರಲಿ ಎಂದು ಪ್ರಾರ್ಥನೆ ಮಾಡಬೇಕು.

*

ಸಾಪೇಕ್ಷತೆಗಳಿರುವ ಈ ಜಗತ್ತಿನಲ್ಲಿ ಭಗವಂತನ ಪರಿಪೂರ್ಣ ಪ್ರಕಟಣೆಗೆ ಅವಕಾಶ ಮಾಡಿಕೊಡುವ ನಿರಂತರ ಪುನರ್ನಿರ್ಮಾಣಕ್ಕೆ ಅಡೆತಡೆ ಯಾಗದಿರಲೆಂದು ಗತಕಾಲದ ಅನುಭವವನ್ನು ಕೆಲವೊಮ್ಮೆ ತೊಡೆದು ಹಾಕಬೇಕಾಗುತ್ತದೆ.

*

ವಿಶಾಲವಾದ ಹಾಗೂ ಉಚ್ಚವಾದದ್ದಾದ ಪ್ರಜ್ಞೆಯನ್ನು ಬಿಟ್ಟುಕೊಟ್ಟು ಹಿಂದಿನ ಅನುಭವವನ್ನು ಕಳೆದುಕೊಳ್ಳುವ ಭಯದಿಂದ, ಬಹಳಷ್ಟು ಸಲ ಮೊದಲು ಇದ್ದದ್ದಕ್ಕೆ ನಾವು ಅಂಟಿಕೊಳ್ಳುತ್ತೇವೆ, ಆದರೆ ನಾವು ಭವಿಷ್ಯದತ್ತ ನೋಡಬೇಕು ಹಾಗೂ ಮುನ್ನಡೆದು ಹೋಗಬೇಕು.

*

ಗತಕಾಲದಲ್ಲಾದುದರ ಬಗ್ಗೆ ವಿಷಾದ ಬೇಡ, ಇಲ್ಲವೆ ಮುಂದೇನಾಗಲಿದೆ ಎಂಬುದನ್ನು ಕುರಿತು ಕಲ್ಪನೆ ಮಾಡಿಕೊಳ್ಳುವುದು ಬೇಡ.

ನಿಮ್ಮ ಯೋಚನೆಗಳಲ್ಲಿ ನಿರಾಶಾವಾದ ಇರುವುದನ್ನು ಸಾಧ್ಯವಿದ್ದಷ್ಟು ತಡೆಹಿಡಿಯಬೇಕು ಮತ್ತು ಸ್ವಯಂಪ್ರೇರಣೆಯಿಂದ ಆಶಾವಾದಿಗಳಾಗಬೇಕು.

*

ಪ್ರತಿಕ್ಷಣ ಪ್ರತಿಯೊಂದನ್ನು ಗಳಿಸುವುದಕ್ಕಾಗಿ ಪ್ರತಿಯೊಂದನ್ನು ಹೇಗೆ ಕಳೆದುಕೊಳ್ಳಬೇಕು ಎಂಬುದನ್ನು ಮನುಷ್ಯ ತಿಳಿದುಕೊಳ್ಳಬೇಕು, ಗತಕಾಲವನ್ನು ಶವವೊಂದನ್ನು ತ್ಯಜಿಸುವ ರೀತಿಯಲ್ಲಿ ಬಿಟ್ಟುಕೊಡಬೇಕು ಮತ್ತು ಶ್ರೇಷ್ಠತರ ವೈಶಾಲ್ಯದಲ್ಲಿ ಮರುಜನ್ಮ ಪಡೆಯಬೇಕು.

*

ಪ್ರತಿಯೊಬ್ಬ ವ್ಯಕ್ತಿಗೆ, ತಾನು ಚಿರಸ್ಮರಣೀಯವಾಗಿ ಉಳಿದುಕೊಳ್ಳಲು ಬಯಸುವ ಗತಕಾಲಕ್ಕೆ ಸೇರಿರಬೇಕೋ, ಬರಿದಾಗುತ್ತ ಹೋಗುತ್ತಿರುವ ವರ್ತಮಾನ ಕಾಲಕ್ಕೆ ಸೇರಿರಬೇಕೋ ಇಲ್ಲವೆ ಹೊಸದಾಗಿ ಜನ್ಮ ತಾಳುತ್ತಿರುವ ಭವಿಷ್ಯತ್ತಿಗೆ ಸೇರಿರಬೇಕೋ ಎಂಬುದರ ಮೇಲೆ ಪ್ರತಿಯೊಂದು ಅವಲಂಬಿಸಿರುತ್ತದೆ.

*


ಉದಾರ ಹೃದಯ, ಯಾವಾಗಲೂ, ಗತಕಾಲದ ಅಪರಾಧಗಳನ್ನು ಮರೆತುಬಿಡುತ್ತದೆ, ಸಾಮರಸ್ಯವನ್ನು ಮತ್ತೆ ಸ್ಥಾಪಿಸಲು ತಯಾರಾಗಿರುತ್ತದೆ.

ಗತಕಾಲದಲ್ಲಿ ಅಂಧಕಾರದಲ್ಲಿದ್ದ, ಕುರೂಪದ್ದಾಗಿದ್ದ ಎಲ್ಲವನ್ನೂ ನಾವು ಮರೆತುಬಿಡೋಣ, ಅದರಿಂದಾಗಿ ಪ್ರಕಾಶಮಯ ಭವಿಷ್ಯತ್ತನ್ನು ಸ್ವೀಕರಿಸಲು ನಮ್ಮನ್ನು ತಯಾರು ಮಾಡಿಕೊಳ್ಳುವಂತಾಗುವುದು.

ಪ್ರೀತಿ ಹಾಗೂ ಆಶೀರ್ವಾದಗಳೊಂದಿಗೆ

**CWM, 10/283, 14/234, 234–35, 237, 238, 239, 15/70, 12/141, 15/71, 16/357)** **– ಶ್ರೀಮಾತೆ**

*



ಜೀವನದಲ್ಲಿ ಏಕೈಕ ಸುರಕ್ಷಿತತೆಗಾಗಿ, ಗತಕಾಲದ ದೋಷಗಳ ಪರಿಣಾಮ–ಗಳಿಂದ ಪಾರಾಗುವುದಕ್ಕಾಗಿ ಇರುವ ಏಕೈಕ ಮಾರ್ಗ ದೈವೀ ಸಾನ್ನಿಧ್ಯದೊಂದಿಗೆ ಪ್ರಜ್ಞಾಪೂರ್ಣ ಏಕತೆ ಪಡೆಯುವತ್ತ ಆಂತರಿಕ ಅಭಿವೃದ್ಧಿ ಮಾಡಿಕೊಳ್ಳುವುದಾಗಿದೆ, ಆ ಸಾನ್ನಿಧ್ಯ ಮಾತ್ರ ಪರಿಣಾಮಕಾರಿ ಮಾರ್ಗದರ್ಶಕ ನಮ್ಮ ಸತ್ತೆಯ ಹಾಗೂ ಎಲ್ಲ ಸತ್ತೆಗಳ ದೈವೀ ಸತ್ಯವಾಗಿರುತ್ತದೆ.

**CWM, 10/275** **– ಶ್ರೀಮಾತೆ**

*





## ಶ್ರೀಮಾತೆಯವರ ಸಂಕೇತ

ಯೋಗವನ್ನು ಕೈಕೊಳ್ಳುವುದಕ್ಕಾಗಿ ಸಿದ್ಧಿಸಿಕೊಳ್ಳಬೇಕಾದ ಅತ್ಯಂತ ಮಹತ್ವದ ಸಂಗತಿಗಳಲ್ಲಿ ಗತಕಾಲಕ್ಕಿರುವ ಎಲ್ಲ ಆಸಕ್ತಿಯನ್ನು ತೊಡೆದು ಹಾಕುವುದು ಒಂದು ಮಹತ್ವದ ಸಂಗತಿಯಾಗಿರುತ್ತದೆ.

ಗತಕಾಲ ಗತವಾಗಿ ಹೋಗಲಿ, ನೀವು ಸಾಧಿಸಲು ಬಯಸುವ ಪ್ರಗತಿಯ ಮೇಲಷ್ಟೇ ಏಕಾಗ್ರತೆ ವಹಿಸಿರಿ, ನೀವು ಸಿದ್ಧಿಸಿಕೊಳ್ಳಬೇಕಾದುದನ್ನು ಭಗವಂತನಿಗೆ ಅರ್ಪಿಸಿಬಿಡಿರಿ.

*

ಗತಕಾಲದ ರೂಢಿಗಳು ಹಾಗೂ ನಂಬಿಕೆಗಳು ಇವುಗಳಿಂದ ಬೇರ್ಪಡಿಸಿಕೊಳ್ಳದೆ ಹೋದರೆ, ಭವಿಷ್ಯದತ್ತ ತೀವ್ರಗತಿಯಿಂದ ಮುಂದುವರಿಯಲು ಭರವಸೆ ಅತಿ ಕಡಿಮೆಯಾಗಿರುತ್ತದೆ.

*

ಗತಕಾಲದ ತರಂಗಗಳು ನಿಮ್ಮಿಂದ ದೂರ ಹರಿದು ಹೋಗಲಿ, ತಮ್ಮೊಡನೆ ಅವು ಎಲ್ಲ ಆಸಕ್ತಿಗಳನ್ನು ಹಾಗೂ ದೌರ್ಬಲ್ಯಗಳನ್ನು ಎತ್ತಿಕೊಂಡು ಹೋಗಲಿ. ಅವುಗಳ ಸ್ಥಾನದಲ್ಲಿ ಬರಲು ದೈವೀ ಪ್ರಜ್ಞೆಯ ಪ್ರಕಾಶಮಯ ಸಂತೋಷ ಸಿದ್ಧಗೊಂಡು ಕಾದುಕೊಂಡಿದೆ.

*

ಗತಕಾಲ ಗತವಾಗಿ ಉಳಿದುಕೊಂಡು ಬಿಡಲಿ
ಸನಾತನನ ಮೇಲಷ್ಟೇ ಏಕಾಗ್ರತೆ ವಹಿಸಿರಿ
ಆಶೀರ್ವಾದಗಳು.

*

**ಪ್ರಶ್ನೆ :** *ನಾನು ಭಗವಂತನನ್ನು ಈ ಜೀವನದಲ್ಲಿ ಹಾಗೂ ನನ್ನ ಮೊದಲಿನ ಹಲವಾರು ಜೀವನಗಳಲ್ಲಿ ಮರೆತುಬಿಟ್ಟಿದ್ದೇನೆ. ಆದರೆ ನಿಮ್ಮ ದೈವೀಕೃಪೆಯ ಒಂದು ಹನಿ ಕಳೆದು ಹೋದ ಸಮಯವನ್ನು ಸರಿದೂಗಿಸಲು ನನ್ನನ್ನು ಶಕ್ತನನ್ನಾಗಿ ಮಾಡಬಹುದು.*

**ಶ್ರೀಮಾತೆ :** ಗತಕಾಲ ಏನೇ ಆಗಿರಲಿ, ಭಗವಂತನೊಡನೆ ಸಂಪರ್ಕ ಸ್ಥಾಪಿಸಲು ಅವಶ್ಯವಾದದ್ದು ಕಾಲವಲ್ಲ, ಆದರೆ ಅಭೀಪ್ಸೆಯಲ್ಲಿ ನಿಷ್ಕಾಪಟ್ಯ ಇರುವುದಾಗಿದೆ!

**CWM, 15/71, 72, 16, 371** **– ಶ್ರೀಮಾತೆ**

*

## ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 14ನೇ ನವೆಂಬರ್ 2014 ರ ಶುಕ್ರವಾರದಂದು ಮೀರಾಂಬಿಕಾ ಶಾಲೆಯ ವತಿಯಿಂದ ಕನ್ನಡ ರಾಜ್ಯೋತ್ಸವ ಮತ್ತು ಮಕ್ಕಳ ದಿನಾಚರಣೆಯನ್ನು ಏರ್ಪಡಿಸಲಾಗಿತ್ತು. ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಶಾಲಾ ಪ್ರಾಂಶುಪಾಲರು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. ವಿದ್ಯಾರ್ಥಿಗಳು ಕನ್ನಡ ರಾಜ್ಯೋತ್ಸವದ ಆಚರಣೆ ಮತ್ತು ಕನ್ನಡ ಭಾಷೆಯ ಮಹತ್ವದ ಬಗ್ಗೆ ಮಾತನಾಡಿದರು. ಬಳಿಕ ಮಕ್ಕಳ ದಿನಾಚರಣೆಯ ಪ್ರಯುಕ್ತ ಶಿಕ್ಷಕ ವೃಂದದವರು ತಮ್ಮ ಕಲಾಪ್ರತಿಭೆಯನ್ನು ವಿದ್ಯಾರ್ಥಿಗಳ ಮುಂದೆ ಅನಾವರಣಗೊಳಿಸಿದರು.

ದಿನಾಂಕ 17ನೇ ನವೆಂಬರ್ 2014 ರ ಸೋಮವಾರದಂದು ಶ್ರೀಮಾತೆಯವರ ಮಹಾಸಮಾಧಿಯ ದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ



7.00 ರಿಂದ 7.30 ರವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ತತ್ಸಂಬಂಧ 5.00 ರಿಂದ 6.15 ರವರೆಗೆ ಶ್ರೀಯುತ ಭಾಸ್ಕರ ರೆಡ್ಡಿಯವರು "A Yoga that is upside down" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ನೀಡಿದರು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು, ಸಂಕೀರ್ಣದ ಸಿಬ್ಬಂದಿ ವರ್ಗದವರು ಹಾಜರಿದ್ದರು.

ದಿನಾಂಕ 23ನೇ ನವೆಂಬರ್ 2014 ರ ಭಾನುವಾರದಂದು ಬೆಳಿಗ್ಗೆ 10.30 ರಿಂದ 12.00 ಗಂಟೆಯವರೆಗೆ ಪ್ರೊ. ಟಿ. ರಾಮಕೃಷ್ಣರವರು "Demystifying Savitri - Part I" ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು.

ದಿನಾಂಕ 24ನೇ ನವೆಂಬರ್ 2014 ರ ಸೋಮವಾರದಂದು ಶ್ರೀ ಅರವಿಂದರ ಸಿದ್ಧಿಯ ದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 7.00 ರಿಂದ 7.30 ರವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ತತ್ಸಂಬಂಧ 5.00 ರಿಂದ 6.30 ರವರೆಗೆ ಪ್ರೊ. ಟಿ. ರಾಮಕೃಷ್ಣರವರು "Demystifying Savitri - Part II" ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು, ಸಂಕೀರ್ಣದ ಸಿಬ್ಬಂದಿ ವರ್ಗದವರು ಹಾಜರಿದ್ದರು.

## ಶ್ರೀ ಅರವಿಂದೋ ಸೊಸೈಟಿ, ಬಿಲ್ಲಹಳ್ಳಿ ಕೇಂದ್ರ (ಕೆ.ಸಿ. 14)

ಬಿಲ್ಲಹಳ್ಳಿ (ಕೆ.ಸಿ. 14) ಶ್ರೀ ಅರವಿಂದ ಅಧ್ಯಯನ ಮಂಡಳ, ಬಿಲ್ಲಹಳ್ಳಿಯ ವತಿಯಿಂದ ದಿನಾಂಕ: 12–10–2014ರಂದು ಶ್ರೀಮಾತಾರವಿಂದರ ಯೋಗ ಶಿಬಿರವನ್ನು ಏರ್ಪಡಿಸಲಾಯಿತು. ಶ್ರೀ ಪುರುಷೋತ್ತಮ ಗಲಗಲಿ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಬಿ. ಅಜ್ಜಪ್ಪ ದೊಡ್ಡಿಕೊಪ್ಪ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಉಪನ್ಯಾಸಕರಾಗಿ ಶ್ರೀ ವರಾಹಮೂರ್ತಿ, ಗೌರಿಬಿದನೂರು ಅವರು 'ಯುವ ಜನಾಂಗಕ್ಕೆ ಶ್ರೀ ಅರವಿಂದರ ಸಂದೇಶ' ಎಂಬ ವಿಷಯದ ಮೇಲೆ ಮಾತನಾಡುತ್ತ "ಯುವ ಜನಾಂಗ ಪ್ರೇರಿತರಾಗಲು ಅವರಿಗೆ ಆದರ್ಶ ವ್ಯಕ್ತಿಗಳ ಕೊರತೆ ಇದೆ. ಅದನ್ನು ತುಂಬಿಕೊಳ್ಳಲು ಪುನಃ ವೇದ, ಉಪನಿಷತ್‌ಗಳಂತಹ ಮಹತ್‌ಗ್ರಂಥಗಳ ಕಡೆಗೆ ಗಮನ ಹರಿಸಬೇಕು. 'ಇಂಥದೊಂದು ಪರಿವರ್ತನೆ

ಬರಬೇಕಾದರೆ ಭೌತಿಕ ಶಕ್ತಿಯಿಂದಲ್ಲ, ಆಧ್ಯಾತ್ಮ–ಜ್ಞಾನ ಶಕ್ತಿಯಿಂದ, ಕ್ಷಾತ್ರತೇಜಸ್ಸಿನಿಂದಲ್ಲ ಬ್ರಹ್ಮತೇಜಸ್ಸಿನಿಂದ ಮಾತ್ರ ಸಾಧ್ಯ' ಎಂದು ಶ್ರೀ ಅರವಿಂದರು ಯುವ ಪೀಳಿಗೆಗೆ ತಮ್ಮ ಸಂದೇಶ ನೀಡಿದ್ದಾರೆ ಎಂದು ಹೇಳಿದರು.

ಪ್ರೊ. ನಂದೀಶ, ತುಮಕೂರು ಅವರು 'ನಿತ್ಯ ಜೀವನದಲ್ಲಿ ಸಾಧನೆ' ಬಗ್ಗೆ ಮಾತನಾಡಿ, 'ಯೋಗ ಸಾಧನೆ ಮಾಡಬಯಸುವವರು ಯೌಗಿಕ ಮನೋವೃತ್ತಿಯನ್ನು ಹೊಂದಿರಬೇಕು. ಆಸೆಗಳನ್ನು ದಮನ ಮಾಡಬೇಕಾಗಿಲ್ಲ. ಅನಾಸಕ್ತಿ ಹಾಗೂ ಸಮತ್ವದೃಷ್ಟಿಗಳನ್ನು ಬೆಳೆಯಿಸಿಕೊಳ್ಳಬೇಕು. ಅತಿಮಾನಸ ಲೋಕದ ಕಡೆಗೆ ಮನಸ್ಸನ್ನು ಏರಿಸಬೇಕಾದರೆ ಸಮರ್ಪಣೆಯು ಪರಿಪೂರ್ಣವಾಗಬೇಕು, ಸಾಧಕನು ಭಗೀರಥನಾಗಬೇಕು ಎಂದು ಹೇಳಿದರು. ಧಾರವಾಡದ ಡಾ॥ ಅರುಣ ಕುಲಕರ್ಣಿಯವರು 'ಶ್ರೀ ಅರವಿಂದರ ಯೋಗದಲ್ಲಿ ಶ್ರೀಮಾತೆಯವರ ಸಹಯೋಗ' ಎಂಬ ವಿಷಯದ ಬಗ್ಗೆ ಮನ ತುಂಬುವಂತೆ ಮಾತನಾಡಿದರು. ತಮ್ಮ ಉಪನ್ಯಾಸದಲ್ಲಿ 'ಸಾವಿತ್ರಿ' ಮಹಾಕಾವ್ಯದ ಅನೇಕ ಸಾಲುಗಳನ್ನು ಉದ್ಧರಿಸಿದರು. ತುಮಕೂರಿನವರೇ ಆದ ಪ್ರೊ. ನಾಗೇಶ Evolution of Consciousness ಪ್ರಜ್ಞೆಯ ವಿಕಾಸ ಬಗ್ಗೆ ವೇದ ಪೂರ್ವದ ಕಾಲ–ವೇದಕಾಲ–ವೇದೋತ್ತರ ಕಾಲದಿಂದ ಜಡದಿಂದ ಮನದವರೆಗಿನ ವಿಕಾಸದ ಬಗ್ಗೆ ವಿವರಿಸಿದರಲ್ಲದೆ ಶ್ರೀ ಅರವಿಂದರು ಅದಕ್ಕೂ ಮುಂದಿನ ಅಧಿಮಾನಸ–ಅತಿಮಾನಸಗಳನ್ನು ಭೂಮಿಯ ಪ್ರಜ್ಞೆಯಲ್ಲಿ ಇಳಿಸಿದರು, ಅದಕ್ಕಾಗಿ ಅವರು ತಮ್ಮ ದೇಹವನ್ನೇ ಯಜ್ಞಾಹುತಿ ಆಗುವಂತೆ ಮಾಡಿದರು ಎಂದು ಹೇಳಿದರು. ಶ್ರೀಅಜ್ಜಪ್ಪನವರು ಶ್ರೀಅರವಿಂದರ ಬಗ್ಗೆ ಸ್ವರಚಿತ ಕವನವನ್ನು ವಾಚಿಸಿದರು. ಶ್ರೀಪುರುಷೋತ್ತಮ ಗಲಗಲಿಯವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ 'ಶ್ರೀಅರವಿಂದರ ತತ್ವ, ಸಾಹಿತ್ಯ, ಯೋಗ ಕಠಿಣವೆಂದು ಬಹು ಜನರು ಹೇಳುತ್ತಾರೆ. ಆದರೆ ಅದಕ್ಕೆ ಅವರೇ ಮಂಗನಮರಿ ಮತ್ತು ಬೆಕ್ಕಿನ ಮರಿಯ ದೃಷ್ಟಾಂತವನ್ನು ಕೊಟ್ಟಿದ್ದಾರೆ. ಮಂಗನಮರಿಯಂತೆ ನಿನ್ನ ಬಲದಿಂದಲೇ ತಾಯಿಯನ್ನು ಗಟ್ಟಿಯಾಗಿ ಹಿಡಿಯುವ ಪ್ರಯತ್ನ ಕಷ್ಟವಾಗಬಹುದು. ಆದರೆ ಬೆಕ್ಕಿನ ಮರಿಯಂತೆ ಸಂಪೂರ್ಣವಾಗಿ ತಾಯಿಗೆ ಸಮರ್ಪಣೆ ಮಾಡಿಕೊಂಡರೆ ಎಲ್ಲ ಸುಲಭ ಸಾಧ್ಯ ಎಂದು ಹೇಳಿದರಲ್ಲದೆ ಈ ಶಿಬಿರದಲ್ಲಿ ಭಾಗಿಯಾಗಲು ಬಂದವರಿಗೆ ದಿ. ವಿರುಪಾಕ್ಷಯ್ಯ ಬತ್ತಿಕೊಪ್ಪದ ಅವರ ಋಣ ಭಾರ ಸ್ವಲ್ಪ ಮಟ್ಟಿಗಾದರೂ ಕಡಿಮೆ ಮಾಡಿಕೊಳ್ಳುವ ಹಂಬಲದಿಂದ ಅಷ್ಟು ದೂರದಿಂದ ಬರಲು



ಪ್ರೇರಣೆಯಾಯಿತೆಂದು ಶ್ರೀಬತ್ತಿಕೊಪ್ಪದ ಅವರನ್ನು ನೆನಿಸಿಕೊಂಡರು. ಶ್ರೀಸೋಮಕ್ಕನವರ ಅವರು ಸ್ವಾಗತಿಸಿದರು. ಶ್ರೀಆರ್.ಎಸ್. ಮಲ್ಲೂರ ಅವರು ನಿರೂಪಣೆ ಮಾಡಿದರು. ಶಿಬಿರವು ಪ್ರಾರ್ಥನೆ–ಧ್ಯಾನಗಳಿಂದ ಆರಂಭಗೊಂಡಿತು. ಕೊನೆಗೆ ಪ್ರಸಾದ ವಿತರಣೆಯ ವ್ಯವಸ್ಥೆಯನ್ನೂ ಮಾಡಲಾಗಿತ್ತು.

ಶಿಬಿರದಲ್ಲಿ ತುಮಕೂರ, ಚಿತ್ರದುರ್ಗ, ಗೌರಿಬಿದನೂರು, ಮಕರಬ್ಬಿ, ದೊಡ್ಡಿಕೊಪ್ಪ, ಯಳವತ್ತಿ, ಗರಗ, ಧಾರವಾಡ, ವಿಜಾಪೂರ, ಹಲಸಂಗಿ, ಲೋಣಿ (ಬಿ.ಕೆ.) ಕೇಂದ್ರಗಳ ಗುರು ಬಂಧು–ಭಗಿನಿಯರು ಭಾಗವಹಿಸಿದರು. ಕರ್ನಾಟಕ ಶ್ರೀ ಅರವಿಂದ ಸೊಸಾಯಿಟಿ ಕೇಂದ್ರಗಳ ಮೇಲ್ವಿಚಾರಕರಾದ ಡಾ॥ ಜಗದೀಶ ಮಾರ್ಗದರ್ಶನ ಮಾಡಿದರು.

**ಒಪ್ಪೋಲೆ :**

**ಅಖಿಲ ಭಾರತ ಪತ್ರಿಕೆ, ನವೆಂಬರ್ 2014**

| ಪುಟ ಮತ್ತು ಸಾಲು | ತಪ್ಪು | ಒಪ್ಪು |
|---|---|---|
| 37, ಸಾಲು 5 | ಅಭಿವ್ಯಕ್ತಗೊಳಿಸಿದ | ಅಭಿವ್ಯಕ್ತಗೊಳಿಸದ |



*"Always our Captain holds the rudder well,*
*He does not sleep."*

- Sri Aurobindo

**RNI No. 22511/1971**
No. of Pages **52 + 4 (Cov. Page)**
KAR Reg No : CPMG/KA/BGS/368/2012-2014
Permitted to Post 10th of Every Month. Reg. Valid till : 31-12-2014
Licensed to Post at MBC, Bangalore GPO, Bangalore - 560 001

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.